بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّی عَلٰی رَسُوْلِهِ الْکَرِیْمِ وَعَلٰی عَبْدِهِ الْمَسِیْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 01

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 15

ವಾರ್ಷಿಕ ಶುಲ್ಕ ರೂ.500/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

23 ಏಪ್ರಿಲ್ 2020, 23 ಶಹಾದತ್ 1399 ಹಿಜರಿ ಶಮ್‌ಸಿ,
29 ಶಾಬಾನ್ 1441 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِیْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

رَبَّنَاۤ اِنَّكَ مَنْ تُدْخِلِ النَّارَ فَقَدْ اَخْزَيْتَهٗ ؕ وَمَا لِلظّٰلِمِيْنَ مِنْ اَنْصَارٍ ○

*(ಆಲಿ ಇಮ್ರಾನ್ 193)*

ಅಂದರೆ: "ನಮ್ಮ ಪ್ರಭೂ, ನೀನು ಯಾರನ್ನಾದರೂ ನರಕದಲ್ಲಿ ಪ್ರವೇಶಿಸುವಂತೆ ಮಾಡಿದರೆ, ಅವನನ್ನು ನೀನು ಖಂಡಿತವಾಗಿಯೂ ನಿಂದ್ಯಗೊಳಿಸಿದೆ. ದುಷ್ಕರ್ಮಿಗಳಿಗೆ ಯಾರೂ ಸಹಾಯಕನಿಲ್ಲ.

**ಮಾ ಕಾನಲ್ಲಾಹು ಮುಅಝ್ಝಿಬಹುಮ್ ವಹುಮ್ ಯಸ್ತಗ್‌ಫಿರೂನ್. (ಅಲ್‌ಅನ್‌ಫಾಲ್:34)**

**ನೀವು ದೈವಿಕ ಶಿಕ್ಷೆಯಿಂದ ರಕ್ಷಣೆ ಬಯಸುವುದಾದರೆ, ಪಾಪ ವಿಮುಕ್ತಿಗಾಗಿ ಅತ್ಯಧಿಕ ಪ್ರಾರ್ಥಿಸಿರಿ.**

**ನಾನು ನಿಮಗೆ ಇಂದು ಮನವರಿಕೆ ಮಾಡಬಯಸುತ್ತೇನೆ. ಯಾವ ಜನರು ಆಪತ್ತುಗಳು ಎರಗುವ ಮೊದಲು ಪ್ರಾರ್ಥಿಸುತ್ತಾರೆ. ಪಾಪ ವಿಮುಕ್ತಿ ಬಯಸುತ್ತಾರೆ. ದಾನಗಳನ್ನು ನೀಡುತ್ತಾರೆ. ಅಲ್ಲಾಹನು ಅವರ ಮೇಲೆ ಕರುಣೆ ತೋರುತ್ತಾನೆ ಮತ್ತು ದೈವಿಕ ಶಿಕ್ಷೆಯಿಂದ ರಕ್ಷಿಸುತ್ತಾನೆ.**

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

**ಇಸ್ತಿಗ್‌ಫಾರ್ (ಪಾಪವಿಮುಕ್ತಿಗಾಗಿ ಪ್ರಾರ್ಥನೆ) ದೈವಿಕ ಶಿಕ್ಷೆ ಮತ್ತು ಭಯಂಕರವಾದ ಅಪತ್ತುಗಳಿಂದ ರಕ್ಷಣಾತ್ಮಕವಾಗಿ ಕಾಪಾಡುತ್ತದೆ.**

ಪ್ಲೇಗ್ ಸ್ವಯಂ ಒಂದು ಘೋರ ಶಿಕ್ಷೆಯಾಗಿದೆ. ಅದರೊಂದಿಗೆ ಕಠಿಣವಾದ ಕಾನೂನುಗಳು ಅದು ಇನ್ನೊಂದು ಶಿಕ್ಷೆಯಾಗಿದೆ. ಅದು ರೋಗಕ್ಕಿಂತಲೂ ಹೆಚ್ಚಾಗಿದೆ. ತಾಯಿಯಿಂದ ಮಗುವನ್ನು ಪ್ರತ್ಯೇಕಗೊಳಿಸಲಾಗುತ್ತದೆ ಮತ್ತು ಮನೆಯನ್ನು ಖಾಲಿ ಮಾಡಲು ನಿರ್ದೇಶನ ನೀಡುತ್ತಾರೆ. ಈ ರೋಗ ಮತ್ತು ಈ ಕಾನೂನುಗಳ ಬಗ್ಗೆ ವಿಚಾರಿಸಿದಾಗ ನನ್ನ ಮನಸ್ಸಿನಲ್ಲಿ ಒಂದು ವ್ಯಾಕುಲತೆ ಉಂಟಾಯಿತು. ನಾನು ತಹಜ್ಜುದ್ ನಮಾಝಿನಲ್ಲಿ ಆ ಕುರಿತು ಪ್ರಾರ್ಥಿಸಿದಾಗ ದೇವವಾಣಿಯಾಯಿತು. **"ಇನ್ನಲ್ಲಾಹ ಲಾ ಯುಗಯ್ಯಿರು ಮಾ ಬಿಖೌಮಿನ್ ಹತ್ತಾ ಯುಗಯ್ಯಿರು ಮಾ ಬಿಅನ್‌ಫುಸಿಹಿಮ್"** ಈಗ ನೆನಪಿಗೆ ಬರುತ್ತಿದೆ. ಆ ದೇವವಾಣಿ ಆಗಿದ್ದು – ಕೌನ್ ಕಹ್ ಸಕ್ತಾ ಹೈ ವ ಬಿಜ್ಲಿ ಆಸ್ಮಾನ್ ಸೇ ಮಿತ್‌ಗಿರ್" ಬಹುಶಃ ಆ ಕುರಿತೆ ಆಗಿರಬೇಕು.

ನಾನು ನಿಮಗೆ ಇಂದು ಮನವರಿಕೆ ಮಾಡಬಯಸುತ್ತೇನೆ. ಯಾವ ಜನರು ಆಪತ್ತುಗಳು ಅವತರಿಸುವ ಮೊದಲು ಪ್ರಾರ್ಥಿಸುತ್ತಾರೊ. ಪಾಪ ವಿಮುಕ್ತಿ ಬಯಸುತ್ತಾರೆ. ದಾನಗಳನ್ನು ಮಾಡುತ್ತಾರೆ. ಅಲ್ಲಾಹನು ಅವರ ಮೇಲೆ ಕರುಣೆ ತೋರುತ್ತಾನೆ ಮತ್ತು ದೈನಕ ಶಿಕ್ಷೆಯಿಂದ ರಕ್ಷಿಸುತ್ತಾನೆ. ನನ್ನ ಈ ಮಾತುಗಳನ್ನು ಕಥೆಗಳ ರೀತಿಯಲ್ಲಿ ತಿಳಿಯಬೇಡಿರಿ. ನಾನು ಅಲ್ಲಾಹನ ಉಪದೇಶ ರೀತಿಯಲ್ಲಿ ಹೇಳುತ್ತಿರುವೆನು. ತಮ್ಮ ಪರಿಸರ ಕುರಿತು ಯೋಚಿಸಿರಿ. ನೀವು ಮತ್ತು ನಿಮ್ಮ ಸಂಗಡಿಗರಿಗೂ ಪ್ರಾರ್ಥನೆಯಲ್ಲಿ ತೊಡಗಿಸಿಕೊಳ್ಳಲು ಹೇಳಿರಿ. ಇಸ್ತಗ್‌ಫಾರ್ ದೈವಿಕ ಶಿಕ್ಷೆ ಮತ್ತು ಭಯಂಕರವಾದ ಆಪತ್ತುಗಳಿಂದ ರಕ್ಷಣಾತ್ಮಕವಾಗಿ ಕಾಪಾಡುತ್ತದೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳಿದನು. **"ಮಾ ಕಾನಲ್ಲಾಹು ಮುಅಝ್ಝಿಬಹುಮ್ ವಹುಮ್ ಯಸ್ತಗ್‌ಫಿರೂನ್".** (ಅಲ್–ಅನ್ಫಾಲ್–34) ಆದುದರಿಂದ ನೀವು ದೈವಿಕ ಶಿಕ್ಷೆಯಿಂದ ರಕ್ಷಣೆ ಬಯಸುವುದಾದರೆ, ಅತ್ಯಧಿಕವಾಗಿ ಅಸ್ತಗ್‌ಫಾರ್ ಪಠಿಸಿರಿ.

ಸೊಂಕಿತರನ್ನು ಪ್ರತ್ಯೇಕ ಇರಿಸುವ ಹಕ್ಕು ಸರಕಾರಕ್ಕಿದೆ. ಬೇರ್ಪಟ ಜನರು ಗೋರಿವಾಸ ಅನುಭವಿಸಿದಂತಾಗುವುದು. ಬಡವ ಬಲ್ಲಿದ, ಸ್ತ್ರೀ ಪುರುಷ, ವೃದ್ಧರು, ಯುವಕರೆಂಬ ಯಾವ ಭೇದಭಾವ ಮಾಡುವುದಿಲ್ಲ. ಆದುದರಿಂದ ಬಯಸಿ, ಬಯಸದೆ, ನಿಮ್ಮ ಯಾವುದೇ ಸ್ಥಳದಲ್ಲಿ ಪ್ಲೇಗ್ ಹಬ್ಬಿದರೆ ನೀವು ಅಲ್ಲಿ ಇರುವುದಾದರೆ ನಿಮಗೆ ಉಪದೇಶ ನೀಡುತ್ತೇನೆ. ಸರಕಾರದ ಕಾನೂನುಗಳನ್ನು ಪಾಲಿಸುವವರಲ್ಲಿ ಮೊದಲು ನೀವು ಆಗುವಿರಿ.

ಹೆಚ್ಚಿನ ಸ್ಥಳಗಳಲ್ಲಿ ಪೋಲೀಸರೊಂದಿಗೆ ವಿರುದ್ಧವಾಗಿ ನಡೆದುಕೊಂಡಿರಿ ಎಂದು ಕೇಳಿರುತ್ತೇನೆ. ನನ್ನ ದೃಷ್ಟಿಯಲ್ಲಿ ಸರಕಾರದ ಕಾನೂನುಗಳ ವಿರೋಧ ಮಾಡುವುದು ದಂಗೆಯಾಗಿದೆ. ಅದು ಅಪಾಯಕರ ಅಪರಾಧವಾಗಿದೆ. ಹೌದು ನಿಸ್ಸಂಶಯವಾಗಿ ಸರಕಾರದ ಕರ್ತವ್ಯವಾಗಿದೆ. ಅವರು ನೀತಿವಂತ, ಸಹಕಾರ

*(ಪುಟ ಸಂಖೆ 07 ರಲ್ಲಿ ಮುಂದುವರಿಸಲಾಗಿದೆ)*

**ವಿಶೇಶ ಸೂಚನೆ:**

**ಹುಝೂರ್(ಅಬಿಅ) ರವರು ನಿಮ್ಮೆಲ್ಲರ ಪತ್ರಗಳನ್ನು ನೋಡಿ ನಿಮಗೋಸ್ಕರ ದುಆ ಮಾಡುತ್ತಿದ್ದಾರೆ.**

ಹುಝೂರ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಅವರ ಬಳಿ ದುಆ ಕೊರಲು ಪತ್ರಗಳನ್ನು ಬರೆಯುವವರ ಗಮನಕ್ಕೆ ತಿಳಿಸುವುದೇನೆಂದರೆ:

ನಿಮ್ಮೆಲ್ಲರ ಪತ್ರಗಳನ್ನು ಹುಝೂರ್ ಅನ್ವರ್‌ರವರ ಸನ್ನಿಧಿಯಲ್ಲಿ ಸಾಮಾನ್ಯ ರೀತಿಯಲ್ಲಿ ಪ್ರಸ್ತುತ ಪಡಿಸಲಾಗುತ್ತಿದೆ. ಆದರೆ, ಕರೋನ ವೈರಸ್ ಸಾಂಕ್ರಮಿಕ ರೋಗ ಚಾಲ್ತಿಯಲ್ಲಿರುವ ಕಾರಣ, ಪತ್ರಗಳಿಗೆ ಉತ್ತರ ನೀಡುವ ಸಂಖ್ಯೆ ಸಾಮಾನ್ಯವಾಗಿ ಕಡಿಮೆ ಮಾಡಲಾಗಿದೆ. ಆದ್ದರಿಂದ ಪ್ರತಿಯೊಂದು ಪತ್ರಗಳಿಗೆ ಪ್ರತ್ಯೇಕವಾಗಿ ಉತ್ತರಿಸಲು ಸಾಧ್ಯವಿಲ್ಲ. ಹುಝೂರ್(ಅಬಿಅ) ರವರು ನಿಮ್ಮೆಲ್ಲರ ಪತ್ರಗಳನ್ನು ನೋಡಿ ನಿಮಗೋಸ್ಕರ ದುಆ ಮಾಡುತ್ತಿದ್ದಾರೆ. ಅಲ್ಲಾಹನು ಎಲ್ಲರಿಗೂ ಕರುಣಿಸಲಿ ಮತ್ತು ದಯಪಾಲಿಸಲಿ. ಈ ಸಾಂಕ್ರಮಿಕ ರೋಗದಿಂದ ಹಾಗೂ ಇನ್ನಿತರ ತೊಂದರೆಗಳಿಂದ ಪ್ರತಿಯೊಬ್ಬರನ್ನು ಸಂರಕ್ಷಿಸಲಿ ಮತ್ತು ಸದಾ ನಿಮ್ಮ ಮೇಲೆ ಅವನ ಪ್ರೀತಿಯ ದೃಷ್ಟಿ ಇರಲಿ. **ಆಮೀನ್.**

**(ಮುನೀರ್ ಅಹ್ಮದ್ ಜಾವೇದ್, ಪ್ರೈವೇಟ್ ಸೆಕ್ರೇಟರಿ)**

# ಜುಮುಅ ಖುತ್ಬ

**“ಲೋಕದಲ್ಲಿ ಒಬ್ಬ ಮುನ್ನೆಚ್ಚರಿಕೆ ನೀಡುವವನು ಆಗಮಿಸಿದನು. ಆದರೆ ಲೋಕ ಅವನನ್ನು ಅಂಗೀಕರಿಸಲಿಲ್ಲ. ಆದರೆ ಅಲ್ಲಾಹನು ಅವನನ್ನು ಅಂಗೀಕರಿಸುವನು ಮತ್ತು ಬಹಳ ತೀವ್ರವಾದ ಆಕ್ರಮಣಗಳ ಮೂಲಕ ಅವನ ಸತ್ಯತೆಯನ್ನು ಪ್ರಕಟಿಸುವನು.”**

---

**ಭೂಮಿ ಮತ್ತು ಆಕಾಶವನ್ನು ಸೃಷ್ಟಿಸಿರುವಂತಹ ಅಲ್ಲಾಹನು ಈ ವಿಷಯವೂ ಸಹ ಸ್ಪಷ್ಟಿಸಿದ್ದಾನೆ...... ನೀನು ಹಿಂದುಗಳಿಗೆ ಕೃಷ್ಣನಾಗಿ ಹಾಗೂ ಮುಸ್ಲಿಮರಿಗೆ ಮತ್ತು ಕ್ರೈಸ್ತರಿಗೆ ಮಸೀಹೆ ಮೌದನ್ನಾಗಿ ಅವತರಿಸಿರುವುದು.**

---

**ನನ್ನೊಂದಿಗೆ ಜಗಳವಿದ್ದರೆ ಇದರಲ್ಲಿ ಹೆಚ್ಚಾಗಿ ಮುಂದಾಗ ಬೇಡಿರೀ ಮತ್ತು ಇಸ್ಲಾಮ್ ಧರ್ಮಕ್ಕೆ ಹಾನಿ ಉಂಟು ಮಾಡುವಂತಹ ಕೆಲಸ ಮಾಡಬೇಡಿರೀ.**

---

**“ಅಲ್ಲಾಹನು ನನ್ನನ್ನು ನಿಯುಕ್ತಿಗೊಳಿಸಿದ ಉದ್ದೇಶವೇನೆಂದರೆ, ಅದು ಅಲ್ಲಾಹನ ಮತ್ತು ಅವನ ಸೃಷ್ಟಿಗಳ ಮಧ್ಯೆ ಉಂಟಾದ ಉದಾಸೀನತೆಯನ್ನು ದೂರ ಮಾಡಿ ಪ್ರೀತಿ ಮತ್ತು ನಿಷ್ಠೆಯ ಸಂಬಂಧ ಪುನರ್‌ಸ್ಥಾಪಿಸುವುದಾಗಿದೆ. ಈ ಸತ್ಯವನ್ನು ಬಹಿರಂಗಪಡಿಸಿ ಧಾರ್ಮಿಕ ಯುದ್ಧಗಳನ್ನು ಕೊನೆಗಾಣಿಸಿ ಮೈತ್ರಿಯ ಅಡಿಪಾಯ ಹಾಕುವುದಾಗಿದೆ. ಧಾರ್ಮಿಕ ಸಾಕ್ಷ್ಯಗಳು ಇಂದು ಲೋಕದಿಂದ ಮರೆಮಾಚಲಾಗಿದೆ. ಅದನ್ನು ಎತ್ತಿ ಹಿಡಿಯಬೇಕಾಗಿದೆ ಮತ್ತು ಆಧ್ಯಾತ್ಮಿಕತೆಯು ಐಹಿಕ ಅಂಧಕಾರಗಳಲ್ಲಿ ಮುಳುಗಿ ಹೋಗಿದೆ. ಅದನ್ನು ಮೇಲೆತ್ತಿ ಅಲ್ಲಾಹನ ಶಕ್ತಿಗಳನ್ನು ಮಾನವನಲ್ಲಿ ಪ್ರೇರೇಪಿಸಿ ಪ್ರಾರ್ಥನೆಯ ಮೂಲಕ ಗಮನ ಸೆಳೆದು ಬಹಿರಂಗಗೊಳ್ಳುತ್ತವೆ. ಆಡಂಬರಕ್ಕೆ ಮಾತ್ರವಲ್ಲ. ನಿಜವಾದ ಆ ಸ್ಥಿತಿಯನ್ನು ವಿವರಸಬೇಕಾಗಿದೆ ಎಲ್ಲಕ್ಕಿಂತ ಹೆಚ್ಚಾಗಿ ಬಹುದೇರಾಧನೆಯಿಂದ. ನಿಜವಾದ ಪ್ರಕಾಶಭರಿತ ಏಕದೇವಾ ಭಾವನೆ ಕಾಣದಾಗಿದೆ ಅದನ್ನು ಲೋಕದಲ್ಲಿ ಪುನ: ಶಾಶ್ವತವಾಗಿ ಸ್ಥಾಪಿಸಬೇಕಾಗಿದೆ. ಇದೆಲ್ಲ ನನ್ನ ಶಕ್ತಿಯಿಂದ ಆಗುವಂತಹದ್ದಲ್ಲ. ಬದಲು ಆಕಾಶ ಭೂಮಿಗಳ ಸೃಷ್ಟಿಕರ್ತನಾದ ಅಲ್ಲಾಹನ ಶಕ್ತಿಯಿಂದ ಸಾಧ್ಯವಾಗುವುದು. ನಾನು ಕಾಣುತ್ತಿದ್ದೇನೆ. ಒಂದೆಡೆ ಅಲ್ಲಾಹನು ತನ್ನ ಕೈಯಿಂದ ನನ್ನನ್ನು ತರಬೇತಿಗೊಳಿಸಿ ತನ್ನ ದಿವ್ಯವಾಣಿಯ ಭಾಗ್ಯವನ್ನು ನೀಡಿ ನನ್ನ ಹೃದಯದಲ್ಲಿ ಈ ಉತ್ಸಾಹ ತುಂಬಿದ್ದಾನೆ. ಆ ಕಾರಣದಿಂದ ಲೋಕಸುಧಾರಣೆಗಾಗಿ ನಾನು ನಿಂತಿರುತ್ತೇನೆ. ಇನ್ನೊಂದೆಡೆ ನನ್ನ ಮಾತಿಗೆ ಮನ್ನಿಸಿ ಸಿದ್ಧರಾಗುವಂತಹ ಹೃದಯಗಳು ಸಿದ್ಧಪಡಿಸಿದ್ದಾನೆ. ನಾನು ನೋಡುತ್ತಿದ್ದೇನೆ. ಯಾವಾಗಿನಿಂದ ಅಲ್ಲಾಹನು ನನ್ನನ್ನು ನಿಯುಕ್ತಗೊಳಿಸಿ ಲೋಕಕ್ಕೆ ಕಳುಹಿಸಿರುವನೋ ಅಂದಿನಿಂದ ಲೋಕದಲ್ಲಿ ಒಂದು ಮಹೋನ್ನತವಾದ ಕ್ರಾಂತಿ ಉಂಟಾಗಿದೆ."**

---

**ನಾನು ಕಾಣುತ್ತಿದ್ದೇನೆ. ಒಂದೆಡೆ ಅಲ್ಲಾಹನು ತನ್ನ ಕೈಯಿಂದ ನನ್ನನ್ನು ತರಬೇತಿಗೊಳಿಸಿ ತನ್ನ ದಿವ್ಯವಾಣಿಯ ಭಾಗ್ಯವನ್ನು ನೀಡಿ ನನ್ನ ಹೃದಯದಲ್ಲಿ ಈ ಉತ್ಸಾಹ ತುಂಬಿದ್ದಾನೆ. ಆ ಕಾರಣದಿಂದ ಲೋಕಸುಧಾರಣೆಗಾಗಿ ನಾನು ನಿಂತಿರುತ್ತೇನೆ.**

---

**ಯಾವಾಗ ಜನರು ಅಲ್ಲಾಹನ ಮಾರ್ಗವನ್ನು ಮರೆತುಬಿಟ್ಟಾಗ ಮತ್ತು ಏಕದೇವತ್ವ ಹಾಗೂ ಸತ್ಯವನ್ನು ಬಿಟ್ಟುಬಿಟ್ಟಾಗ ಅಲ್ಲಾಹನು ತನ್ನ ಕಡೆಯಿಂದ ಒಬ್ಬ ಸುಧಾರಕರನ್ನು ತನ್ನ ದಿವ್ಯವಾಣೀಯ ಭಾಗ್ಯವ ನೀಡಿ ಆದಮ್ ಸಂತತಿಯ ಮಾರ್ಗದರ್ಶಕನಾಗಿ ಕಳುಹಿಸುವನು. ಆಗ ಪಥಭ್ರಷ್ಟರಿಗೆ ಸನ್ಮಾರ್ಗ ದೊರೆಯುವುದು. ಇದರ ಮರ್ಮವೇನೆಂದರೆ ಲೋಕದ ಸೃಷ್ಟಿಕರ್ತನಾದ, ಲೋಕವನ್ನು ನಡೆಸುವವನು ಅವನೇ. ಈ ಲೋಕದ ಉದ್ಧಾರಕ್ಕಾಗಿ ತನ್ನ ಅನುಗ್ರಹ ಶಕ್ತಿಯಿಂದ ಜನರನ್ನು ಮಾರ್ಗದರ್ಶನ ನೀಡುವನು.**

---

**ಈ ವೈರಸ್, ಲೋಕವನ್ನು ದೇವನ ಕಡೆಗೆ ತಿರುಗುವ ಬಗ್ಗೆ ಯೋಚಿಸಲು ನಿರ್ಬಂಧಿಸಿದೆ. ಆದರೆ ನೈಜ ದೇವನು ಮತ್ತು ಜೀವಂತ ದೇವನು ಇಸ್ಲಾಮಿನ ದೇವನು ಮಾತ್ರವಾಗಿದ್ದಾನೆ. ಅವನು ತನ್ನ ಕಡೆಗೆ ಬರುವವರಿಗೆ ಮಾರ್ಗವನ್ನು ತೋರಿಸುವುದಾಗಿ ವಾಗ್ದಾನ ಮಾಡಿದ್ದಾನೆ. ಇಂತಹ ಪರಿಸ್ಥಿತಿಯಲ್ಲಿ ನಾವು ನಮ್ಮನ್ನು ಸುಧಾರಣೆ ಮಾಡಿಕೊಳ್ಳುವ ಆವಶ್ಯಕತೆ ಇದೆ.**

---

**ಇಂದು ಹರಡಿರುವ ಸಾಂಕ್ರಮಿಕ ರೋಗ ಕೊರೋನದಿಂದ ಸ್ವತಃ ಉಳಿದಿರಲು ಹಾಗೂ ಬೇರೆಯವರನ್ನೂ ಸಹ ಉಳಿಸಲು ಸಂರಕ್ಷಣಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಲು ಹಾಗೂ ದುಆ ಮಾಡುತ್ತಿರುವುದಕ್ಕೆ ಉಪದೇಶಗಳು**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **‘ಮಸ್ಜಿದ್ ಮುಬಾರಕ್’** ನಿಂದ **20–03–2020** ರಂದು ನೀಡಿದ **ಜುಮುಅ ಖುತ್ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ـ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ

اِيَّاكَ نَعْبُدُ وَاِيَّاكَ نَسْتَعِيْنُ ـ اِهْدِنَا الصِّرَاطَ الْمُسْتَقِيْمَ ـ

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

ಮೂರು ದಿನಗಳ ನಂತರ ಮಾರ್ಚ್ 23, ಆ ದಿನ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬೈಅತ್ ಪಡೆಯಲು ಪ್ರಾರಂಭಿಸಿದ ದಿನವಾಗಿದೆ. ಅವರು ತಾನು ಮಸೀಹ್ ಮೌಊದ್ ಎಂದು ವಾದಿಸುವುದರೊಂದಿಗೆ ಅಹ್ಮದಿಯಾ ಜಮಾಅತಿಗೆ ಅಸ್ತಿಭಾರ ಹಾಕಲಾಯಿತು. ಆ ದಿನವನ್ನು ಯೌಮೆ ಮಸೀಹ್ ಮೌಊದ್ ಎಂದು ಜಮಾಅತ್‌ನಲ್ಲಿ ಆಚರಿಸಲಾಗುತ್ತದೆ. ಆ ದಿನ ಜಲ್ಸಗಳನ್ನು ಸಹ ನಡೆಸಲಾಗುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಾದ ಮತ್ತು ಅವರು ಆಗಮಿಸಿದ ಉದ್ದೇಶ ಲಕ್ಷ್ಯದ ಬಗ್ಗೆ ಸಹ ವಿವರಿಸಲಾಗುತ್ತದೆ. ಆದುದರಿಂದ ಈ ವಿಷಯಕ್ಕೆ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸ್ವತಃ ಬರೆದ ಕೆಲವು ಉಲ್ಲೇಖಗಳನ್ನು ನಿಮ್ಮ ಮುಂದೆ ಇರಿಸುವೆನು.

ಈ ವರ್ಷ ಬಹುತೇಕ ದೇಶಗಳಲ್ಲಿ ಮತ್ತು ಸ್ಥಳಗಳಲ್ಲಿ ವೈರಸಿನ ಮಹಾಮಾರಿ ಹಬ್ಬಿದೆ. ಆದುದರಿಂದ ಜಲ್ಸಗಳು ನಡೆಯಲಾರವು. ಆದುದರಿಂದ ನನ್ನ ಖುತ್‌ಬವಲ್ಲದೆ ಎಂ.ಟಿ.ಎ.ದಲ್ಲೂ ಇದಕ್ಕೆ ಸಂಬಂಧಿಸಿ ಕಾರ್ಯಕ್ರಮಗಳು ಪ್ರಸಾರಗೊಳ್ಳುವುವು. ಪ್ರತಿಯೊಬ್ಬ ಅಹ್ಮದಿ ಅವುಗಳನ್ನು ತಮ್ಮ ಮನೆಗಳಲ್ಲಿ ಮಕ್ಕಳೊಂದಿಗೆ ಆಲಿಸಲು ಪ್ರಯತ್ನಿಸಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದಾಸರಾಗಿ ಅವರ ಕೆಲಸವನ್ನು ಮುಂದುವರಿಸಲು ಅವರ ಧರ್ಮವನ್ನು ಲೋಕದಲ್ಲಿ ಹರಡಲು ಅಲ್ಲಾಹನಿಂದ ನಿಯೋಜಿತರಾದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೇಳುತ್ತಾರೆ:

"ನಾನು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಮೇಲೆ ದರೂದ್ ಕಳುಹಿಸುತ್ತೇನೆ. ಅಲ್ಲಾಹನು ನಿಮಗಾಗಿಯೇ ಈ ಜಮಾಅತ್ತನ್ನು ಸ್ಥಾಪಿಸಿದ್ದಾನೆ. ಮತ್ತು ಈ ವಿಜಯಗಳು ನಿಮ್ಮ ಅನುಗ್ರಹದ ಫಲದಿಂದಲೇ ಸಾಧ್ಯವಾಯಿತು." ಮತ್ತೆ ಹೇಳುತ್ತಾರೆ "ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇದೇ ನನ್ನ ವಿಶ್ವಾಸವೂ ಧರ್ಮವೂ ಆಗಿದೆ, ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುತ್ತಾ ಅವರ ಹೆಜ್ಜೆ ಗುರುತುಗಳಲ್ಲಿ ನಡೆಯುವ ಮೂಲಕ ಹೊರತು ಯಾವುದೇ ಮನುಷ್ಯ ಯಾವುದೇ ಆಧ್ಯಾತ್ಮಿಕ ಪದವಿಯನ್ನಾಗಲಿ ಅನುಗ್ರಹವನ್ನಾಗಲಿ ಗಳಿಸಲಾರ. (ಲೆಕ್ಚರ್ ಲುಧಿಯಾನ, ರೂಹಾನಿ ಖಝಾಯಿನ್ ಸಂಪುಟ–20, ಪುಟ–267)

ಹಝ್ರತ್ ಮಸೀಹ್ ಮೌಊದ್[ಅ] ಅವರು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಆಧ್ಯಾತ್ಮಿಕ ಅನುಗ್ರದಿಂದ ಗಳಿಸಿದ ಲಾಭದ ಕಾರಣ ಅವರನ್ನು ಅಲ್ಲಾಹನು ಲೋಕೋದ್ಧಾರಕ್ಕಾಗಿ ಕಳುಹಿಸಿದ್ದನು. ಇಸ್ಲಾಮಿನ ಘನತೆ ಮತ್ತು ಗೌರವವನ್ನು ಪುನಃ ಲೋಕದಲ್ಲಿ ಸ್ಥಾಪಿಸಲು ಕಳುಹಿಸಿದನು. ಹೀಗಾಗಿ ಹಝ್ರತ್ ಮಸೀಹ್ ಮೌಊದ್[ಅ] ಒಂದು ಕಡೆ ಹೀಗೆ ಹೇಳುತ್ತಾರೆ:

**"ವರ್‌ಸಲನಿ ರಬ್ಬಿ ಲಿಇಸ್ಲಾಹಿ ಖಲ್‌ಖಿಹಿ"** ಅಂದರೆ ಅಲ್ಲಾಹನು ನನ್ನನ್ನು ಕಳುಹಿಸುವ ಮೂಲ ಉದ್ದೇಶ ಸೃಷ್ಠಿಯ ಉದ್ಧಾರ ಆಗಿದೆ." (ಎಜಾಝುಲ್ ಮಸೀಹ್ ಝಮೀಮ ನುಝೂಲುಲ್ಲ ಮಸೀಹ್, ರೂಹಾನಿ ಖಝಾಯಿನ್ ಸಂಪುಟ–19, ಪುಟ–178)

ಹಝ್ರತ್ ಮಸೀಹ್ ಮೌಊದ್[ಅ] ಅವರು ತಮ್ಮ ಆಗಮನದ ಬಗ್ಗೆ ಇನ್ನೊಂದು ಸ್ಥಳದಲ್ಲಿ ಹೇಳುತ್ತಾರೆ:

"ನಾನು ಪದೇ ಪದೇ ಹೇಳುವೆನು. ನಾನು ಈ ವಿಷಯ ಪ್ರಕಟಿಸದಿರಲಾರೆನು – ನಾನು ಅನುಯೋಜ್ಯವಾದ ಕಾಲದಲ್ಲಿ ಜನರ ಸುಧಾರಣೆಗೋಸ್ಕರ ಕಳುಹಿಸಲ್ಪಟ್ಟಿರುವೆನು. ಧರ್ಮವನ್ನು ತಾಜಾ ಆಗಿ ಹೃದಯಗಳಲ್ಲಿ ಸ್ಥಾಪಿಸಲು ನಾನು ಕಳುಹಿಸಲ್ಪಟ್ಟಿರುವೆನು. ಕಲೀಮುಲ್ಲಾಹ್ (ಮೂಸಾ ಅಲೈಹಿಸ್ಸಲಾಮ್)ರ ನಂತರ ಯಾರನ್ನು ದೇವ ನಿಯೋಜಿತನನ್ನಾಗಿ ಕಳುಹಿಸಲಾಯಿತೋ, ಯಾರ ಆತ್ಮವು ಹೆರೋದನ ರಾಜ್ಯಭಾರದ ಕಾಲದಲ್ಲಿ ಅನೇಕ ಕಷ್ಟಗಳನ್ನು ಅನುಭವಿಸಿ ಅನಂತರ ಆಕಾಶದ ಕಡೆಗೆ ಎತ್ತಲ್ಪಟ್ಟಿತೋ ಅವರ ಹಾಗೆ ನಾನು ಕಳುಹಿಸಲ್ಪಟ್ಟಿರುವೆನು. (ಫತಹ್ ಇಸ್ಲಾಮ್, ರೂಹಾನ ಖಝಾಯಿನ್, ಸಂಪುಟ–3, ಪುಟ–7–8)

ಮತ್ತೊಂದು ಕಡೆ ಮಸೀಹ್ ಮೌಊದ್ ಆಗಮಿಸುವ ಬಗ್ಗೆ ರಸುಲುಲ್ಲಾಹ್[ಸ] ಅವರ ಭವಿಷ್ಯವಾಣಿಯ ಬಗ್ಗೆ ಅದು ತನ್ನ ಕಾಲಾವಧಿಯಲ್ಲಿ ವ್ಯಕ್ತವಾಗಿದೆ ಎಂದು ಪ್ರಸ್ತಾಪಿಸುತ್ತಾ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ:

"ಓ ನನ್ನ ಸಹೋದರರೇ! ಅಲ್ಲಾಹನಿಗೋಸ್ಕರ ಒತ್ತಾಯ ಮಾಡಬೇಡಿರೀ. ನಾನು ಇಂತಹ ವಿಷಯಗಳನ್ನು ಪ್ರಸ್ತಾಪಿಸುವುದು ಅವಶ್ಯಕವಾಗಿತ್ತು ಅದನ್ನು ತಿಳಿದುಕೊಳ್ಳುವುದರಲ್ಲಿ ನಿಮ್ಮಲ್ಲಿ ತಪ್ಪಾಗಿತ್ತು. ನೀವು ನನ್ನ ಆಗಮದ ಮುಂಚೆಯೇ ಉತ್ತಮ ನಡವಳಿಕೆ ಹೊಂದಿದ್ದರೆ, ನನ್ನ ಆಗಮನದ ಅವಶ್ಯಕತೆಯೇ ಏನಾಗಿತ್ತು. ನಾನು ಇದಕ್ಕು ಮುಂಚೆ ಹೇಳಿರುವೆನು ನಾನು ಹೇಗೆ ಮಸೀಹ್ ಇಬ್ನೆ ಮರಿಯಮ್ (ಈಸ ಮಸೀಹ್) ಯಹೂದಿಯರ ಸುಧಾರಕ್ಕಾಗಿ ಆಗಮಿಸಿದ್ದನೋ ಅದೇ ರೀತಿ ನಾನು ಈ ಉಮ್ಮತ್ತಿಗೆ ಇಬ್ನೆ ಮರಿಯಮ್ ಆಗಿ ಆಗಮಿಸಿರುವೆನು. ಆದ ಕಾರಣದಿಂದ ನಾನು ಅವರ ಪ್ರತಿರೂಪವಾಗಿದ್ದೇನೆ (ಮಸೀಲ್). ಮತ್ತು ನನಗೆ ಅವರಿಗೆ ವಹಿಸಿದಂತಹ ಕೆಲಸವೂ ವಹಿಸಲಾಗಿದೆ. ಈಸ ಮಸೀಹ್ ಆಗಮಿಸಿ ಯಹೂದಿಯರನ್ನು ಅನೇಕ ತಪ್ಪುಗಳಿಂದ ಹಾಗೂ ತಪ್ಪು ಕಲ್ಪನೆಗಳಿಂದ ಮುಕ್ತಗೊಳಿಸಿದರು. ಅದಲ್ಲದೆ ಯಹೂದಿಯರು ಈಲಿಯ ನಬಿ ಪುನಃ ಲೋಕದಲ್ಲಿ ಆಗಮಿಸುವರು ಎಂಬ ನಿರೀಕ್ಷೆಯಲ್ಲಿದ್ದರು ಅದೇ ರೀತಿ ಪ್ರಸ್ತುತ ಕಾಲದಲ್ಲಿ ಮುಸ್ಲಿಮರು ಮಸೀಹ್ ಇಬ್ನೆ ಮರಿಯಮ್ ಅಲ್ಲಾಹನ ಕಡೆಯಿಂದ ಪ್ರವಾದಿ ಆಗಿ ಆಗಮಿಸುತ್ತಾರೆ ಎಂದು ನಿರೀಕ್ಷಿಸುತ್ತಿದ್ದಾರೆ. ಆಗ ಈಸ ಮಸೀಹ್ ಹೀಗೆ ಹೇಳಿ ಜನರನ್ನು ತಪ್ಪು ಕಲ್ಪನೆಯಿಂದ ಮುಕ್ತಿಗೊಳಿಸಿದರು ಈಗ ಈಲಿಯ ನಬೀ ಆಕಾಶದಿಂದ ಆಗಮಿಸುವುದಿಲ್ಲ ಝುಕರಿಯಾರ ಪುತ್ರ ಯಹ್‌ಯ ಈಲಿಯ ಆಗಿರುವನು. ಯಾರು ಸ್ವೀಕರಿಸಲು ಬಯಸುವರೋ ಬಯಸಿರಿ. ಆ ಹಳೆಯ ತಪ್ಪನ್ನು ದೂರಗೊಳಿಸಿದರು ಮತ್ತು ಯಹೂದಿಯರಿಂದ ಅವರು ಸ್ವತಃ ಧರ್ಮಭ್ರಷ್ಟ ಹಾಗೂ ಗ್ರಂಥಗಳ ವಿರೋಧಿ ಎಂದೆನಿಸಿಕೊಂಡರು ಆದರೆ ಸತ್ಯ ಏನಾಗಿತ್ತು ಅದನ್ನು ವ್ಯಕ್ತಪಡಿಸಿದರು. ಅದೇ ಪರಿಸ್ಥಿತಿ ಅವರ ಪ್ರತಿರೂಪ ಆಗಿದ್ದವನದ್ದಾಯಿತು. ಮತ್ತು ಈಸ ಮಸೀಹರ ಹಾಗೆ ಅವರಿಗೂ ಸಹ ಧರ್ಮಭ್ರಷ್ಟ ಎಂಬ ಬಿರುದು ನೀಡಲಾಯಿತು. ಈ ಹೊಂದಾಣಿಕೆಯು ಇಂದು ಉತ್ತಮ ದರ್ಜೆಯುದ್ದಲ್ಲವೇ?' (ಇಝಲೇ ಔಹಾವ್, ಭಾಗ–2, ರೂಹಾನಿ ಖಝಾಯಿನ್ ಸಂಪುಟ–3, ಪುಟ–394)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಕಳುಹಿಸಲ್ಪಟ್ಟದ್ದು ಮುಸ್ಲಿಮರಿಗೆ ಮಾತ್ರವಲ್ಲ. ಅವರು ಪ್ರತಿಯೊಂದು ಕೋಮು ಮತ್ತು ಧರ್ಮದ ಜನರಿಗೆ ತನ್ನ ಆಗಮನದ ಮಹತ್ವವನ್ನು ಪ್ರಕಟಿಸಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೇಳುತ್ತಾರೆ:

"ಈ ವಿಷಯವೂ ಸಹ ಸ್ಪಷ್ಟವಾಗಲಿ ನಾನು ಈ ಕಾಲದಲ್ಲಿ ಅಲ್ಲಾಹನಿಂದ ನಿಯೋಜಿತನಾಗಿ ಆಗಮಿಸಿರುವುದು ಕೇವಲ ಮುಸ್ಲಿಮರನ್ನು ಸುಧಾರಣೆ ಮಾಡಲು ಮಾತ್ರ ಅಲ್ಲ. ಬದಲಾಗಿ ಮುಸ್ಲಿಮರ, ಹಿಂದುಗಳ ಮತ್ತು ಕ್ರೈಸ್ತರ ಸುಧಾರಣೆ ಮಾಡುವುದು ನನ್ನ ಆಗಮನದ ಉದ್ದೇಶವಾಗಿದೆ. ಮುಸ್ಲಿಮರಿಗೆ ಮತ್ತು ಕ್ರೈಸ್ತರಿಗೆ ದೇವನು ನನ್ನನ್ನು ಮಸೀಹ್ ಮೌಊದ್ ಆಗಿ ಕಳುಹಿಸಿರುವಂತೆಯೇ ನಾನು ಹಿಂದುಗಳಿಗೆ ಅವತಾರವಾಗಿ ಆಗಮಿಸಿರುವೆನು. ನಾನು ಇಪ್ಪತ್ತಕ್ಕಿಂತ ಹೆಚ್ಚು ವರ್ಷಗಳಿಂದ ಪ್ರಕಟಿಸುತ್ತಾ ಇದ್ದೇನೆ, ಭೂಮಿ ಯಾವ ಪಾಪಕೃತ್ಯಗಳಿಂದ ತುಂಬಿದೆಯೋ ಆ ಪಾಪಕೃತ್ಯಗಳನ್ನು ದೂರ ಸರಿಸಲು ನಾನು ಮಸೀಹಿಬ್ನು ಮರ್‌ಯಮ್ ರೂಪದಲ್ಲಿ ಆಗಮಿಸಿದ ಹಾಗೆಯೇ ಹಿಂದೂ ಧರ್ಮದ ಅವತಾರಗಳಲ್ಲಿ ಶ್ರೇಷ್ಠ ಅವತಾರವಾಗಿರುವ ಶ್ರೀಕೃಷ್ಣರ ಹಾಗೆಯೇ ನಾನು ಆಗಮಿಸಿದವನಾಗಿರುವೆನು. ಅಥವಾ ಹೀಗೆ ಹೇಳಬೇಕಾಗುತ್ತದೆ ಆಧ್ಯಾತ್ಮಿಕ ಸತ್ಯತೆ ನಿಟ್ಟಿನಲ್ಲಿ ನಾನು ಅವನೇ ಆಗಿರುವೆನು. ಇದು ನನ್ನ ಯೋಚನೆ ಅಥವಾ ಭಾವದಿಂದಲ್ಲ ಬದಲಿಗೆ ಭೂಮ್ಯಾಕಾಶವನ್ನು ಸೃಷ್ಠಿಸಿದ ಅಲ್ಲಾಹನು ನನ್ನಲ್ಲಿ ಇದನ್ನು ವ್ಯಕ್ತ ಪಡಿಸಿದ್ದಾನೆ. ಒಂದು ಸಲ ಅಲ್ಲಾ ಬದಲಿಗೆ ಅನೇಕ ಸಲ ಇದನ್ನು ನನ್ನಲ್ಲಿ ಹೀಗೆ ವ್ಯಕ್ತ ಪಡಿಸಿದ್ದಾನೆ: ನೀನು ಹಿಂದೂಗಳಿಗೆ ಕೃಷ್ಣ ಮತ್ತು ಮುಸ್ಲಿಮರಿಗೆ ಹಾಗೂ ಕ್ರೈಸ್ತರಿಗೆ ವಾಗ್ದಾತ್ತ ಮಸೀಹ್ ಆಗಿದ್ದೀಯ ಎಂದು. ನನಗೆ ಅರಿವಿದೆ ಅಜ್ಞಾತ ಮುಸ್ಲಿಮರು ಇದನ್ನು ಆಲಿಸಿದ ತಕ್ಷಣವೇ ಹೀಗೆ ಹೇಳುತ್ತಾರೆ ಓರ್ವ ಕಾಫಿರ್‌ನ ಹೆಸರು ತಗೆದುಕೊಂಡು ನೇರವಾಗಿ ಕಾಫಿರ್ ಎಂದೆನಿಸಿಕೊಳ್ಳಲು ಸಿದ್ದನಾದನು ಎಂದು. ಆದರು ಅಲ್ಲಾಹನ ದಿವ್ಯವಾಣಿ ಆಗಿದೆ ಅದನ್ನು ವ್ಯಕ್ತ ಪಡಿಸಲು ನಾನು ಹಿಂಜರಿಯುವುದಿಲ್ಲ ಮತ್ತು ಇಂದು ಮೊದಲ ಬಾರಿಗೆ ಇಷ್ಟು ದೊಡ್ಡ ಸಮಾವೇಶದಲ್ಲಿ ಇಂತಹ ಮಾತು ಹೇಳುತ್ತಿರುವುದು ಏಕೆಂದರೆ ಅಲ್ಲಾಹನ ಕಡೆಯಿಂದಿರುವ ಜನರು ಯಾವುದೇ ನಿಂದಿಸುವವರ ನಿಂದನೆಯಿಂದ ಭಯಬೀತರಾಗುವುದಿಲ್ಲ." (ಲೆಕ್ಚರ್ ಸಿಯಾಲ್‌ಕೋಟ್, ರೂಹಾನಿ ಖಝಾಯಿನ್ ಸಂಪುಟ–20, ಪುಟ–228)

ಈ ಮಾತನ್ನು ಹಝ್ರತ್ ಮಸೀಹ್ ಮೌಊದ್[ಅ] ಅವರು ಲೆಕ್ಚರ್ ಸಿಯಾಲ್‌ಕೋಟ್‌ನಲ್ಲಿ ಪ್ರಸ್ತಾಪಿಸಿದ್ದಾರೆ. ಈ ಲೆಕ್ಚರ್ ಮುಸ್ಲಿಮ್ ಹಾಗೂ ಹಿಂದುಗಳ ಒಂದು ದೊಡ್ಡ ಸಮಾವೇಶದಲ್ಲಿ ನೀಡಲಾಗಿತ್ತು.

ತಾನು ನಿಯೋಜಿತನಾದುದರ ಮಹತ್ವದ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಮನುಷ್ಯನು ಅಲ್ಲಾಹನ ಆಜ್ಞೆಯ ವಿರುದ್ಧ ವರ್ತಿಸುವಾಗ ಅವನು ಪಾಪಕೃತ್ಯ ಮಾಡುತ್ತಾನೆ. ಒಬ್ಬ ಕೆಳಮಟ್ಟದ ಸರಕಾರಿ ನೌಕರನಾದರೂ ಒಂದು ಸರಕಾರಿ ಆದೇಶಗಳನ್ನು ತರುವಾಗ ಅವನ ಮಾತನ್ನು ಅಂಗೀಕರಿಸದಿದ್ದರೆ ಅದು ಅಪರಾಧವಾಗಿ ಶಿಕ್ಷಾರ್ಹವಾಗುತ್ತದೆ. ಲೌಕಿಕ ಆಡಳಿತಗಾರರ ಸ್ಥಿತಿ ಹೀಗಿರುವಾಗ ಸರ್ವೋನ್ನತ ಆಡಳಿತಗಾರನಾದ ಅಲ್ಲಾಹನ ಕಡೆಯಿಂದ ಆಗಮಿಸುವವರನ್ನು ನಿರ್ಲಕ್ಷಿಸುವುದು ಅಲ್ಲಾಹನ ಆಜ್ಞೆಯನ್ನು ಉಲ್ಲಂಘಿಸುವುದಕ್ಕೆ ಸಮವಾಗುತ್ತದೆ. ಅಲ್ಲಾಹನು ಅಭಿಮಾನಿಯಾಗಿದ್ದಾನೆ. ಅವನು ಬಿಗಡಾಯಿಸಿದ ಶತಮಾನದ ಆದಿ ಭಾಗದಲ್ಲಿ ಒಬ್ಬ ಸುಧಾರಕನನ್ನು ಕಳುಹಿಸುತ್ತಾನೆ. ಜನರನ್ನು ಸನ್ಮಾರ್ಗದ ಕಡೆಗೆ ಆಹ್ವಾನಿಸಲು ಅವರನ್ನು ಕಳುಹಿಸಲಾಗುತ್ತದೆ. ಅಂತಹ ವ್ಯಕ್ತಿಯ ಎಲ್ಲಾ ಉಪದೇಶಗಳನ್ನು ಪಾದದಡಿಯಲ್ಲಿ ಹಾಕಿ ತುಳಿದು ಹಾಕುವುದು ಬಹಳ ದೊಡ್ಡ ಪಾಪಕೃತ್ಯವಾಗಿದೆ."

ಮತ್ತೆ ಹೇಳುತ್ತಾರೆ: "......ಮನುಷ್ಯನ ಯೋಚನೆಗಳು ಅಲ್ಲಾಹನ ಕಾರ್ಯನೀತಿಗೆ ಹೋಲುವುದಿಲ್ಲ. ಅಲ್ಲಾಹನ ಕಾರ್ಯನೀತಿಯಿಂದ ಹೆಚ್ಚು ತಿಳಿದಿರುವೆನು ಎಂದು ಹೇಳಲು ಮನುಷ್ಯನು ಯಾರಗಿದ್ದಾನೆ. ಅಲ್ಲಾಹನ ಕಾರ್ಯನೀತಿಯು ಕಾಂತಿಯುತ ಹಾಗೂ ಶ್ರೇಷ್ಠವಾಗಿದೆ." ಅವರು ಮುಂದುವರೆಸುತ್ತಾ ಹೇಳುತ್ತಾರೆ: ತಮ್ಮ ಕಾಲದ ಬಗ್ಗೆ ಹೇಳುತ್ತಿದ್ದಾರೆ "ಇಸ್ಲಾಮ್‌ನಿಂದ ಓರ್ವ ವ್ಯಕ್ತಿಯು ಮತಭ್ರಷ್ಟನಾದರೆ ಗಲಾಟೆ ಹಬ್ಬಿಸಲಾಗುತಿತ್ತು. ಈಗ ಇಸ್ಲಾಮ್ ಧರ್ಮವನ್ನು ಕಾಲಿನ ಕೆಳಗೆ ಹಾಕಿದ್ದಾರೆ, ಎಂದರೆ ಒಂದು ಲಕ್ಷದ ತನಕ ಮತಭ್ರಷ್ಟ ಜನರಿದ್ದಾರೆ." ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: "ಪರಿಶುದ್ಧ ಧರ್ಮವಾದ ಇಸ್ಲಾಮ್ ವಿರುದ್ಧ ಎಂತಹ ಆಕ್ರಮಣಗಳನ್ನು ಮಾಡಲಾಗಿದೆ ಎಂದರೆ, ಅದರ ವಿರುದ್ಧ ಲಕ್ಷಾಂತರ ಪುಸ್ತಕಗಳನ್ನು ಪ್ರವಾದಿ ಮುಹಮ್ಮದ್[ಸ] ಅವರನ್ನು ಅವಾಚ್ಯ ಶಬ್ಧಗಳಿಂದ ತುಂಬಿ ಬರೆಯಲಾಗಿದೆ. ಕೆಲವು ಸಂಕೀರ್ಣ ಪತ್ರಿಕೆಗಳು

ಕೋಟ್ಯಾಂತರ ಪ್ರತಿಯಲ್ಲಿ ಪ್ರಕಟಿಸಲಾಗಿದೆ. ಇಸ್ಲಾಮಿನ ವಿರುದ್ಧ ಪ್ರಕಟಿಸಲಾಗುತ್ತಿರುವ ಎಲ್ಲವನ್ನೂ ಒಂದು ಸ್ಥಳದಲ್ಲಿ ಜಮಾಯಿಸುವುದಾದರೆ ಅದು ಒಂದು ದೊಡ್ಡ ಪರ್ವತವೇ ಆಗುವುದು. ಮುಸ್ಲಿಮರ ಸ್ಥಿತಿಯಾದರೋ ಅವರು ನಿರ್ಜೀವರಾಗಿದ್ದಾರೆ. ಎಲ್ಲರೂ ಮೃತರಾದ ಹಾಗೆ ಆಗಿದ್ದಾರೆ. ಇಂತಹ ಸಂದರ್ಭದಲ್ಲಿ ಅಲ್ಲಾಹನು ಸಹ ಮೌನವಾಗಿದ್ದರೆ ಸ್ಥಿತಿ ಏನಾಗುವುದು? ಅಲ್ಲಾಹನ ಒಂದು ಆಕ್ರಮಣ ಮನುಷ್ಯನ ಸಾವಿರ ಆಕ್ರಮಣಗಳಿಗಿಂತ ಮಿಗಿಲಾಗಿದೆ. ಅದು ಹೇಗಿದೆ ಎಂದರೆ ಅದರ ಮೂಲಕ ಇಸ್ಲಾಮಿಗೆ ಯಶಸ್ಸು ಲಭಿಸುವುದು. ಕ್ರೈಸ್ತರು 1900 ವರ್ಷಗಳಿಂದ ಗಲಾಟೆ ಹಬ್ಬಿಸಿದ್ದಾರೆ ಈಸ ನಬಿ ದೇವನಾಗಿದ್ದಾನೆ ಎಂದು ಅದೇ ರೀತಿ ಅವರ ಧರ್ಮ ಇಲ್ಲಿಯ ವರೆಗೆ ಹರಡುತ್ತಾ ಹೋಯಿತು ಮತ್ತು ಮುಸ್ಲಿಮರು ಅವರಿಗೆ ಇನ್ನೂ ಸಹಾಯ ಮಾಡುತ್ತಾ ಇದ್ದರು. ಕ್ರೈಸ್ತರ ಬಳಿ ಮಸೀಹ್ (ಈಸ ಮಸೀಹರು) ಜೀವಂತವಾಗಿದ್ದಾರೆ ಮತ್ತು ನಿಮ್ಮ ಪ್ರವಾದಿ(ಸ) ಮೃತರಾಗಿದ್ದಾರೆ ಎಂಬ ಆಯುದ್ಧ ಇದೆ." ಮತ್ತೆ ಹೇಳುತ್ತಾರೆ "ಲಾಹೋರಿನಲ್ಲಿ ಲಾರ್ಡ್‌ಶಿಪ್ ಒಂದು ಬಹಳ ದೊಡ್ಡ ಸಮಾವೇಶದಲ್ಲಿ ಈ ಮಾತನ್ನೇ ಹೇಳಿದನು. ಆದರೆ ಅದಕ್ಕೆ ಉತ್ತರಿಸಲು ಯಾವ ಮುಸ್ಲಿಮನು ಮುಂದೆ ಬರಲಿಲ್ಲ. ಆದರೆ ನಮ್ಮ ಜಮಾಅತ್‌ನಿಂದ ಮುಫ್ತಿ ಮುಹಮ್ಮದ್ ಸಾದಿಖ್ ಸಾಹೆಬರು ಆ ಸಮಾವೇಶದಲ್ಲಿದ್ದರು. ಅವರು ಎದ್ದು ಪವಿತ್ರ ಖುರ್‌ಆನ್, ಹದೀಸ್, ಇತಿಹಾಸ ಹಾಗೂ ಇಂಜೀಲಿನಿಂದ ಈಸ ನಬಿಯವರು ಮರತರಾಗಿದ್ದಾರೆ ಎಂದು ಸಾಬೀತು ಮಾಡಿದರು ಮತ್ತು ನಮ್ಮ ಪ್ರವಾದಿ(ಸ) ಅವರು ಜೀವಂತವಾಗಿದ್ದಾರೆ. ಏಕೆಂದರೆ ಪ್ರವಾದಿ(ಸ) ಅವರಿಂದ ಲಾಭ ಪಡೆದು ಪವಾಡಗಳನ್ನು ಹಾಗೂ ಅಸಾಮಾನ್ಯ ವಿಷಯಗಳನ್ನು ತೋರಿಸುವರು ಯಾವಾಗಲೂ ಇದ್ದರು. ಆಗ ಅವರಿಗೆ ಇದಕ್ಕೆ ಉತ್ತರ ನೀಡುವುದಕ್ಕೆ ಸಾಧ್ಯವಾಗಲಿಲ್ಲ." ಮತ್ತೆ ಹೇಳುತ್ತಾರೆ "..........ನಾನು ಒಮ್ಮೆ ಲುಧಿಯಾನದಲ್ಲಿ ಕ್ರೈಸ್ತರಿಗೆ ಒಂದು ಜಾಹಿರಾತು ನೀಡಿದೆ, ನಿಮ್ಮ ಮತ್ತು ನಮ್ಮ ಪೈಕಿ ಹೆಚ್ಚು ಭಿನ್ನಭಿಪ್ರಾಯವಿಲ್ಲ ಚಿಕ್ಕ ವಿಷಯವಿದೆ ಅದನ್ನು ನೀವು ಸ್ವೀಕರಿಸಿಕೊಳ್ಳಿರಿ. ಈಸ ನಬೀ ಮೃತರಾಗಿದ್ದಾರೆ ಮತ್ತು ಅವರು ಆಕಾಶಕ್ಕೆ ಹೋಗಲಿಲ್ಲ ಎಂದು. ನಿಮಗೆ ಇದನ್ನು ಒಪ್ಪುವುದಕ್ಕೆ ತೊಂದರೆ ಏನಿದೆ? ಇದಕ್ಕೆ ಅವರು ಉದ್ರೇಕಗೊಂಡು ಹೇಳಿದರು ಒಂದು ವೇಳೆ ನಾವು ಇದನ್ನು ಒಪ್ಪಿಕೊಂಡರೆ ಲೋಕದಲ್ಲಿ ಒಬ್ಬ ಕ್ರೈಸ್ತನು ಇರುವುದಿಲ್ಲ."

ಅವರು ಹೇಳುತ್ತಾರೆ "ನೋಡಿರೀ! ಅಲ್ಲಾಹನು ಸರ್ವಜ್ಞನೂ ಮತ್ತು ತಂತ್ರಜ್ಞನೂ ಆಗಿರುವನು. ಅವನು ಎಂತಹ ತಂತ್ರ ಉಪಯೋಗಿಸಿದ್ದಾನೆ ಎಂದರೆ ಅದರಿಂದ ಶತ್ರು ನಶಿಸಿ ಹೋಗುವನು. ಮುಸ್ಲಿಮರು ಈ ಸಮಸ್ಯೆಯಲ್ಲಿ ಏಕೆ ಅಡ್ಡಿ ಹಾಕುತ್ತಾರೆ. ಏನು ಈಸ ನಬಿ ಪ್ರವಾದಿ(ಸ) ಅವರಿಗಿಂತ ಹೆಚ್ಚು ಶ್ರೇಷ್ಠರಾಗಿದ್ದಾರೆಯೇ? ನನ್ನೊಂದಿಗೆ ಜಗಳವಿದ್ದರೆ ಇದರಲ್ಲಿ ಹೆಚ್ಚಾಗಿ ಮುಂದಾಗ ಬೇಡಿರೀ ಮತ್ತು ಇಸ್ಲಾಮ್ ಧರ್ಮಕ್ಕೆ ಹಾನಿ ಉಂಟು ಮಾಡುವಂತಹ ಕೆಲಸ ಮಾಡಬೇಡಿರೀ. ಅಲ್ಲಾಹನು ದೌರ್ಬಲ್ಯತೆಯನ್ನು ಇಷ್ಟ ಪಡುವುದಿಲ್ಲ. ಈ ದೌಬಲ್ಯತೆಯನ್ನು ಹೊಂದಿ ನೀವು ಕಸ್‌ರೆ ಸಲೀಬ್ (ಶಿಲುಬೆ ಮುರಿಯುವುದು) ಮಾಡಲು ಸಾಧ್ಯವಿಲ್ಲ. (ಮಲ್‌ಫೂಝಾತ್ ಸಂಪುಟ–8, ಪುಟ–174–175)

ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. "ಅಲ್ಲಾಹನು ನನ್ನನ್ನು ನಿಯುಕ್ತಿಗೊಳಿಸಿದ ಉದ್ದೇಶವೇನೆಂದರೆ, ಅದು ಅಲ್ಲಾಹನ ಮತ್ತು ಅವನ ಸೃಷ್ಟಿಗಳ ಮಧ್ಯೆ ಉಂಟಾದ ಉದಾಸೀನತೆಯನ್ನು ದೂರ ಮಾಡಿ ಪ್ರೀತಿ ಮತ್ತು ನಿಷ್ಠೆಯ ಸಂಬಂಧ ಪುನರ್‌ಸ್ಥಾಪಿಸುವುದಾಗಿದೆ. ಈ ಸತ್ಯವನ್ನು ಬಹಿರಂಗಪಡಿಸಿ ಧಾರ್ಮಿಕ ಯುದ್ಧಗಳನ್ನು ಕೊನೆಗಾಣಿಸಿ ಮೈತ್ರಿಯ ಅಡಿಪಾಯ ಹಾಕುವುದಾಗಿದೆ. ಧಾರ್ಮಿಕ ಸಾಕ್ಷ್ಯಗಳು ಇಂದು ಲೋಕದಿಂದ ಮರೆಮಾಚಲಾಗಿದೆ. ಅದನ್ನು ಎತ್ತಿ ಹಿಡಿಯಬೇಕಾಗಿದೆ ಮತ್ತು ಆಧ್ಯಾತ್ಮಿಕತೆಯು ಐಹಿಕ ಅಂಧಕಾರಗಳಲ್ಲಿ ಮುಳುಗಿ ಹೋಗಿದೆ. ಅದನ್ನು ಮೇಲೆತ್ತಿ ಅಲ್ಲಾಹನ ಶಕ್ತಿಗಳನ್ನು ಮಾನವನಲ್ಲಿ ಪ್ರೇರೇಪಿಸಿ ಪ್ರಾರ್ಥನೆಯ ಮೂಲಕ ಗಮನ ಸೆಳೆದು ಬಹಿರಂಗಗೊಳ್ಳುತ್ತವೆ. ಆಡಂಬರಕ್ಕೆ ಮಾತ್ರವಲ್ಲ. ನಿಜವಾದ ಆ ಸ್ಥಿತಿಯನ್ನು ವಿವರಸಬೇಕಾಗಿದೆ ಎಲ್ಲಕ್ಕಿಂತ ಹೆಚ್ಚಾಗಿ ಬಹುದೇರಾಧನೆಯಿಂದ. ನಿಜವಾದ ಪ್ರಕಾಶಭರಿತ ಏಕದೇವಾ ಭಾವನೆ ಕಾಣದಾಗಿದೆ ಅದನ್ನು ಲೋಕದಲ್ಲಿ ಪುನ: ಶಾಶ್ವತವಾಗಿ ಸ್ಥಾಪಿಸಬೇಕಾಗಿದೆ. ಇದೆಲ್ಲ ನನ್ನ ಶಕ್ತಿಯಿಂದ ಆಗುವಂತಹದ್ದಲ್ಲ. ಬದಲು ಆಕಾಶ ಭೂಮಿಗಳ ಸೃಷ್ಟಿಕರ್ತನಾದ ಅಲ್ಲಾಹನ ಶಕ್ತಿಯಿಂದ ಸಾಧ್ಯವಾಗುವುದು. ನಾನು ಕಾಣುತ್ತಿದ್ದೇನೆ. ಒಂದೆಡೆ ಅಲ್ಲಾಹನು ತನ್ನ ಕೈಯಿಂದ ನನ್ನನ್ನು ತರಬೇತಿಗೊಳಿಸಿ ತನ್ನ ದಿವ್ಯವಾಣಿಯ ಭಾಗ್ಯವನ್ನು ನೀಡಿ ನನ್ನ ಹೃದಯದಲ್ಲಿ ಈ ಉತ್ಸಾಹ ತುಂಬಿದ್ದಾನೆ. ಆ ಕಾರಣದಿಂದ ಲೋಕಸುಧಾರಣೆಗಾಗಿ ನಾನು ನಿಂತಿರುತ್ತೇನೆ. ಇನ್ನೊಂದೆಡೆ ನನ್ನ ಮಾತಿಗೆ ಮನ್ನಿಸಿ ಸಿದ್ಧರಾಗುವಂತಹ ಹೃದಯಗಳು ಸಿದ್ಧಪಡಿಸಿದ್ದಾನೆ. ನಾನು ನೋಡುತ್ತಿದ್ದೇನೆ. ಯಾವಾಗಿನಿಂದ ಅಲ್ಲಾಹನು ನನ್ನನ್ನು ನಿಯುಕ್ತಗೊಳಿಸಿ ಲೋಕಕ್ಕೆ ಕಳುಹಿಸಿರುವನೋ ಅಂದಿನಂದ ಲೋಕದಲ್ಲಿ ಒಂದು ಮಹೋನ್ನತವಾದ ಕ್ರಾಂತಿ ಉಂಟಾಗಿದೆ. (ಲೆಕ್ಚರ್ ಲಾಹೋರ್, ರೂಹಾನಿ ಖಝಾಯೀನ್ ಸಂಪುಟ–20, ಪುಟ–180–181)

ಇದು ಹಝ್ರತ್ ಮಸೀಹ್ ಮೌಊದ್(ಅ) ಲಾಹೋರಿನಲ್ಲಿ ಕೊಟ್ಟ ಲೆಕ್ಚರ್ ಆಗಿತ್ತು. ಮತ್ತೆ ಅಲ್ಲಾಹನು ತನ್ನ ಅನುಗ್ರಹದಿಂದ ಜನರನ್ನು ರಕ್ಷಿಸಲು ಸುಧಾರಕರನ್ನು ತನ್ನ ವಿಶೇಷ ದಾಸರನ್ನು ಕಳುಹಿಸುವನು ಎಂಬ ವಿಷಯದ ಬಗ್ಗೆ ವಿವರಿಸುತ್ತ ಹೀಗೆ ಹೇಳಿದರು.

"ಇದು ಸರ್ವ ಲೋಕಗಳ ಪರಿಪಾಲಕನಾದ ಅಲ್ಲಾಹನ ಪುರಾತನ ವಿಧಿನಿಯಮವಾಗಿದೆ. ಯಾವಾಗೆಲ್ಲ ಲೋಕದಲ್ಲಿ ಘೋರ ಅಂಧಕಾರ, ಪಾಪಗಳು ವಿಪರೀತಕ್ಕೆ ಮುಟ್ಟುವುದೋ ಆಗ ಅದನ್ನು ಹೋಗಲಾಡಿಸಲು ಅಲ್ಲಾಹನು ತನ್ನ ಅನುಗ್ರಹ ದೃಷ್ಟಿ ಬೀರುವನು. ಮಳೆಯ ಅಭಾವದಿಂದ ಬರಬಿದ್ದು ಜನರು ತತ್ತರಿಸಿ ಹೋದಾಗ ಅಂತಿಮವಾಗಿ ಅಲ್ಲಾಹನು ದಯೆತೋರಿ ಮಳೆ ಸುರಿಸುವ ಹಾಗೆ, ಯಾವುದೇ ಮಹಾಮಾರಿಯಿಂದ ಲಕ್ಷಾನುಗಟ್ಟಲೆ ಔಷಧಿ ದೊರೆಯುತ್ತದೆ. ಅದೇರೀತಿ ಯಾವುದೇ ಒಂದು ಸಮುದಾಯ ದೌರ್ಜನ್ಯಭರಿತ ಆಡಳಿತಕ್ಕೆ ಸಿಕ್ಕಿಕೊಂಡಾಗ ಅದರ ವಿಮೋಚನೆಗಾಗಿ ಒಬ್ಬ ನ್ಯಾಯವಂತ ಮತ್ತು ರಕ್ಷಕ ಹುಟ್ಟಿ ಬರುತ್ತಾನೆ. ಅದೇ ರೀತಿಯಲ್ಲಿ ಜನರು ಅಲ್ಲಾಹನ ಮಾರ್ಗವನ್ನು ಮರೆತುಬಿಟ್ಟಾಗ ಮತ್ತು ಏಕದೇವತ್ವ ಹಾಗೂ ಸತ್ಯವನ್ನು ಬಿಟ್ಟುಬಿಟ್ಟಾಗ ಅಲ್ಲಾಹನು ತನ್ನ ಕಡೆಯಿಂದ ಒಬ್ಬ ಸುಧಾರಕರನ್ನು ತನ್ನ ದಿವ್ಯವಾಣೀಯ ಭಾಗ್ಯವ ನೀಡಿ ಆದಮ್ ಸಂತತಿಯ ಮಾರ್ಗದರ್ಶಕನಾಗಿ ಕಳುಹಿಸುವನು. ಆಗ ಪಥಭ್ರಷ್ಟರಿಗೆ ಸನ್ಮಾರ್ಗ ದೊರೆಯುವುದು. ಇದರ ಮರ್ಮವೇನೆಂದರೆ ಲೋಕದ ಸೃಷ್ಟಿಕರ್ತನಾದ, ಲೋಕವನ್ನು ನಡೆಸುವವನು ಅವನೇ. ಈ ಲೋಕದ ಉದ್ದಾರಕ್ಕಾಗಿ ತನ್ನ ಅನುಗ್ರಹ ಶಕ್ತಿಯಿಂದ ಜನರನ್ನು ಮಾರ್ಗದರ್ಶನ ನೀಡುವನು. ಅವನು ಜನರ ಕೈಬಿಡಲಾರ. ತಕ್ಷಣದಿಂದ ಅವನ ಅನುಗ್ರಹ ಪ್ರಕಟವಾಗುತ್ತದೆ.

(ಬರಾಹೀನೆ ಅಹ್ಮದಿಯಾ ಭಾಗ–2, ಪುಟ–113–114, ಅಡಿಟಿಪ್ಪಣಿಯ ಉಳಿದ ಭಾಗ–1)

ಮತ್ತೆ ಹಝ್ರತ್ ಮಸೀಹ್ ಮೌಊದ್(ಅ) ಒಂದೆಡೆ ಹೀಗೆ ಹೇಳಿದರು:

"ಭಾಗ್ಯವಂತನಾಗಿದ್ದಾನೆ ಮತ್ತು ಶುಭಕರವಾಗಿದ್ದಾನೆ ಆ ವ್ಯಕ್ತಿ. ಅವನ ಹೃದಯವು ಪರಿಶುದ್ಧ ಹಾಗೂ ಅಲ್ಲಾಹನ ಮಹೋನ್ನತ ಹಾಗೂ ಪ್ರತಾಪದಿಂದ ತುಂಬಿಕೊಂಡು ಅದನ್ನು ಪ್ರಕಟಪಡಿಸಬಯಸುವನಾಗುವನು. ಏಕೆಂದರೆ ಅಲ್ಲಾಹನು ಅವನಿಗೆ ಇತರರ ಮೇಲೆ ಆಧ್ಯತೆ ನೀಡುವವನಾಗುತ್ತಾನೆ. ಯಾವ ಜನರು ನನ್ನನ್ನು ವಿರೋಧಿಸುತ್ತಿದ್ದಾರೆ. ಅವರ ಮತ್ತು ನನ್ನ ತೀರ್ಮಾನ ಅಲ್ಲಾಹನು ನಿರ್ಧರಿಸುವನು. ಅವನು ನಮ್ಮ ಮತ್ತು ಅವರ ಹೃದಯಗಳನ್ನು ಚೆನ್ನಾಗಿ ಬಲ್ಲವನಾಗಿದ್ದಾನೆ. ಯಾರು ಇಹಲೋಕದ ಆಡಂಬರದ ಹೆಸರು ಬಯಸುವರೋ ಮತ್ತು ಯಾರು ಅಲ್ಲಾಹನ ಭಯ ಹಾಗೂ ಅನುಕಂಪ ಹೊಂದುವನೋ ಅವನೇ ನೋಡುವವನಾಗಿದ್ದಾನೆ. ಇದನ್ನು ಚೆನ್ನಾಗಿ ನೆನಪಿಡಿರಿ. ಹೃದಯ ಪರಿಶುದ್ಧನಾಗದೆ ಆಧ್ಯಾತ್ಮಿಕ ಉನ್ನತಿ ದೊರೆಯಲಾರದು. ಹೃದಯವು ಪರಿಶುದ್ಧಗೊಂಡಾಗ ಮಾತ್ರ ಉನ್ನತಿ ಪಡೆಯಲು ಒಂದು ವಿಶೇಷವಾದ ಶಕ್ತಿ ದೊರೆಯುತ್ತದೆ ಮತ್ತು ಅದಕ್ಕೆ ಬೇಕಾದ ಎಲ್ಲ ಸಾಮಾಗ್ರಿಗಳು ದೊರೆಯುತ್ತವೆ ಮತ್ತು ಅವನು ಪ್ರಗತಿ ಹೊಂದುತ್ತಾನೆ. ರಸೂಲುಲ್ಲಾಹ್(ಸ) ರನ್ನು ನೋಡಿ ಅವರು ಒಬ್ಬಂಟಿಯಾಗಿದ್ದರು. ಯಾರು ಅವರ ಸಹಾಯಕ್ಕೆ ನಿಂತಿರಲಿಲ್ಲ. ಅಂತಹದರಲ್ಲಿ ಈ ದಾವೆ ಮಾಡುತ್ತಾರೆ.

**ಯಾ ಅಯ್ಯುಹನ್ನಾಸು ಇನ್ನಿ ರಸೂಲುಲ್ಲಾಹಿ ಇಲೈಕುಮ್ ಜಮೀಅ.** (ಅಲ್‌ಅರಾಫ್:159)

ಎಲೈ ಮನಿಷ್ಯರೇ, ನಿಜವಾಗಿಯೂ ನಾನು ನಿಮ್ಮೆಲ್ಲರೊಡೆಗೆ ಅಲ್ಲಾಹನ ಸಂದೇಶವಾಹಕನಾಗಿ ನಿಯೋಜಿತನಾಗಿದ್ದೇನೆ. ಅವರ ಈ ದಾವೆ ಫಲಪ್ರದವಾಗಬಹುದೆಂದು ಆ ಸಮಯ ಯಾರಿಗೆ ಊಹಿಸಲು ಸಾಧ್ಯವಿತ್ತು? ಅದಲ್ಲದೆ ಅಸಂಖ್ಯಾತ ಕಷ್ಟ ತೊಂದರೆಗಳು ಎದುರಾದವು. ಅದರ ಸಾವಿರದಷ್ಟು ಭಾಗ್ಯವು ನಮ್ಮ ಪಾಲಿಗೆ ಬರಲಿಲ್ಲ. (ಮಲ್ಫೂಝಾತ್, ಸಂಪುಟ–8, ಪುಟ–157–158)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಲೋಕಕ್ಕೆ ಸಾರ್ವತ್ರಿಕ ಉಪದೇಶ ನೀಡುತ್ತಾ ಹೇಳುತ್ತಾರೆ: ನನ್ನ ಕೊನೆಯ ಉಪದೇಶ ಇದಾಗಿದೆ. ನೀವು ನಿಮ್ಮ ವಿಶ್ವಾಸದ ಬಗ್ಗೆ ಜಾಗರೂಕರಾಗಿರಿ. ನೀವು ಅಹಂಭಾವ ಮತ್ತು ನಿರ್ಲಕ್ಷ್ಯತೆ ಪ್ರಕಟಿಸಿ ಸರ್ವಶಕ್ತನಾದ ಅಲ್ಲಾಹನ ದೃಷ್ಟಿಯಲ್ಲಿ ಉದ್ಧಟರಾಗಬೇಡಿರಿ. ನೋಡಿರಿ, ಅಲ್ಲಾಹನು ನಿಮ್ಮ ಕಡೆಗೆ ಎಂತಹ ಸಮಯದಲ್ಲಿ ದೃಷ್ಟಿ ಬೀರಿದ್ದಾನೆಂದರೆ ಅದು ಅವನು ದೃಷ್ಟಿ ಬೀರಬೇಕಾಗಿದ್ದ ಸಮಯವೇ ಆಗಿತ್ತು. ಆದುದರಿಂದ ನೀವು ಅಲ್ಲಾಹನ ಎಲ್ಲಾ ಅನುಗ್ರಹಗಳಿಗೆ ವಾರೀಸುದಾರರಾಗಲು ಪ್ರಯತ್ನಿಸಿರಿ. ಅಲ್ಲಾಹನು ಆಕಾಶದಿಂದ ನೋಡಿದನು. ಯಾರಿಗೆ ಅಲ್ಲಾಹನು ಗೌರವ ನೀಡಿದ್ದನೋ ಅವರನ್ನು ಕಾಲಿನಲ್ಲಿ ತುಳಿಯಲಾಗಿದೆ. ಎಲ್ಲಾ ಪ್ರವಾದಿಗಳಲ್ಲಿ ಶ್ರೇಷ್ಠ ಪ್ರವಾದಿಯನ್ನೂ ಬಯ್ಯುತ್ತಿದ್ದಾರೆ. ಅವರನ್ನು ದುಷ್ಕರ್ಮಿ, ಸುಳ್ಳುಗಾರ ಎಂದು ಪರಿಗಣಿಸುತ್ತಿದ್ದಾರೆ. ಅವರ ಮೇಲೆ

ಅವತರಿಸಿದಂತಹ ಪವಿತ್ರ ಖುರ್‌ಆನ್‌ನನ್ನು ಅಪಶಬ್ದಗಳಿಂದ ವಿರೋಧಿಸಿ ಮನುಷ್ಯನ ಮಾತುಗಳು ಎಂದು ಭಾವಿಸುತ್ತಿದ್ದಾರೆ. ಆದುದರಿಂದ ಅವನು ತನ್ನ ವಚನ ಪುನರುಚ್ಛರಿಸಿದನು. ಆ ಪ್ರತಿಜ್ಞೆ ಈ ವಚನದಲ್ಲಿದೆ **ಇನ್ನ ನಹ್‌ನು ನಝ್ಝಲ್‌ನಝ್ಝಿಕ್‌ರ ವ ಇನ್ನ ಲಹೂ ಲಹಾಫಿಝೂನ್** (ಅಲ್‌ಹಿಜರ್:10) ಇಂದು ಆ ಪ್ರತಿಜ್ಞೆ ಈಡೇರುವ ದಿನವಾಗಿದೆ. ಅವನ ಗಂಭೀರ ಸ್ವರೂಪದ ಆಕ್ರಮಣಗಳ ಮೂಲಕ ಹಾಗೂ ಇನ್ನಿತರ ದೃಷ್ಠಾಂತಗಳ ಮೂಲಕ ಈ ಸಂಘಟನೆ ಅವನು ಸ್ಥಾಪಿಸಿದ ಸಂಘಟನೆಯಾಗಿದೆ ಎಂದು ಸಾಕ್ಷೀಕರಿಸಿದನು. ನೀವು ಈಗ ನೋಡಿದಂತಹ ನಿರ್ಣಾಯಕ ಹಾಗೂ ನಿಸ್ಸಂಶಯ ರೀತಿಯ ದೃಷ್ಠಾಂತಗಳು ಎಂದಾದರೂ ನೋಡಿರುವಿರೋ. ಅಲ್ಲಾಹನು ಮಸೀಹರನ್ನು ನಿಮಗೋಸ್ಕರ ಅನ್ಯ ಸಮುದಾಯಗಳ ವಿರುದ್ಧ ಹೋರಾಡಲು ಪೈಲ್ವಾನ ರೀತಿಯಲ್ಲಿ ಕಳುಹಿಸಿದನು. ಯುದ್ಧ (ಕುಸ್ತಿ) ವೇ ಆಗಿತ್ತು. ಹುಡುಕಿ ನೋಡಿರಿ. ಇಂದು ಆಥಮ್ ಎಲ್ಲಿದ್ದಾನೆ? ಕೇಳಿರಿ! ಅವನು ಮಣ್ಣು ಪಾಲಾಗಿದ್ದಾನೆ. ಅಲ್ಲಾಹನು ತನ್ನ ದಿವ್ಯವಾಣಿಯಲ್ಲಿ ನೀಡಿದ ಶರತ್ತಿನಂತೆ ಕೆಲ ಅವಧಿ ಮುಕ್ತನಾದನು. ಮತ್ತೆ ದಿವ್ಯವಾಣಿಯ ಶರತ್ತಿನ ಪ್ರಕಾರ ಶಪಿಸಲ್ಪಟ್ಟನು.

ಎರಡನೆಯ ಕುಸ್ತಿ ಲೇಖ್‌ರಾಮನದ್ದಾಗಿದೆ. ಇಂದು ಯೋಚಿಸಿ ನೋಡಿರಿ. ಈ ಕುಸ್ತಿಯಲ್ಲೂ ಅಲ್ಲಾಹನು ಹೇಗೆ ವಿಜಯ ಗೊಳಿಸಿದನು? ನೀವು ಕಣ್ಣಾರೆ ನೋಡಿದವರಾಗಿದ್ದೀರಿ. ಅವನ ಸಾವಿನ ಕುರಿತು ಅಲ್ಲಾಹನು ಭವಿಷ್ಯವಾಣಿಯಲ್ಲಿ ಯಾವ ರೀತಿಯಲ್ಲಿ ವಿವರಿಸಿದ್ದನೋ ಅದೇ ರೀತಿ ಸಂಭವಿಸಿದೆ. ಅಲ್ಲಾಹನ ಪ್ರಕೋಪವು ಒಂದು ಸಮುದಾಯವನ್ನು ಶೋಕಗ್ರಸ್ತವಾಗಿಸಿದೆ. ಆದುದರಿಂದ ಓ ಮುಸಲ್ಮಾನರ ಸಂತತಿಯೇ ಅಲ್ಲಾಹನ ದೃಷ್ಟಾಂತಗಳನ್ನು ಅವಹೇಳನ ಮಾಡಬೇಡಿರಿ.

ಮೂರನೇ ಕುಸ್ತಿ ಮಹೋನ್ನತ ಸಮಾರಂಭದ್ದಾಗಿದೆ. ನೋಡಿರಿ ಈ ಕುಸ್ತಿಯಲ್ಲೂ ಅಲ್ಲಾಹನು ಇಸ್ಲಾಮ್ ಧರ್ಮವನ್ನು ಪ್ರಖ್ಯಾತಪಡಿಸಿದನು ಮತ್ತು ನಮಗೆ ತನ್ನ ದೃಷ್ಠಾಂತವನ್ನು ತೋರಿಸಿದನು. ಸಮಯಕ್ಕಿಂತ ಮುಂಚೆಯೇ "ಈ ವಿಷಯ ಎಲ್ಲ ವಿಷಯಗಳ ಮೇಲೆ ವಿಜಯ ಸಾಧಿಸುವುದು" ಎಂದು ತನ್ನ ದಾಸನ ಮೇಲೆ ಪ್ರಕಟಪಡಿಸಿದನು. ಮತ್ತು ಹಾಗೆಯೇ ಮಾಡಿ ತೋರಿಸಿದನು. ಆ ಅನುಗ್ರಹ ಅಲ್ಲಾಹನ ಹೊರತು ಯಾರ ಕಾರ್ಯವಾಗಿತ್ತು? ಇದು ಮಸೀಹರು(ಅ) ಜಲ್ಸದ ಸಮಯದಲ್ಲಿ ತನ್ನ ಗ್ರಂಥ "ಇಸ್ಲಾಮಿ ಉಸೂಲ್ ಕೀ ಫಿಲಾಸಫಿ" (ಇಸ್ಲಾಂ ಧರ್ಮದ ತತ್ವಜ್ಞಾನ) ಓದಿ ಹೇಳಿದರು ಮತ್ತು ಅದರ ಯಶಸ್ಸಿನ ಬಗ್ಗೆ ಅಲ್ಲಾಹನು ಅವರಿಗೆ ಮೊದಲೇ ಭವಿಷ್ಯವಾಣಿ ನೀಡಿದ ಸಂದರ್ಭ ವಿವರಿಸುತ್ತ ಹೇಳುತ್ತಿದ್ದಾರೆ. ಅಲ್ಲಾಹನ ಭವಿಷ್ಯವಾಣಿಯಂತೆಯೇ ಇತರರು ಸಹ ಘೋಷಿಸಿದರು. ಖಂಡಿತವಾಗಿಯೂ ಇದು ಅತ್ಯಂತ ಯಶಸ್ವಿ ವಿಷಯವಾಗಿತ್ತು.

ಮತ್ತೆ ಮಸೀಹರು(ಅ) ಹೇಳಿದರು ನಾಲ್ಕನೆಯ ಕುಸ್ತಿ ಡಾ॥ ಕ್ಲಾರ್ಕ್‌ನ ಮೊಕದ್ದಮೆ ಆಗಿದೆ. ಅದರಲ್ಲಿ ಮೂರು ಸಮುದಾಯಗಳು ಆರ್ಯ, ಕ್ರೈಸ್ತ ಮತ್ತು ವಿರೋಧಿ ಮುಸಲ್ಮಾನರು ಒಟ್ಟುಗೂಡಿದ್ದರು. ಶತಾಯ ಗತಾಯ ನನ್ನ ಮೇಲೆ ಹತ್ಯೆಯ ಮೊಕದ್ದಮೆ ಸಾಬೀತುಪಡಿಸಲು ಒಂದಾಗಿದ್ದರು. ಅಲ್ಲಾಹನು ಅದರಲ್ಲಿಯೂ ಅವರು ಅಸಫಲರಾಗುವರು ಎಂದು ನನಗೆ ಮೌಖಿಕವಾಗಿ ತಿಳಿಸಿದ್ದನು. ಸುಮಾರು ಎರಡು ನೂರು ಜನರಿಗೆ ಮುಂಚಿತವಾಗಿ ಈ ಭವಿಷ್ಯವಾಣಿಯ ಕುರಿತು ತಿಳಿಸಲಾಗಿತ್ತು. ಅಂತಿಮವಾಗಿ ನಮ್ಮ ವಿಜಯವಾಯಿತು.

ಐದನೇಯ ಕುಸ್ತಿ ಮಿರ್ಝಾ ಅಹ್ಮದ್ ಬೇಗ್ ಹೋಶಿಯಾರಪುರಿಯವರ ಮೊಕದ್ದಮೆ ಆಗಿದೆ. ಅವರು ಮತ್ತು ಅವರ ನಿಕಟ ಸಂಬಂಧಿಕರು ಇಸ್ಲಾಮಿನ ಕುರಿತು ಅಪಹಾಸ್ಯ ಮಾಡುತ್ತಿದ್ದರು. ಅವರಲ್ಲಿ ಕೆಲವರು ಧರ್ಮಭ್ರಷ್ಟರಾಗಿ ಪವಿತ್ರ ಖುರ್‌ಆನ್‌ನ್ನು ಧಿಕ್ಕರಿಸುತ್ತಿದ್ದರು ಮತ್ತು ಇಸ್ಲಾಮಿನ ಕುರಿತು ಅಪಶಬ್ದಗಳನ್ನು ನುಡಿದು ನನ್ನಿಂದ ಇಸ್ಲಾಮಿನ ಸಾಕ್ಷ್ಯದ ದೃಷ್ಠಾಂತವನ್ನು ಬಯಸುತ್ತಿದ್ದರು. ಮತ್ತು ಜಾಹೀರಾತು ಪ್ರಕಟಿಸಿದ್ದರು. ಅದರ ಫಲವಾಗಿ ಅಲ್ಲಾಹನು ಈ ದೃಷ್ಠಾಂತವನ್ನು ನೀಡಿದನು. ಅಹ್ಮದ್ ಬೇಗ್ ತನ್ನ ನಿಕಟ ಸಂಬಂಧಿಯ ಸಾವು ನೋವುಗಳನ್ನು ಎದುರಿಸಿ ಮೂರು ವರ್ಷಗಳ ಒಳಗೆ ಮರಣ ಹೊಂದುವನು. ಹಾಗೆಯೇ ಆಯಿತು. ಅವನು ನಿಗದಿತ ಅವಧಿಯ ಒಳಗೆಯೇ ಮರಣ ಹೊಂದಿದನು. ಇದು ಅವನ ಹದ್ದುಮೀರಿದ ಶಿಕ್ಷೆಯಾಗಿತ್ತು. (ಅಯ್ಯಾಮುಸ್ಸಲಹ, ರೂಹಾನಿ ಖಝಾಯೀನ್ ಸಂಪುಟ–14, ಪುಟ–325–327)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಲೋಕದ ಜನರಿಗೆ ಎಚ್ಚರಿಕೆ ನೀಡಿದರು. ಅಲ್ಲಾಹನು ಕಳುಹಿಸಿದವನ ವಿರುದ್ಧ ಯುದ್ಧ ಮಾಡಬೇಡಿರಿ. ಅವನನ್ನು ಅಲ್ಲಾಹನು ಕಳುಹಿಸಿದ್ದರೆ ಅವನಿಗೆ ಅಲ್ಲಾಹನು ಸಹಾಯವನ್ನು ಸಹ ನೀಡುವನು. ದೃಷ್ಟಾಂತಗಳನ್ನೂ ತೋರಿಸುವನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನು ನನ್ನೊಂದಿಗೆ ಗಂಭೀರ ಶಬ್ದಗಳಲ್ಲಿ ಹೇಳಿದ್ದಾನೆ: "ಲೋಕದಲ್ಲಿ ಒಬ್ಬ ಮುನ್ನೆಚ್ಚರಿಕೆ ನೀಡುವವನು ಆಗಮಿಸಿದನು. ಆದರೆ ಲೋಕ ಅವನನ್ನು ಅಂಗೀಕರಿಸಲಿಲ್ಲ. ಆದರೆ ಅಲ್ಲಾಹನು ಅವನನ್ನು ಅಂಗೀಕರಿಸುವನು ಮತ್ತು ಬಹಳ ತೀವ್ರವಾದ ಆಕ್ರಮಣಗಳ ಮೂಲಕ ಅವನ ಸತ್ಯತೆಯನ್ನು ಪ್ರಕಟಿಸುವನು." (ಬರಾಹೀನೆ ಅಹ್ಮದಿಯ ಭಾಗ–4, ರೂಹಾನಿ ಖಝಾಯೀನ್ ಸಂಪುಟ–1, ಪುಟ–665, ಅಡಿಟಿಪ್ಪಣಿಯ ಅಡಿಟಿಪ್ಪಣಿ ಸಂಖ್ಯೆ–4)

ಇಂದು ಇನ್ನೂರಕ್ಕಿಂತ ಹೆಚ್ಚು ದೇಶಗಳಲ್ಲಿ ವ್ಯಾಪಿಸಿರುವ ಅಹ್ಮದಿಯಾ ಜಮಾಅತ್ ಘೋಷಿಸುತ್ತಿದೆ – ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಯನ್ನು ಲೋಕಕ್ಕೆ ಬಹಿರಂಗ ಪಡಿಸುತ್ತಾ ಇದ್ದಾನೆ. ಅಲ್ಲಾಹನು ನಮ್ಮನ್ನು ಅವರ ಆಗಮನೋದ್ದೇಶವನ್ನು ಈಡೇರಿಸಲು ಅದರಲ್ಲಿ ಭಾಗವಹಿಸುವವರನ್ನಾಗಿ ಮಾಡಲಿ. ನಮ್ಮ ವಿಶ್ವಾಸವನ್ನು ಫಲವತ್ತನ್ನಾಗಿ ಮಾಡಲಿ. ನಾವು ನಮ್ಮ ಹೊಣೆಗಾರಿಕೆಗಳನ್ನು ಈಡೇರಿಸುವ ಭಾಗ್ಯವನ್ನು ನಮಗೆ ದಯಪಾಲಿಸುವವನಾಗಲಿ.

ಈಗ ನಾನು ಇಂದಿನ ಕಾಲದಲ್ಲಿ ಲೋಕದಲ್ಲಿ ಹರಡುತ್ತಿರುವ ಕೊರೋನಾ ವೈರಸ್ ಬಗ್ಗೆ ಲೋಕದ ವಿದ್ವಾಂಸರ ವ್ಯಾಖ್ಯಾನಗಳು ಹಾಗೂ ಅವರ ವಾದಗಳನ್ನು ಪ್ರಸ್ತಾಪಿಸುವೆನು.

Philip Johnston ಡೇಲಿ ಟೆಲಿಗ್ರಾಫ್ ಮಾರ್ಚ್ 16, 2020 ರಲ್ಲಿ ಹೀಗೆ ಬರೆದಿದ್ದಾರೆ. Netflix ಮತ್ತು ಅದೇ ರೀತಿಯ ಇತರ ಬೇಡಿಕೆಗಳಿಂದ ಬಂದ ವರದಿ ಇದೆ. ಇಂದು ತೋರಿಸಲಾಗುತ್ತಿರುವ 2011 ರ ಒಂದು ಸಿನಿಮಾ ತುಂಬ ಖ್ಯಾತಿ ಪಡೆಯುತ್ತಿದೆ. ಅದರ ಹೆಸರು contagion ಆಗಿದೆ. ಆ ಕಥೆಯಲ್ಲಿ ಒಂದು Virus ನ ಹರಡುವಿಕೆ ತಜ್ಞ ವೈದ್ಯರು ಮತ್ತು ಆರೋಗ್ಯ ಸಂಸ್ಥೆಗಳಿಂದ ಆ ರೋಗದ ಗುರುತಿಸುವಿಕೆ ಮತ್ತು ಅದರ ಚಿಕಿತ್ಸಾ ಮಾರ್ಗ ಹುಡುಕುವ ಸತತ ಪ್ರಯತ್ನಗಳು, ಸಾಮಾಜಿಕ ಶಿಸ್ತು, ಪ್ರಬುದ್ಧತೆಯ ನಾಶ ಮತ್ತು ಕೊನೆಯಲ್ಲಿ ಅದರ ಹರಡುವಿಕೆಯನ್ನು ತಡೆಯಲು Vaccine ಕಂಡುಹಿಡಿಯುವ ವಿವರಣೆ ಸಿಗುತ್ತವೆ.

ಅವನು ಬರೆಯುತ್ತಾನೆ. ನಾನು ಯೋಚಿಸುತ್ತೇನೆ. ನಮ್ಮ ಲೋಕದ ಪ್ರತಿ ನಾಶ ಹೊಂದುವ ಕುರಿತು ಈ ರೀತಿಯ ಸಿನಿಮಾಗಳಲ್ಲಿ ಆಸಕ್ತಿ ವಹಿಸುವುದು ನಮ್ಮ ದೀರ್ಘವಾದ ಸ್ಥಿರತೆ ಮತ್ತು ಪ್ರಗತಿಗೆ ಕಾರಣವಾಗಿದೆ. ಪ್ರಗತಿ ಹೊಂದುತ್ತಿರುವ ಈ ಲೋಕವು ಬಹುಶಃ ನಮ್ಮಲ್ಲಿ ಬಹುತೇಕ ಭಾವನೆಯಾಗದೇ ಶಾಶ್ವತವಾಗಿರುವುದು. ಇದು ಆಶ್ಚರ್ಯಕರ ಸಂಗತಿಯಾಗಿದೆ. ಕೇವಲ ಎರಡು ವಾರಗಳಲ್ಲಿ ನಮ್ಮ ಲೋಕವು ತಲ್ಲಗೊಂಡಿದೆ. ಮುಂದಿನ ನಮ್ಮ ಎಲ್ಲ ಯೋಜನೆಗಳು ಸ್ಥಗಿತಗೊಂಡಿವೆ ಮತ್ತು ಭವಿಷ್ಯದ ಕುರಿತು ನಮ್ಮ ಭರವಸೆಗಳು ಅಸ್ಪಷ್ಟವಾಗಿವೆ. ಶೀಥಲ ಸಮರದ ನಡುವೆ ಪರಮಾಣು ಯುದ್ಧದ ಅಪಾಯವಿಲ್ಲ. ಅಲ್ಲದೇ ವರ್ತಮಾನದಲ್ಲಿ ಬರುವ ವಿವಿಧ ಆರ್ಥಿಕ ಬಿಕ್ಕಟ್ಟುಗಳ ಪರಿಣಾಮವು ಈ ಮಹಾಮಾರಿಯಿಂದ ಆಗುವಂತೆ ಕಾಣುತ್ತಿರಲಿಲ್ಲ. ಹಿಂದಿನ ಜಾಗತಿಕ ಯುದ್ಧಗಳ ನಡುವೆಯೂ ಜನರು ಥಿಯೇಟರ್ ಮತ್ತು ಸಿನಿಮಾ, ರೆಸ್ಟೋರೆಂಟ್ ಮತ್ತು ಕೆಫೆ, ಗಲ್ಲಿಗಳಿಗೆ ಮತ್ತು ಪಬ್‌ಗಳಿಗೆ ಹೋಗುತ್ತಿದ್ದರು. ಕನಿಷ್ಠ ಮಟ್ಟ ಇಷ್ಟಾದರೂ ಜನರಿಗೆ ಸವಲತ್ತು ದೊರೆಯುತ್ತಿತ್ತು. ಆದರೆ ಇಂದು ನಾವು ಇದರಿಂದಲೂ ವಂಚಿತರಾಗಿದ್ದೇವೆ. ನಮ್ಮಲ್ಲಿ ಹೆಚ್ಚಿನವರು ಎರಡನೇ ಮಹಾಯುದ್ಧದ ನಂತರ ಬೆಳೆದು ಬಂದವರು. ಆ ಜನಗಳು ಸದಾ ಸುಖಿ ಸ್ಥಿರತೆ ಮತ್ತು ನೆಮ್ಮದಿಯ ಆಶಯ ಹೊಂದಿದ್ದರು. ಅದರ ಹಿಂದಿನ ಪೀಳಿಗೆಗಳಿಗೆ ಊಹಿಸಲು ಸಾಧ್ಯವಿರಲಿಲ್ಲ. ಅವರು ಇಂತಹ ಸ್ಥಿತಿ ಎದುರಿಸಿರಲಿಲ್ಲ. ಮತ್ತು ಮುಂದುವರೆದು ಬರೆಯುತ್ತಾನೆ. ವಿಜ್ಞಾನವು ಈ ರೋಗದ Vaccine ಅಥವಾ ಚಿಕಿತ್ಸೆ ಸಂಶೋಧಿಸಿ ನಮ್ಮ ರಕ್ಷಣೆಗೆ ಬರಬಹುದೆಂದು ಆಶಿಸುತ್ತೇನೆ. ಬಹುಶಃ ಹೀಗೆ ಆಗಲೂಬಹುದು ಮತ್ತು ಇಂದು ಅಮೇರಿಕಾದಲ್ಲಿ ಮಾನವ ಸ್ವಯಂ ಸೇವಕರ ಮೇಲೆ ಸಂಶೋಧನೆ ನಡೆಸುವ ಕಾರ್ಯ ಆರಂಭಗೊಂಡಿದೆ. ವಿಷಾದದ ಸಂಗತಿ ಎಂದರೆ ಇದನ್ನು ಕಂಡು ಹಿಡಿಯಲು ತಿಂಗಳುಗಳೇ ಕಳೆದು ಹೋಗುವುದು. ಆದರೂ ಈ Vaccine ನಿಂದ ಪ್ರಯೋಜನ ಆಗಬಹುದೋ ಇಲ್ಲವೋ ಎಂಬುದರ ಬಗ್ಗೆ ಖಚಿತತೆಯಿಲ್ಲ. ಇಂದು ಜನರು ಇಂತಹ ಪರಿಸ್ಥಿತಿಯಲ್ಲಿ ತಮ್ಮ ವಿಶ್ವಾಸಗಳ ಸಹಕಾರ ಪಡೆದು ತನ್ನನ್ನು ಪರಿಸರದೊಂದಿಗೆ ಹೊಂದಿಸಿಕೊಂಡದ್ದು ಕಂಡುಬರುವುದಿಲ್ಲ. ಪುರಾತನ ಇತಿಹಾಸದಲ್ಲಿ ಇಂತಹ ಭಯಂಕರವಾದ ಪರಿಸ್ಥಿತಿಗಳು ಉದ್ಭವವಾದರೆ ಅವರು ತಮ್ಮ ವಿಶ್ವಾಸಗಳ ಸಹಕಾರ ಪಡೆಯುತ್ತಿದ್ದು ಕಾಣುತ್ತಿದ್ದವು. ಏಕೆಂದರೆ ಆ ಜನರ ಮತ್ತು ಅವರ ಪ್ರೀತಿಯ ಸಂಬಂಧಿಕರೊಡನೆ ಏನೆಲ್ಲ ಘಟಿಸಿದೆ ಅದು ಸಾರ್ಥಕಗೊಳಿಸಲು ಅವರು ಅಲ್ಲಾಹನ ಕಡೆ ಮರಳಿದರು. ನಾಸ್ತಿಕರು ಇಂತಹ ಸಂದರ್ಭದಲ್ಲಿ ಯಾವಾಗಲೂ ತಮ್ಮನ್ನು ತಾವು ಸಂತೋಷಪಡಿಸಲು ಒಂದು ಸೆಕ್ಯೂಲರ್ ಮಾನವೀಯ ದೃಷ್ಟಿಕೋನವನ್ನು ಹೊಂದಿರುತ್ತಾರೆ. ಇದು ಪ್ರಾಥಮಿಕ ಹಂತದ ಹೃದಯ ವೈಶಾಲ್ಯವಾಗಿದೆ. ನಾಸ್ತಿಕರು ಅದನ್ನು ನೆಚ್ಚಿಕೊಂಡು ಇರುತ್ತಾರೆ. ಅವರ ಅಭಿಮತವೆಂದರೆ ಮಾನವೀಯ ಪ್ರಯತ್ನಗಳಿಂದ ದೈವಿಕ ಕ್ರಿಯೆಗಳನ್ನು ಸರಿಪಡಿಸಬಹುದು ಎಂಬುದಾಗಿದೆ. ಅದನ್ನು ವಿಧಿ ಅಥವಾ ದೈವಿಕ ಪ್ರಕೋಪದೊಂದಿಗೆ ಜೋಡಿಸುವುದು ಅನಿವಾರ್ಯವಲ್ಲ. ನಾವು ಎಷ್ಟೋ

ಸಲ ಜನರು ಹೀಗೆ ಹೇಳುತ್ತಿರುವುದನ್ನು ಕಂಡಿದ್ದೇವೆ. "ಎಲ್ಲವು ಸರಿಯಾಗುವುದು ಏಕೆಂದರೆ ವಿಜ್ಞಾನಿಗಳು ಏನಾದರೂ ಪರಿಹಾರ ಹುಡುಕುವರು. ಅದು Global warming ಸಮಸ್ಯೆಯಾಗಲಿ ಅಥವಾ ಯಾವುದೇ ಮಹಾಮಾರಿಯಾಗಿರಲಿ. ನಮಗೆ ಶೀಘ್ರದಲ್ಲಿ ತಿಳಿದುಬರುವುದು ಈ ರೀತಿಯ ಆಶಯ ಹೊಂದುವುದು ಸರಿಯೋ ತಪ್ಪೋ ಎಂಬುದು. ಹೀಗಿಲ್ಲವಾದರೆ (ಸ್ವಯಂ ನಾಸ್ತಿಕನಾಗಿದ್ದಾನೆ) ಮತ್ತೆ ಬಹುಶಃ ನಾನು ಚರ್ಚ್‌ಗೆ ಮರಳುವೆನು. ಸದ್ಯ ನಾನು ಧರ್ಮದಿಂದ ದೂರವಿದ್ದೇನೆ. ದೇವನಿಂದ ದೂರನಿದ್ದೇನೆ. ಮತ್ತು ಪ್ರಸ್ತುತ ಪರಿಸ್ಥಿತಿಗಳು ಇದನ್ನು ಸ್ಪಷ್ಟಪಡಿಸುತ್ತಿದೆ. ಹೀಗೆ ಆಗದಿರುತ್ತಿದ್ದರೆ ವಿಜ್ಞಾನಿಗಳು ಹೇಳಿದ ಹಾಗೆ ಮತ್ತೆ ನಮಗೆ ಯೋಚಿಸಬೇಕಾಗುವುದು. **"ಚರ್ಚ್‌ನ ಕಡೆ ಮರಳಿ ಹೋಗುವುದು, ಧರ್ಮದ ಕಡೆ ಮರಳಿ ಹೋಗುವುದು."**

ಈ ವೈರಸ್, ಲೋಕವನ್ನು ದೇವನ ಕಡೆಗೆ ತಿರುಗುವ ಬಗ್ಗೆ ಯೋಚಿಸಲು ನಿರ್ಬಂಧಿಸಿದೆ. ಆದರೆ ನೈಜ ದೇವನು ಮತ್ತು ಜೀವಂತ ದೇವನು ಇಸ್ಲಾಮಿನ ದೇವನು ಮಾತ್ರವಾಗಿದ್ದಾನೆ. ಅವನು ತನ್ನ ಕಡೆಗೆ ಬರುವವರಿಗೆ ಮಾರ್ಗವನ್ನು ತೋರಿಸುವುದಾಗಿ ವಾಗ್ದಾನ ಮಾಡಿದ್ದಾನೆ. ಇಂತಹ ಪರಿಸ್ಥಿತಿಯಲ್ಲಿ ನಾವು ನಮ್ಮನ್ನು ಸುಧಾರಣೆ ಮಾಡುವುದರ ಆವಶ್ಯಕತೆ ಇದೆ. ನಾವು ತಬ್ಲೀಗನ್ನು ಪ್ರಭಾವಶಾಲಿಯನ್ನಾಗಿ ಮಾಡುವ ಆವಶ್ಯಕತೆ ಇದೆ. ಲೋಕಕ್ಕೆ ಇಸ್ಲಾಮನ್ನು ಮೊದಲಿಗಿಂತ ಮಿಗಿಲಾಗಿ ಪರಿಚಯ ಮಾಡಿಸಿಕೊಡುವ ಆವಶ್ಯಕತೆ ಇದೆ. ಪ್ರತಿಯೊಬ್ಬ ಅಹ್ಮದಿ ಲೋಕಕ್ಕೆ ಹೀಗೆ ತಿಳಿಸಲು ಪ್ರಯತ್ನಿಸುವವನಾಗಬೇಕು: ನೀವು ಬದುಕಿ ಉಳಿಯಲು ಬಯಸುವುದಾದರೆ ನಿಮ್ಮನ್ನು ಸೃಷ್ಟಿಸಿದ ದೇವನನ್ನು ಗುರುತಿಸಿರಿ. ನೀವು ನಿಮಗೆ ಉತ್ತಮ ಅಂತಿಮ ಗತಿ ಆಶಿಸುವುದಾದರೆ ನಿಮ್ಮನ್ನು ಸೃಷ್ಟಿಸಿದ ದೇವನನ್ನು ಗುರುತಿಸಿರಿ. ಪರಲೋಕ ಜೀವಿತವೆಂಬ ಅಂತಿಮ ಗತಿಯೇ ವಾಸ್ತವಿಕ ಅಂತಿಮ ಗತಿಯಾಗಿದೆ. ಆ ಏಕದೇವನೊಂದಿಗೆ ಯಾರನ್ನೂ ಸಹಭಾಗಿಗಳಾಗಿ ಮಾಡಬೇಡಿರಿ. ಅದೇ ರೀತಿ ದೇವನ ಸೃಷ್ಟಿಗಳ ಹಕ್ಕುಗಳನ್ನು ಸಹ ಈಡೇರಿಸಿರಿ.

ಈಗ ಲೌಕಿಕ ಜನರು ಸಹ ಹೇಳುತ್ತಾರೆ: ಈ ವಿಪತ್ತು ವ್ಯಾಪಕವಾಗಿ ಹರಡಲಿದೆ ಎಂದು. ನಾವು ನಮ್ಮ ಉತ್ತಮ ಅಂತಿಮ ಗತಿಗೋಸ್ಕರ ಅಲ್ಲಾಹನ ಕಡೆಗೆ ತಿರುಗುವುದು ಬಹಳ ಆವಶ್ಯಕವಾಗಿದೆ. ನಾವು ಲೋಕಕ್ಕೆ ಸಹ ತಿಳಿಸಬೇಕು. ವಾಸ್ತವಿಕ ಅಂತಿಮ ಗತಿ ಪರಲೋಕದ ಜೀವಿತವೆಂಬ ಅಂತಿಮ ಗತಿಯಾಗಿದೆ. ಆದುದರಿಂದ ನೀವು ಅಲ್ಲಾಹನ ಕಡೆಗೆ ಬರುವುದು ಆವಶ್ಯಕವಾಗಿದೆ ಎಂದು. ಇದಕ್ಕೆ ಸಂಬಂಧಿಸಿ ಒಬ್ಬ ತಜ್ಞ The Timesನಲ್ಲಿ ಬರೆದಿದ್ದಾನೆ, ಇದು ಮಾರ್ಚ್ ತಿಂಗಳಲ್ಲಿ ಪ್ರಕಟಗೊಂಡಿದೆ. ಓರ್ವ ತಜ್ಞನು ಹೀಗೆ ಮುನ್ನೆಚ್ಚರಿಕೆ ನೀಡಿದ್ದಾರೆ: ಅಪಾಯಕಾರಿ ವೈರಸಿನ ಜೀನಗೆ ಸಂಬಂಧಿಸಿದ ಬದಲಾವಣೆಗಳು ಸಾಮಾನ್ಯವಾಗುವ ಬಹಳ ಸಾಧ್ಯತೆಗಳಿವೆ. ಅದರೊಂದಿಗೆ ಕೆಲವು ವರ್ಷಗಳಲ್ಲಿ ಇನ್ನೊಂದು ಕರೋನಾ ವೈರಸ್ ಲೋಕದಲ್ಲಿ ಹರಡುವ ಸಾಧ್ಯತೆ ಸಹ ಇದೆ. ಪ್ರತಿ ಮೂರು ವರ್ಷಗಳ ನಂತರ ಪ್ರಾಯಶಃ ಹೊಸ ರೋಗಗಳು ಬರಬಹುದು ಎಂದು ಅವರು ಹೇಳುತ್ತಾರೆ.

ಮತ್ತೆ ಬಲೋಮ್‌ಬರ್ಗ್ ಸಹ ಒಂದು ಲೇಖನ ಬರೆದಿದ್ದಾನೆ. ಅವನು ಹೇಳುತ್ತಾನೆ ವಿಜ್ಞಾನಿಗಳು ಕರೋನ ವೈರಸಿನ ಮೇಲೆ ಹತೋಟಿ ಹೊಂದಬಹುದಾಗಿದೆ. ಆದರೆ ಸಾಂಕ್ರಾಮಿಕ ರೋಗಗಳ ವಿರುದ್ಧ ಎಂದೂ ಕೊನೆಗೊಳ್ಳದ ಯುದ್ಧದಲ್ಲಿ ಮಾನವರು ನಿರತರಾಗಬೇಕಾಗುತ್ತದೆ. ಇವುಗಳ ಬಗ್ಗೆ ದೀರ್ಘ ವಿವರಣೆಗಳಿವೆ. ಅವುಗಳನ್ನೆಲ್ಲಾ ವಿಶದೀಕರಿಸಲು ಸಾಧ್ಯವಿಲ್ಲ. ಆದರೆ ನಮ್ಮ ಅಂತಿಮಗತಿ ಉತ್ತಮವಾಗಲಿಕ್ಕೋಸ್ಕರ ನಾವು ಅಲ್ಲಾಹನೊಂದಿಗೆ ಮೊದಲಿಗಿಂತ ಉತ್ತಮ ಮಟ್ಟದಲ್ಲಿ ಸಂಬಂಧವನ್ನು ಸ್ಥಾಪಿಸುವ ಆವಶ್ಯಕತೆ ಇದೆ. ಅಲ್ಲಾಹನು ನಮಗೆ ಹಾಗೆ ಮಾಡಲು ಸಾಧ್ಯವಾಗುವಂತೆ ಭಾಗ್ಯ ನೀಡಲಿ.

ಕರೋನ ಮಹಾಮಾರಿಯ ಬಗ್ಗೆ ನಾನು ಮೊದಲು ಸಹ ಮಾರ್ಗದರ್ಶನ ನೀಡಿದ್ದೆನು. ಈಗ ಮತ್ತೊಮ್ಮೆ ನೆನಪಿಸುತ್ತೇನೆ. ಏಕೆಂದರೆ ಲೋಕದಲ್ಲಿ ಇದು ಬಹಳ ವೇಗವಾಗಿ ಹರಡುತ್ತಾ ಇದೆ. ಇಲ್ಲಿ ಸಹ ಇದರ ಪ್ರಭಾವ ಬಹಳ ಹೆಚ್ಚಾಗಿದೆ. ಆದುದರಿಂದ ಸರಕಾರ ಕಠಿಣ ಕ್ರಮಗಳನ್ನು ಕೈಗೊಳ್ಳಲು ನಿರ್ಬಂಧಿತವಾಗಿದೆ. ಬಹಳ ದೊಡ್ಡ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ಸಾಂಕ್ರಾಮಿಕ ರೋಗ ಹಬ್ಬುವಾಗ ಅದು ಪ್ರತಿಯೊಬ್ಬನನ್ನು ಆಕ್ರಮಿಸುವ ಸಾಧ್ಯತೆಗಳಿವೆ. ಆದುದರಿಂದ ಪ್ರತಿಯೊಬ್ಬನು ಬಹಳ ಜಾಗರೂಕತೆ ವಹಿಸುವ ಆವಶ್ಯಕತೆ ಇದೆ. ಸರಕಾರದ ಮಾರ್ಗದರ್ಶನಗಳನ್ನು ಪಾಲಿಸಿರಿ. ವೃದ್ಧರು, ರೋಗಿಗಳು, ಪ್ರತಿರೋಧ ಶಕ್ತಿ ಕಡಿಮೆ ಇರುವ ರೋಗಿಗಳು ಬಹಳ ಜಾಗ್ರತೆ ವಹಿಸಬೇಕಾಗಿದೆ. ವೃದ್ಧರು ಮನೆಯಿಂದ ಹೊರಗೆ ಹೋಗುವುದನ್ನು ಕಡಿಮೆ ಮಾಡಬೇಕು. ಮಸ್‌ಜಿದ್‌ಗೆ ಬರುವುದಕ್ಕೆ ಸಂಬಂಧಿಸಿ ಸಹ ಜಾಗರೂಕತೆ ವಹಿಸಿರಿ. ನಿಮ್ಮ ಸ್ವಂತ ಪ್ರದೇಶದ ಮಸ್‌ಜಿದ್‌ನಲ್ಲಿ ಜುಮುಅ ನಮಾಝ್ ನಿರ್ವಹಿಸಿರಿ. ಜುಮುಅಕ್ಕೆ ಜಮಾಯಿಸಬಾರದೆಂದು ಸರಕಾರದ ಆಜ್ಞೆ ಇದ್ದರೆ ಅದನ್ನು ಪಾಲಿಸಿರಿ. ಮಹಿಳೆಯರು ಮಸ್‌ಜಿದ್‌ಗೆ ಬರುವುದನ್ನು ನಿಲ್ಲಿಸಿರಿ. ಮಕ್ಕಳೊಂದಿಗೆ ಬರುವವರು ಬರಬಾರದು. ಅದೇ ರೀತಿ ನಿಮ್ಮ ಶರೀರದ ಪ್ರತಿರೋಧಕ ಶಕ್ತಿ ವರ್ಧಿಸಲು ವಿಶ್ರಾಂತಿ ಪಡೆಯುವುದರ ಕಡೆಗೆ ಸಹ ಗಮನ ಹರಿಸಿರಿ. ಮಕ್ಕಳಿಗೆ ಬೇಗನೆ ನಿದ್ರಿಸಿ ಬೇಗನೆ ಎದ್ದೇಳುವ ಅಭ್ಯಾಸ ಮಾಡಿಸಬೇಕು. ಅವರು ಎಂಟೊಂಬತ್ತು ಗಂಟೆ ನಿದ್ರೆ ಮಾಡಬೇಕು. ಬಜಾರಿನಲ್ಲಿ ದೊರಕುವ ಆಹಾರ, ವಿಶೇಷವಾಗಿ ಪ್ಯಾಕೆಟ್‌ನಲ್ಲಿ ಬರುವ ಚಿಪ್ಸ್ ಮೊದಲಾದುವುಗಳನ್ನು ತಿನ್ನದಂತೆ ನೋಡಿಕೊಳ್ಳಿರಿ.

ಡಾಕ್ಟರ್‌ಗಳು ಹೇಳುತ್ತಿದ್ದಾರೆ– ನೀರನ್ನು ಪದೇ ಪದೇ ಕುಡಿಯಬೇಕೆಂದು. ಒಂದು ಗಂಟೆಯ ನಂತರ, ಅರ್ಧ ಗಂಟೆ ಮುಕ್ಕಾಲು ಗಂಟೆಗಳಿಗೊಮ್ಮೆ ಒಂದೆರಡು ಗುಟುಕು ನೀರು ಕುಡಿಯುತ್ತಾ ಇರಬೇಕು. ಇದು ಸಹ ರೋಗದಿಂದ ರಕ್ಷಣೆ ಪಡೆಯಲು ಇರುವ ಒಂದು ಮಾರ್ಗವಾಗಿದೆ. ಕೈಗಳನ್ನು ಸ್ವಚ್ಛವಾಗಿರಿಸಿರಿ. ಐದು ಸಾರಿ ವುಝು ಮಾಡುವವರಿಗೆ ಸ್ವಚ್ಛವಾಗಿಡಲು ಸಂದರ್ಭ ಸಿಗುತ್ತದೆ. ಅದರ ಕಡೆಗೆ ಗಮನ ಹರಿಸಿರಿ. ಸೀನುವಾಗ ಕರವಸ್ತ್ರ ಮುಖದ ಮುಂದೆ ಇರಿಸಿ ಸೀನಿರಿ. ಅಥವಾ ಮೊಳಕೈ ಗಂಟು ಮುಖದ ಮೇಲಿರಿಸಿ ಸೀನಿರಿ. ಆ ಮೂಲಕ ಮೂಗಿನಿಂದ ಹೊರಬರುವ ತುಣುಕುಗಳು ಹೊರಗೆ ಚೆಲ್ಲದಂತಾಗುತ್ತದೆ. ಒಟ್ಟಾರೆ ಹೇಳುವುದಾದರೆ ಸ್ವಚ್ಛತೆ ಬಹಳ ಆವಶ್ಯಕವಾಗಿದೆ. ಅದರ ಬಗ್ಗೆ ಗಮನ ಹರಿಸಿರಿ. ಆದರೆ ಕೊನೆಯ ಆಯುಧ ದುಆ ಆಗಿದೆ. ನಮ್ಮೆಲ್ಲರನ್ನು ಈ ಕೆಡುಕಿನಿಂದ ರಕ್ಷಿಸಬೇಕೆಂದು ಅಲ್ಲಾಹನನ್ನು ಬೇಡಿಕೊಳ್ಳಬೇಕು. ಈ ರೋಗದಿಂದ ಬಾಧಿತರಾದ ಎಲ್ಲಾ ಅಹ್ಮದಿಯರಿಗೋಸ್ಕರ ಸಹ ದುಆ ಮಾಡಿರಿ. ಎಲ್ಲರಿಗೋಸ್ಕರ ಸಹ ದುಆ ಮಾಡಿರಿ.

ಯಾವುದಾದರೂ ಬೇರೆ ರೋಗಬಾಧಿತರಾದವರು ಸಹ ತಮ್ಮ ಬಲಹೀನತೆ ಕಾರಣದಿಂದ ಈ ವೈರಸ್ ಆಕ್ರಮಣಕ್ಕೆ ಪಾತ್ರರಾಗುತ್ತಾರೆ. ಅವರಿಗೋಸ್ಕರ ಸಹ ಪ್ರಾರ್ಥಿಸಿರಿ. ಅಲ್ಲಾಹನು ಅವರನ್ನು ರಕ್ಷಿಸುವವನಾಗಲಿ. ಸಾಮಾನ್ಯವಾಗಿ ಎಲ್ಲರಿಗೋಸ್ಕರ ಸಹ ಪ್ರಾರ್ಥಿಸಿರಿ. ಅಲ್ಲಾಹನು ಲೋಕವನ್ನು ಈ ಮಹಾಮಾರಿಯಿಂದ ರಕ್ಷಿಸುವವನಾಗಲಿ. ರೋಗ ಬಾಧಿತರಾದವರಿಗೆ ಅಲ್ಲಾಹನು ಪೂರ್ಣ ಉಪಶಮನವನ್ನು ನೀಡುವವನಾಗಲಿ. ಪ್ರತಿಯೊಬ್ಬ ಅಹ್ಮದಿಗೆ ರೋಗೋಪಶಮನ ನೀಡುವುದರೊಂದಿಗೆ ವಿಶ್ವಾಸದಲ್ಲಿ ದೃಢತೆಯನ್ನು ಬಲಿಷ್ಠಗೊಳಿಸಲು ಭಾಗ್ಯ ದಯಪಾಲಿಸಲಿ – ಆಮೀನ್.

****************


## M.Sc Physics, B.Ed ಶಿಕ್ಷಕರು ಬೇಕಾಗಿದ್ದಾರೆ

ಸದರ್ ಅಂಜುಮನ್ ಅಹ್ಮದಿಯ ಖಾದಿಯಾನ್ ಅಡಿಯಲ್ಲಿ ನಝಾರತ್ ತಾಲೀಮ್‌ನಲ್ಲಿ ಒಂದು ಹುದ್ದೆ ತುಂಬಬೇಕಾಗಿರುವುದು. ಆಸಕ್ತಿವುಳ್ಳ ಅಭ್ಯರ್ಥಿಗಳು ಕೆಳಕಂಡ ವಿವರಗಳೊಂದಿಗೆ ಅರ್ಜಿ ಸಲ್ಲಿಸಬಹುದೆಂದು ತಮ್ಮ ಗಮನಕ್ಕರ ತರಲಾಗುತ್ತದೆ.

**ವಿವರಗಳು (ಶರತ್ತುಗಳು)**

- ಅಭ್ಯರ್ಥಿಯ ಶೈಕ್ಷಣಿಕ ಅರ್ಹತೆಯು UGC ಯಿಂದ ಮಾನ್ಯತೆಪಡೆದ ಯಾವುದೇ ವಿಶ್ವವಿದ್ಯಾಲಯದಿಂದ M.Sc Physics, B.Ed. ಶೇ50% ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು.
- ಯಾವುದೇ Secondary classನಲ್ಲಿ ಕನಿಷ್ಠ 2 ವರ್ಷದವರೆಗೆ Physics ಬೋಧಿಸುವ ಅನುಭವ ಹೊಂದಿರಬೇಕು.
- ಅಭ್ಯರ್ಥಿಯ ವಯಸ್ಸು 22 ರಿಂದ 37 ವರ್ಷ ನಡುವೆ ಅಗಿರಬೇಕು.
- ಕೇಂದ್ರ ಆಯ್ಕೆ ಸಮಿತಿಯಿಂದ ಆಯೋಜಿತ ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣ ಅಭ್ಯರ್ಥಿಯನ್ನೇ ಸಂದರ್ಶನಕ್ಕೆ ಕರೆಯಲಾಗುವುದು.
- ಲಿಖಿತ ಮತ್ತು ಮೂಖಿಕ ಸಂದರ್ಶನದಲ್ಲಿ ಉತ್ತೀರ್ಣಗೊಂಡ ಅಭ್ಯರ್ಥಿಯನ್ನು ನೂರ್ ಆಸ್ಪತ್ರೆ ಖಾದಿಯಾನ್ ಜಾರಿಗೊಳಿಸಿದ Medical fitness certificate ಪ್ರಸ್ತುತಪಡಿಸಬೇಕಾಗುವುದು.
- ಸಂದರ್ಶನಕ್ಕೆ ಹಾಜರಾಗುವ ಅಭ್ಯಥಿ ಖಾದಿಯಾನಗೆ ಹೋಗಿ ಬರುವ ಮತ್ತು ವೈದ್ಯಕೀಯ ಎಲ್ಲಾ ಖರ್ಚು ಸ್ವಯಂ ಭರಿಸಬೇಕಾಗುವುದು.
- ಆಯ್ಕೆಗೊಂಡ ನಂತರ ಖಾದಿಯಾನಿನಲ್ಲಿ ವಸತಿ ವ್ಯವಸ್ಥೆಯು ತಾನೇ ನೋಡಿಕೊಳ್ಳಬೇಕಾಗುವುದು.
- ಬದರ್ ವಾರ ಪತ್ರಿಕೆಯಲ್ಲಿ ಪ್ರಕಟಣೆ ನೀಡಿದ ಎರಡು ತಿಂಗಳ ನಂತರ ಪರೀಕ್ಷೆಯ ದಿನಾಂಕ ಸೂಚಿಸಲಾಗುವುದು.
- ಪ್ರಸ್ತುತ ಹುದ್ದೆಗೆ ಬೇಕಾದ ಅರ್ಜಿಯ ನಮೂನೆಗಳು ನಝಾರತ್ ದಿವಾನ್ ಖಾದಿಯಾನ್ ಮೂಲಕ ಪಡೆಯಬಹುದಾಗಿದೆ. ಅರ್ಜಿ ಪೂರ್ಣ ರೀತಿಯಲ್ಲಿ ತುಂಬಿಸಿ ಕೊಟ್ಟ ನಂತರ ಕಯಿದೆ ಅನ್ವಯ ಕ್ರಮಕೈಗೊಳ್ಳಲಾಗುವುದು.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:** ನಝಾರತ್ ದಿವಾನ್ ಸದರ್ ಅಂಜುಮನ್ ಅಹ್ಮದಿಯ ಖಾದಿಯಾನ್

E-mail: diwan@qadian.in

01872-501130, 9646351280, 9464066686

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಭಾವನೆ ಹೊಂದಿದ ದೇಶದ ರೀತಿ ರಿವಾಜುಗಳನ್ನು ನೇಮಿಸಬೇಕು. ಅಂತೂ ಸ್ವಯಂ ತಾವಾಗಿ ಆ ಕಾನೂನುಗಳನ್ನು ಪಾಲಿಸಬೇಕು ಮತ್ತು ತಮ್ಮ ಸ್ನೇಹಿತರನ್ನು, ನೆರೆಹೊರೆಯವರನ್ನೂ ಆ ಕಾನೂನು ಪಾಲನೆಯ ಪ್ರಯೋಜನಗಳಿಂದ ಮಾಹಿತಿ ನೀಡಬೇಕು. ನಾನು ಮತ್ತೆ ಮತ್ತೆ ಹೇಳುವೆನು. ಇದು ಪ್ರಾರ್ಥನೆಗಳ ಸಮಯವಾಗಿದೆ. ಇದೀಗ ಈ ಮಹಾಮಾರಿ ಪಂಜಾಬಿನತ್ತ ಹರಡುವಂತೆ ಕಂಡು ಬರುತ್ತದೆ. ಆದುದರಿಂದ ಪ್ರತಿಯೊಬ್ಬರು ಎಚ್ಚರಗೊಂಡು ಪ್ರಾರ್ಥಿಸಬೇಕಾಗಿದೆ ಮತ್ತು ಪಶ್ಚಾತ್ತಾಪ (ತೌಬ) ಪಡಬೇಕಾಗಿದೆ. ಪವಿತ್ರ ಖುರ್‌ಆನಿನ ಆಶಯ ಎಂದರೆ ಶಿಕ್ಷೆಯು ತಲೆಯ ಮೇಲೆ ಬಂದಾಗ ಪಶ್ಚಾತ್ತಾಪ ಪಡುವುದು ಫಲ ನೀಡುವುದಿಲ್ಲ.

**ದೈವ ಶಿಕ್ಷೆಯಿಂದ ರಕ್ಷಣೆ ಪಡೆಯುವ ವಿಧಾನಗಳು**

ಆದುದರಿಂದ ದೈವಶಿಕ್ಷೆ ಎರಗಿ ಬಂದು ಪಶ್ಚಾತ್ತಾಪದ ಬಾಗಿಲು ಮುಚ್ಚುವ ಮೊದಲೇ ಪಶ್ಚಾತ್ತಾಪ ಪಡೆಯಿರಿ. ಇಹಲೋಕದ ಕಾನೂನುಗಳಿಂದ ಇಷ್ಟೊಂದು ಭಯಪಡುವುದಾದರೆ ಯಾವ ಕಾರಣದಿಂದ ನೀವು ದೈವಿಕ ಕಾನೂನುಗಳಿಗೆ ಭಯಪಡುವುದಿಲ್ಲ. ಆಪತ್ತುಗಳು ತಲೆಯ ಮೇಲೆ ಬಂದೆರಗಿದಾಗ ಅದನ್ನು ಅನುಭವಿಸಲೇಬೇಕಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿ ತಹಜ್ಜುದ್ ನಮಾಝಿಗೋಸ್ಕರ ಏಳುವ ಪ್ರಯತ್ನ ಮಾಡಬೇಕು. ಐದು ಸಲದ ನಮಾಝುಗಳಲ್ಲಿಯೂ ಖುಮತ್ ತಿಳಿದಿರಬೇಕು. ಅಲ್ಲಾಹನನ್ನು ಅಪವಿತ್ರಗೊಳಿಸುವಂತಹ ಎಲ್ಲಾ ವಿಷಯಗಳಿಂದ ಪಶ್ಚಾತ್ತಾಪ ಪಡಬೇಕು. ಪಶ್ಚಾತ್ತಾಪ ಎಂದ್ರೆ ಎಲ್ಲ ದುಷ್ಕರ್ಮಗಳನ್ನು, ಅಲ್ಲಾಹನ ಅಸಂತುಷ್ಟಕ್ಕೆ ಕಾರಣವಾಗುವಂತಹ ಕಾರ್ಯಗಳನ್ನು ತ್ಯಜಿಸಿ ಒಂದು ನಿಜವಾದ ಪರಿವರ್ತನೆ ಸಾಧಿಸಬೇಕು. ಇನ್ನಷ್ಟು ಮುಂದೆ ಹೆಜ್ಜೆ ಇಡಬೇಕು ಹಾಗೂ ಭಯ ಭಕ್ತಿಯುಳ್ಳವರಾಗಬೇಕು. ಸತ್ಯತೆಯ ಸಂಸ್ಕೃತಿ ಪಾಲಿಸಬೇಕು. ಇದರಿಂದಲೂ ಅಲ್ಲಾಹನ ಕರುಣೆ ಲಭಿಸುತ್ತದೆ. ಮಾನವೀಯ ಗುಣಗಳನ್ನು ಸುಸಂಸ್ಕೃತಗೊಳಿಸ ಬೇಕು. ಕ್ರೋಧವಿರಬಾರದು. ಅದರ ಬದಲಾಗಿ ವಿನಯ ಮತ್ತು ನಮ್ರತೆ ಸಾಧಿಸಬೇಕು. ನೈತಿಕ ಸುಧಾರಣೆ ಜೊತೆಯಲ್ಲಿ ತನ್ನ ಕೈಲಾದಷ್ಟು ದಾನಗಳನ್ನು ಮಾಡಬೇಕು.

ಅವನ (ಅಲ್ಲಾಹನ) ಸಂಪ್ರೀತಿಗೊಸ್ಕರ ಅವರು ಬಡವರಿಗೂ ಅನಾಥರಿಗೂ ಕೈದಿಗಳಿಗೂ ಅನ್ನದಾನ ಮಾಡುತ್ತಾರೆ. (ಅವರು ಹೀಗೆ ಹೇಳುತ್ತಾರೆ) ಅಲ್ಲಾಹನ ಸಂತೃಪ್ತಿಗೋಸ್ಕರ ಮಾತ್ರ ನಾವು ನಿಮಗೆ ಆಹಾರ ನೀಡುತ್ತೇವೆ. ನಿಮ್ಮಿಂದ ಪ್ರತಿಫಲವನ್ನಾಗಲೀ, ಕೃತಜ್ಞತೆಯನ್ನಾಗಲಿ ನಾವು ಬಯಸುವುದಿಲ್ಲ. ಮತ್ತು ಭೀಕರವಾದ ಒಂದು ದಿನದ ಬಗ್ಗೆ ಭಯಪಡುತ್ತಾರೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಪ್ರಾರ್ಥನೆಯಿಂದ, ತೌಬ (ಪಶ್ಚಾತ್ತಾಪ ಪಡುವ ಮೂಲಕ) ಮತ್ತು ದಾನಗಳನ್ನು ಮಾಡುತ್ತೀರಿ. ಅದರ ಫಲವಾಗಿ ಅಲ್ಲಾಹನು ನಿಮ್ಮೊಡನೆ ತನ್ನ ಔದಾರ್ಯಗಳನ್ನು ಹಾಗೂ ಕಾರುಣ್ಯಗಳ ಮೂಲಕ ವರ್ತಿಸುವನು. **(ಮಲ್ಫೂಝಾತ್, ಸಂಪುಟ1, ಪುಟ 191, ಮುದ್ರಣ 2018 ಖಾದಿಯಾನ್)**

**ಖಾದಿಯಾನ್ ದಾರುಲ್ ಆಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು**

ಸಯ್ಯದುನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಾಹುಲ್ಲಾಹು ತಆಲ ಬಿನಸ್ರಿಹಿಲ್ ಆಝೀಝ್‌ರವರು ಭಾರತದ ಜಮಾಅತಿನ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯ್ಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) ಅಕ್ಟೋಬರ್ 16, 17 ಮತ್ತು 18, 2020 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಜಮಾಅತಿನ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ. **(ಸಂಪಾದಕರು)**

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

*(ಪುಟ ಸಂಖ್ಯೆ 12ರ ವರದಿಯ ಉಳಿದ ಭಾಗ)*

ಪ್ರಥಮ ಬಾರಿಗೆ ಮುಸಲ್ಮಾನರಿಗೆ ಹೋರಾಡಲು ಅನುಮತಿ ದೊರೆಯಿತು. ಈ ಅನುಮತಿಯ ವಿವರಣೆ ಪವಿತ್ರ ಖುರ್‌ಆನಿನಲ್ಲಿ ಸೂರಃ ಅಲ್‌ಹಜ್ಜ್ ವಚನ 40,41 ರಲ್ಲಿ ಕಾಣಬಹುದು. ಈ ವಚನಗಳಲ್ಲಿ ಅಲ್ಲಾಹನು ಹೇಳಿದನು. ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ ಪ್ರತಿಯುದ್ಧ ಮಾಡುವ ಅನುಮತಿ ಇದೆ. ಏಕೆಂದರೆ ಅವರು ಆಕ್ರಮಣಕ್ಕೊಳಗಾಗಿದ್ದಾರೆ. ಈ ಜನರು ಕೇವಲ ಇಸ್ಲಾಂ ಧರ್ಮ ಮಾತ್ರವಲ್ಲ ಧರ್ಮವನ್ನೇ ಅಸ್ತಿತ್ವವಿಲ್ಲದಂತೆ ಮಾಡಬಯಸುತ್ತಾರೆ. ಪವಿತ್ರ ಖುರ್‌ಆನ್ ನಿರ್ದೇಶಿಸುತ್ತದೆ. ಮುಸಲ್ಮಾನರಿಗೆ ಆತ್ಮರಕ್ಷಣೆಗೊಸ್ಕರ ಯುದ್ಧದ ಅನುಮತಿ ನೀಡದಿರುತ್ತಿದ್ದರೆ ಯಾವ ಸನ್ಯಾಸಿ ಮಠ ಚರ್ಚ್ ಮಸೀದಿ ಅಥವಾ ಯಾವ ಧರ್ಮದ ಆರಾಧಾನಾ ಸ್ಥಳವು ಸುರಕ್ಷಿತವಿರುತ್ತಿರಲಿಲ್ಲ. ಆದ್ದರಿಂದ ರಸೂಲುಲ್ಲಾಹ್ (ಸ) ಮತ್ತು ಅವರ ಸಹಾಬರಿಗೆ ವಿನಾಶರಾಗಿ ಯುದ್ಧಗಳಲ್ಲಿ ಭಾಗವಹಿಸಬೇಕಾಯಿತು. ಇವೆಲ್ಲ ಎಲ್ಲ ಜನರ ಹಕ್ಕುಗಳ ರಕ್ಷಣೆಗೋಸ್ಕರವಾಗಿತ್ತು. ಇದು ಕ್ರೈಸ್ತ, ಯಹೂದಿ, ಹಿಂದೂ, ಮುಸ್ಲಿಂ ಮತ್ತು ಇತರ ಧರ್ಮಗಳ ಹಾಗೂ ವಿಶ್ವಾಸಗಳನ್ನು ಜನರು ತಮ್ಮ ತಮ್ಮ ವಿಶ್ವಾಸಗಳಂತೆ ಆರಾಧನೆ ಮಾಡುವ ಹಕ್ಕುಗಳನ್ನು ರಕ್ಷಿಸುವ ಉದ್ದೇಶ ಹೊಂದಿತ್ತು.

ಹುಝೂರ್ ಅನ್ವರ್ (ಅಬಿಅ) ಹೇಳಿದರು ಇಸ್ಲಾಂ ಮುಸಲ್ಮಾನರನ್ನು ಬಲವಂತವಾಗಿ ತಮ್ಮ ಶಿಕ್ಷಣದ ಪ್ರಚಾರ ಮಾಡಲು ಮತ್ತು ಇತರ ದೇಶಗಳ ಮೇಲೆ ಆಕ್ರಮಣ ಮಾಡಲು, ಇತರ ಧರ್ಮಗಳನ್ನು ಕೊನೆಗಾಣಿಸಲು ಅನುಮತಿ ನೀಡುತ್ತದೆ ಎಂಬ ಆರೋಪವು ಸರ್ವಥ ತಪ್ಪು, ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ವಿವರಿಸಿದೆ. ಇತರ ಧರ್ಮಗಳನ್ನು ರಕ್ಷಿಸುವುದು ಮತ್ತು ಇತರ ಧರ್ಮದವರ ಅನುಯಾಯಿಗಳನ್ನು ರಕ್ಷಿಸುವುದು ಮುಸಲ್ಮಾನರ ಕರ್ತವ್ಯವಾಗಿದೆ. ವಾಸ್ತವವೇನೆಂದರೆ ಪ್ರಾಥಮಿಕ ಹಂತದ ಮುಸಲ್ಮಾನರು ವ್ಯಕ್ತಿ ಸ್ವಾತಂತ್ರ್ಯ ಹಾಗೂ ಧಾರ್ಮಿಕ ಸ್ವಾತಂತ್ರ್ಯಗಳ ಶಾಶ್ವತ ಸಿದ್ಧಾಂತಗಳನ್ನು ಸ್ಥಾಪಿಸಲು ತಮ್ಮ ಪ್ರಾಣಗಳನ್ನೇ ಅರ್ಪಿಸಿದ್ದಾರೆ. ಈ ಸ್ವಾತಂತ್ರ್ಯವು ಇಸ್ಲಾಮರ ವಿಶ್ವಾಸದ ತಳಹದಿಯಾಗಿದೆ ಮತ್ತು ಶಾಶ್ವತವಾಗಿ ಪವಿತ್ರ ಖುರ್‌ಆನಿನಲ್ಲಿ ಸುರಕ್ಷಿತಗೊಂಡಿದೆ. ಪವಿತ್ರ ಖುರ್‌ಆನಿನ ಅಧ್ಯಾಯ ಅಲ್ ಖಬರದ ವಚನ 257 ರಲ್ಲಿ ಅಲ್ಲಾಹನು ಸ್ಪಷ್ಟವಾಗಿ ತಿಳಿಸಿದನು. **"ಧರ್ಮದಲ್ಲಿ ಯಾವುದೇ ರೀತಿಯ ಬಲವಂತವಿಲ್ಲ."** ಈ ಸ್ವಾತಂತ್ರ್ಯ ಕಲ್ಪನೆ, ಧಾರ್ಮಿಕ ಸ್ವಾತಂತ್ರ್ಯತೆ ಮತ್ತು ಬೋಧನಾ ಸ್ವಾತಂತ್ರ್ಯದ ಪೈಕಿ ಸ್ಪಷ್ಟವಾದ ನಿಲುವಾಗಿದೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ಹುಝೂರ್ ಅನ್ವರ್(ಅಬಿಅ) ಹೇಳಿದರು. ಇಸ್ಲಾಂ ಸ್ಥಾಪಕರು(ಸ) ಮತ್ತು ರಾಶಿದ್ ಖಲೀಫರ ಕಾಲಗಳಲ್ಲಿ ಮುಸ್ಲಿಮೇತರ ಜನರ ಹಕ್ಕುಗಳನ್ನು ಎಂದೂ ಧಮನಿಸಲಾಗಿಲ್ಲ. ಹಾಗೆಯೇ ಅವರನ್ನು ಇಸ್ಲಾಂ ಸ್ವೀಕರಿಸಲು ಬಲಾತ್ಕಾರ ಮಾಡಲಿಲ್ಲ ಅಥವಾ ಅವರಿಗೆ ಅವರ ರಿವಾಜುಗಳನ್ನು ವಿಶ್ವಾಸಗಳನ್ನು ತ್ಯಜಿಸಲು ಒತ್ತಡ ಹೇರಲಿಲ್ಲ ಹಝ್ರತ್ ರಸೂಲುಲ್ಲಾಹ್(ಸ) ತಮ್ಮೆಲ್ಲ ವಯಸ್ಸು ಪೂರ್ತಿ ಶಾಂತಿ, ಅನ್ಯಧರ್ಮಿಯರೊಡನೆ ಮಾತುಕತೆ ಮತ್ತು ವಿವಿಧ ಸಮುದಯಗಳೊಡನೆ ಮೈತ್ರಿ ಹಾಗೂ ಪರಸ್ಪರ ಗೌರವಾದರಗಳನ್ನು ಬಯಸುತ್ತಿದ್ದರು. ಉದಾಹರಣೆಗೆ ಮದೀನ ವಲಸೆಯಾಗಿ ಬಂದ ನಂತರ ಹಝ್ರತ್ ರಸೂಲುಲ್ಲಾಹ್(ಸ) ಯಹೂದಿಯರೊಡನೆ ಒಂದು ಒಪ್ಪಂದ ಮಾಡಿದರು. ಅದರನ್ವಯ ಒಂದು ಸಂಯುಕ್ತ ಸರಕಾರ ರಚನೆಯಾಯಿತು. ಇಸ್ಲಾಂ ಸ್ಥಾಪಕರನ್ನು ಒಕ್ಕೊರಗಲಿನಿಂದ ನಾಡ ಸರದಾರನ್ನಾಗಿ ಚುನಾಯಿಸಿದರು. ಈ ಒಪ್ಪಂದಗಳ ಶರತ್ತುಗಳ ಪ್ರಕಾರ ಮುಸಲ್ಮಾನರಿಗೆ ಮತ್ತು ಯಹೂದಿಯೊಂದಿಗೆ ನಾಡ ಪ್ರಗತಿಯಲ್ಲಿ ಸಹಕರಿಸಲು ಹಾಗೂ ವಿಧೇಯ ನಾಗರಿಕರಾಗುವ ವಚನ ಕೈಗೊಂಡರು. ಈ ಒಪ್ಪಂದದನ್ವಯ ಪ್ರತಿಯೊಬ್ಬರಿಗೆ ತಮ್ಮ ಧರ್ಮ ಮತ್ತು ವಿಶ್ವಾಸಗಳನ್ನು ಭಯವಿಲ್ಲದೇ ಆತಂಕವಿಲ್ಲದೇ ಅಥವಾ ನಿರಂತರವಾಗಿ ಪಾಲಿಸುವ ಹಕ್ಕು ನೀಡಲಾಗಿತ್ತು. ಹಝ್ರತ್ ರಸೂಲುಲ್ಲಾಹ್ (ಸ) ಎಂದೂ ಈ ಒಪ್ಪಂದವನ್ನು ಉಲ್ಲಂಘಿಸಲಿಲ್ಲ. ಆದರೆ ಬೇರೆಡೆಯಿಂದ ಕೆಲವು ಸಂದರ್ಭಗಳು ಹೀಗೆ ಬಂದವು. ಮುಸ್ಲಿಮೇತರು ಈ ಒಪ್ಪಂದವನ್ನು ಉಲ್ಲಂಘಿಸಿದರು. ಮೊದಲು ನಿಶ್ಚಯಿಸಿದ ಕಾನೂನುಗಳ ಪ್ರಕಾರ ಅವರಿಗೆ ಶಿಕ್ಷೆ ನೀಡಲಾಯಿತು.

ಹುಝೂರ್ ಅನ್ವರ್ (ಅಬಿಅ) ನುಡಿದರು. ಇಸ್ಲಾಂ ಎಂದೂ ತನ್ನ ಅನುಯಾಯಿಗಳಿಗೆ ವಿಶ್ವಾಸಗಳನ್ನು ಪ್ರಚಾರ ಮಾಡಲು ಯವುದೇ ಮುಸ್ಲಿಂ ರಾಷ್ಟವನ್ನು ಇಲ್ಲಿ ಕೇವಲ ಮುಸ್ಲಿಮರಿಗೆ ಇರಲು ಅನುಮತಿ ಇದೆ ಎಂದು ಘೋಷಿಸಲು ಅನುಮತಿ ನೀಡಲಿಲ್ಲ. ನಾನು ಹೇಳಿದಂತೆ ಮದೀನ ಒಪ್ಪದದನ್ವಯ ಪ್ರತಿ ಸಮುದಯದವರಿಗೆ ತಮ್ಮ ರೀತಿವಾದ ಹಾಗೂ ವಿಶ್ವಾಸಗಳಂತೆ ನಡೆಯುವ ಸ್ವಾತಂತ್ರ್ಯ ನೀಡಲಾಗಿತ್ತು. ಆ ಸಮಾಜವು ಒಂದು ಪ್ರಮುಖ ಸಿದ್ಧಾಂತದ ಮೇರೆಗೆ ಐಕ್ಯವಾಗಿತ್ತು. ಪ್ರತಿಯೊಬ್ಬರು ಧರ್ಮ ವಿಶ್ವಾಸಗಳ ಭೇದವಿಲ್ಲದೇ ತಮ್ಮ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಲು ಮತ್ತು ನಾಡಿನ ವಿಧೇಯ ನಾಗರಿಕನಾಗಲು ಬದ್ಧರಾಗಿದ್ದರು. ಸಮಾಜಕ್ಕೆ ಕಂಟಕವಾಗುವಂತಹ

ಶಾಂತಿ ರಕ್ಷಣೆಗೆ ಅಪಾಯ ಒಡ್ಡುವಂತಹ ಕಾರ್ಯಗಳಿಂದ ದೂರವಿರಲು ವಚನಬದ್ಧರಾಗಿದ್ದರು. ಆದ್ದರಿಂದ ಬೆರಳಣಿಕೆಯಷ್ಟು ಕೆಲ ಮುಸಲ್ಮಾನರ ದಾರಿತಪ್ಪಿಸುವ ಹಾಗೂ ದುಷ್ಕರ್ಮಗಳನ್ನು ನೋಡಿ ಶಾಂತಿಪ್ರಿಯ ಇಸ್ಲಾಮ್ ಧರ್ಮದ ಮೇಲೆ ಇಂತಹ ಆರೋಪ ಸರ್ವಥ ಅನ್ಯಾಯಪೂರ್ಣವಾಗಿದೆ. ಇಂಥ ಜನರು ಮತ್ತು ಸಂಘಟನೆಗಳು ಉಗ್ರವಾದವನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಾರೆ. ಇಸ್ಲಾಮಿನಿಂದ ಇದರ ಯಾವ ಸಂಬಂಧವೂ ಇಲ್ಲ. ಅವರು ಬೇಕಾದ ರೀತಿಯಲ್ಲಿ ತಮ್ಮ ದ್ವೇಷಭರಿತ ಕ್ರಮಗಳನ್ನು ಇಸ್ಲಾಮಿನ ಹೆಸರಿನಲ್ಲಿ ಬಳಸುತ್ತಿರಬಹುದು. ಆದರೆ ವಾಸ್ತವದಲ್ಲಿ ಇವರು ಕೇವಲ ಮತ್ತು ಕೇವಲ ಪವಿತ್ರ ಖುರ್‌ಆನಿನ ಹಾಗೂ ಇಸ್ಲಾಂ ಸ್ಥಾಪಕರ(ಸ) ಪರಿಶುದ್ಧ ಮತ್ತು ಶಾಂತಿಪ್ರಿಯ ಶಿಕ್ಷಣಗಳನ್ನು ಅಪಮಾನಿಸುತ್ತಿದ್ದಾರೆ.

ಹುಝೂರ್ ಅನ್ವರ್ (ಅಬಿಅ) ಹೇಳಿದರು. ಪವಿತ್ರ ಖುರ್‌ಆನಿನ ಪ್ರತಿ ಪುಟವು ಪ್ರಕಾಶಮಯ ಶಿಕ್ಷಣದಿಂದ ತುಂಬಿದೆ. ಅದರಂತೆ ಮುಸಲ್ಮಾನರಿಗೆ ಲೋಕದಲ್ಲಿ ಶಾಂತಿ ಸ್ಥಾಪಿಸುವ ಯಾವ ಸಂದರ್ಭವು ಕಳೆದುಕೊಳ್ಳಬಾರದು. ಉದಾಹರಣೆಗೆ ಪವಿತ್ರ ಖುರ್‌ಆನಿನ ಸೂರಃ ಝುಖ್‌ರಫ್ ವಚನ 87, 90 ರಲ್ಲಿ ಹಝುರತ್ ರಸೂಲುಲ್ಲಾಹ್ (ಸ) ರವರ ದುಃಖಭರಿತ ಹಾಗೂ ಕರುಣಾಜನಕ ಪ್ರಾರ್ಥನೆಗಳನ್ನು ವಿವರಿಸಲಾಗಿದೆ. ಅದರಲ್ಲಿ ಹಝ್‌ರತ್ ರಸುಲುಲ್ಲಾಹ್ (ಸ) ಅಲ್ಲಾಹನಿಂದ ಬೇಡುತ್ತಿದ್ದಾರೆ. ಅದು ಪ್ರೀತಿಯಿಂದ ತುಂಬಿದ ಮತ್ತು ನೈಜ ಶಿಕ್ಷಣವನ್ನು ಜನರ ಮುಂದೆ ಪ್ರಸ್ತುತಪಡಿಸುತ್ತಿದ್ದಾರೆ. ಆನರು ಅದನ್ನು ತಿರಸ್ಕರಿಸುತ್ತಿದ್ದಾರೆ. ಉತ್ತರವಾಗಿ ಅಲ್ಲಾಹನು ಹಝ್‌ರತ್ ರಸೂಲುಲ್ಲಾಹ್ (ಸ) ರವರಿಗೆ ಜನರನ್ನು ಕ್ಷಮಿಸಲು ಮತ್ತು ಶಾಂತಿಯ ಸಂದೇಶವನ್ನು ತಲುಪಿಸುವ ಉಪದೇಶ ನೀಡುತ್ತಾರೆ.

ಹುಝೂರ್ ಅನ್ವರ್ (ಅಬಿಅ) ಹೇಳಿದರು. ಶಾಂತಿ ಪದದ ಅರ್ಥ ವಿಶ್ವಾಸ ಹೊಂದುವುದು ಮತ್ತು ಶಾಂತಿ ಬಯಸುವುದು. ಈ ನೆಲೆಯಲ್ಲಿ ಅಲ್ಲಾಹನು ರಸೂಲುಲ್ಲಾಹ್ (ಸ) ರವರನ್ನು ಇಸ್ಲಾಮಿನ ಸಂದೇಶ ತಲುಪಿಸಲು ಮತ್ತು ಉಳಿದ ವಿಷಯ ಅಲ್ಲಾಹನ ಮೇಲೆ ಬಿಡಲು, ಯಾರು ಈ ಸಂದೇಶವನ್ನು ನಿರಾಕರಿಸಿದರು ಅವರಿಗೆ ನಿರಂತರವಾಗಿ ಶಾಂತಿ ನೀಡುವ ಉಪದೇಶ ನೀಡಿದೆ. ಪವಿತ್ರ ಖುರ್‌ಆನ್ ಯಾವ ಒಂದು ಸ್ಥಳದಲ್ಲಿಯೂ ತಿರಸ್ಕರಿಸುವವರ ವಿರುದ್ಧ ದೌರ್ಜನ್ಯ ಮಾಡಲು ಮತ್ತು ಬಲಪ್ರಯೋಗ ಮಾಡಲು ಶಿಕ್ಷಣ ನೀಡಲಿಲ್ಲ. ಬದಲಾಗಿ ಮುಸಲ್ಮಾನರನ್ನು ಸಹಿಸಲು ಹಾಗೂ ತಾಳ್ಮೆ ವಹಿಸಲು ಉಪದೇಶ ಮಾಡಿದೆ. ಆದ್ದರಿಂದ ಇಂದಿನ ನಾಮಧಾರಿತ ಮುಸ್ಲಿಂ ಮುಖಂಡರ ಅಥವಾ ಇಸ್ಲಾಮಿ ಸರಕಾರಗಳ ಅವು ಉಗ್ರವಾದ ಮತ್ತು ಧರ್ಮಾಂಧತೆಯನ್ನು ಪ್ರದರ್ಶಿಸುತ್ತಿವೆ. ಅದರ ಅಪವಾದ ಅವರ ಹೆಗಲ ಮೇಲೆಯೇ ಇದೆ. ಅವರ ಕಪಟ ಮತ್ತು ಅಸಂಜಸ ಕೃತ್ಯಗಳಿಂದಾಗಿ ಲೋಕದ ಶಾಂತಿ ಮತ್ತು ಭ್ರಾತೃತ್ವ ನಾಶಗೊಳ್ಳುತ್ತಿವೆ. ಅದನ್ನು ಯಾವ ನೆಲೆಯಲ್ಲಿ ಸಮರ್ಥಿಸಲು ಸಾಧ್ಯವಿಲ್ಲ. ಇದರ ನಷ್ಟ ತುಂಬಲು ಸಾಧ್ಯವಿಲ್ಲ.

ಹುಝೂರ್ ಅನ್ವರ್ (ಅಬಿಅ) ಹೇಳಿದರು. ಇಸ್ಲಾಮಿನ ಸ್ಪಷ್ಟವಾದ ಶಿಕ್ಷಣವಾಗಿದೆ. "ಬಲವಂತದಿಂದ ಧರ್ಮಪರಿವರ್ತನೆ ಮಾಡಿಸುವುದು, ದೌರ್ಜನ್ಯದಿಂದ ಇತರರ ಮೇಲೆ ಜಯ ಸಾಧಿಸುವುದು ನಿಷಿದ್ಧವಿದೆ. ಅಲ್ಲದೇ ಶಾಂತಿ ಮತ್ತು ಸಾಮಾಜಿಕ ರಕ್ಷಣೆಯ ವಿರುದ್ಧವೂ ಯಾವುದೆ ಆತಂಕಕಾರಿ ಕ್ರಮಗಳು ನಿಷಿದ್ಧವಿದೆ. ರಸೂಲುಲ್ಲಾಹ್ (ಸ) ಎಲ್ಲಾ ಸಂದರ್ಭದಲ್ಲಿ ಭ್ರಾತೃತ್ವ ಮತ್ತು ಕರುಣೆಯನ್ನು ಪ್ರದರ್ಶಿಸಿದರು. ಅವರು (ಸ) ಉಪದೇಶಿಸಿದರು. ನೈಜ ಮುಸಲ್ಮಾನವೆಂದರೆ ಅವನ ನಾಲಿಗೆಯಿಂದಾಗಲೀ, ಕೈಯಿಂದಾಗಲೀ ಸುರಕ್ಷಿತನಾಗಿದ್ದವನು ಮಾತ್ರ. ಅವರು (ಸ) ಇಲ್ಲಿ ಯಾವ ತಾರತಮ್ಯವೂ ಮಾಡಲಿಲ್ಲ. ಕೇವಲ ಮುಸ್ಲಿಂರೊಂದಿಗೆ ಕರುಣೆಯಿಂದ ವ್ಯವಹರಿಸಲು ಹೇಳಲಿಲ್ಲ. ಬದಲಾಗಿ ಸ್ಪಷ್ಟವಾಗಿ ಹೇಳಿದರು. ವಿಶ್ವಾಸಗಳ ಭೇದಭಾವವಿಲ್ಲದೆ ಸಾಮಾಜಿಕ ಭದ್ರತೆಗೆ ಬದ್ಧರಾಗಲು ಉಪದೇಶಿಸಿದ್ದಾರೆ. ಆದ್ದರಿಂದ ಉಗ್ರವಾದಿಗಳು night club ಗಳಲ್ಲಿ concent Hall ಗಳಲ್ಲಿ stadiums ಗಳಲ್ಲಿ ಆತ್ಮಹತ್ಯೆ ಬಾಂಬ್‌ಗಳನ್ನು ಎಸೆಯುತ್ತಾರೆ ಅಥವಾ ಬುದ್ಧಿಶೂನ್ಯರ ಹಾಗೆ ಜನಸಂದಣಿಯಲ್ಲಿ ವಾಹನಗಳನ್ನು ಹೊಕ್ಕಿಸುತ್ತಾರೆ. ಅವರು ಅತ್ಯಂತ ಪೈಶಾಚಿಕ ಮತ್ತು ದೌರ್ಜನ್ಯ ರೂಪದಲ್ಲಿ ಇಸ್ಲಾಮಿ ಶಿಕಷಣವನ್ನು ವಿರೋಧಿಸುವವರಾಗಿದ್ದಾರೆ.

ಹುಝೂರ್ ಅನ್ವರ್ (ಅಬಿಅ) ಹೇಳಿದರು. ಪವಿತ್ರ ಖುರ್‌ಆನ್ ಪ್ರಾಥಮಿಕ ಹಂತದಿಂದಲೇ ಮಾನವ ಹಕ್ಕುಗಳ ನೆಲೆಯಲ್ಲಿ ಧಾರ್ಮಿಕ ಸ್ವಾತಂತ್ರ್ಯ ಅಲ್ಲದೇ ಇನ್ನುಳಿದ ಹಲವು ದಿನನತ್ಯ ಜೀವನ ಕ್ರಮಗಳ ಸಿದ್ಧಾಂತಗಳನ್ನು ಕಲಿಸಿದೆ. ಆ ಮೂಲಕ ಜನರು ಜನಾಂಗೀಯ ಹಾಗೂ ವಿಶ್ವಾಸಗಳ ಭೇಧವಿಲ್ಲದೇ ಪರಸ್ಪರ ಸೌಹಾರ್ಧತೆಯಿಂದ ಶಾಂತಿಯಿಂದ ಜೀವನ ನಡೆಸುತ್ತಾರೆ. ಉದಾಹರಣೆಗೆ ಸೂರ: ಅಲ್ ಬಖರದ ವಚನ 189 ರಲ್ಲಿ ಪವಿತ್ರ ಖುರ್‌ಆನ್ ನ್ಯಾಯಯುತ ವ್ಯಾಪಾರದ ಕುರಿತು ಪ್ರಸ್ತಾಪಿಸಿದೆ. ಅದರಲ್ಲಿ ಸಾಂಪತ್ತಿಕ ವ್ಯವಹಾರ ಅಥವಾ ಕೊಡುಕೊಳ್ಳುವ ವಿಷಯವಾಗಿ ನ್ಯಾಯಯುತವಾಗಿ ವರ್ತಿಸಲು ಉಪದೇಶಿಸಿದೆ. ಈ ವಚನದಲ್ಲಿ ಅಲ್ಲಾಹನು ಮುಸಲ್ಮಾನರಿಗೆ ಉಪದೇಶ ನಿಡಿದೆ. ಮೋಸ, ವಂಚನೆಯಿಂದ ಸಂಪತ್ತು ಪಡೆಯಬಾರದು. ಬದಲಾಗಿ ಭರವಸೆ ವಿಶ್ವಾಸದಿಂದ ವ್ಯವಹರಿಸುವ ಶಿಕ್ಷಣ ನೀಡಿದೆ. ಏಕೆಂದರೆ ವಿವಿಧ ಜನರ ಮಧ್ಯ ಒಡಕು ಹಾಗೂ ಹಗೆತನ ಬರಬಾರದು.

ಹುಝೂರ್ ಅನ್ವರ್ (ಅಬಿಅ) ಹೇಳಿದರು. ಇಸ್ಲಾಂ ಅನ್ಯಾಯವಾಗಿ ಮಾಡುವ ವ್ಯಾಪರ ಮತ್ತು ಮೋಸಾಧಾರಿತ ವ್ಯವಹಾರದಿಂದ ಉಳಿಯಲು ಉಪದೇಶಿಸುತ್ತದೆ. ಏಕೆಂದರೆ ಇದರಿಂದ ಸಮಾಜದಲಿ ಅಶಾಂತಿ ಉಂಟಾಗುತ್ತದೆ. ಲೋಕದಲ್ಲಿ ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿಯೂ ಸ್ವಾರ್ಥ ಮತ್ತು ವ್ಯಾಮೋಹ ವ್ಯಾಪಿಸಿದ ಕಾರಣ ಇಷ್ಟೊಂದು ಒಡಕು ಹಾಗೂ ಕಷ್ಟಕಾರ್ಪಣ್ಯಗಳು ಎದುರಿಸುತ್ತಿದ್ದೇವೆ. ಆದ್ದರಿಂದ ಸಮಾಜದಲ್ಲಿ ಶಾಂತಿ ಸ್ಥಾಪಿಸಲು ನ್ಯಾಯ, ಸಮಾನತೆಯ ಸಿದ್ಧಾಂತಗಳು ಅತ್ಯಮೂಲ್ಯವಾಗಿವೆ. ಸಸೂರ: ಅಲ್ ಮುತಫಿಫ್ಫೀನ್ ವಚನ 44 ರಲ್ಲಿ ಪವಿತ್ರ ಖುರ್‌ಆನ್ ಹೀಗೆ ಪ್ರಸ್ತಾಪಿಸಿದೆ. ಅಳತೆಯಲ್ಲಿ ಕಮ್ಮಿ ಮಾಡಿ ಕೊಡುವವರಿಗೆ ಮಹಾನಾಶ ಎಂದರೆ ಬೇರೆಯವರಿಗೆ ಮಹಾನಾಶ ಎಂದರೆ ಬೇರೆಯವರಿಗೆ ಅಳೆದು ಅಥವಾ ಮಾತನಾಡಿಕೊಡುವಾಗ ಕಡಿಮೆ ಮಾಡುತ್ತಾರೆ. ಈ ವಚನಗಳಿಂದ ಸಾಬೀತಾಗುತ್ತದೆ. ಯಾರು ವ್ಯಾಪಾರದಲ್ಲಿ ಹೆಚ್ಚು ಕಡಿಮೆ ಮಾಡಿ ಶೋಷಣೆ ಮಾಡುತ್ತಾರೋ ಯಾರು ಬೇರೆಯವರಿಗೆ ಕಡಿಮೆ ಕೊಡುತ್ತಾರೆ ಮತ್ತು ಪಡೆಯುವಾಗ ಸಮಾನತೆಯನ್ನು ಬಯಸುತ್ತಾರೆ. ಮೋಸ ವಂಚನೆಯಿಂದ ವ್ಯವಹರಿಸುತ್ತಾರೆ ಅವರ ಮೇಲೆ ಶಾಪ ಹಾಕಲಾಗಿದೆ ಮತ್ತು ಅವರನ್ನು ಸುಳ್ಳುಗಾರರಲ್ಲಿ ಹಾಗೂ ನರಕವಾಸಿಗಳಲ್ಲಿ ಪರಿಗಣಿಸಲಾಗಿದೆ.

ಹುಝೂರ್ ಅನ್ವರ್ (ಅಬಿಅ) ಹೇಳಿದರು. ಪವಿತ್ರ ಖುರ್‌ಆನ್ ಅಂತರರಾಷ್ಟ್ರೀಯ ಸಂಬಂಧವಾಗಿ, ಆಂತರಿಕ ವಿರೋಧಗಲ ಅಥವಾ ವಿವಿಧ ಸಮುದಾಯಗಳಲ್ಲಿ ಬೆಳೆಯುತ್ತಿರುವ ಭಿನ್ನತೆಗಳನ್ನು ಪರಿಹರಿಸುವ ಕುರಿತು ಮಾರ್ಗದರ್ಶನ ನಿಡಿದೆ. ಇಸ್ಲಾಮಿನ ಉದ್ದೇಶ ಯಾವಾಗಲೂ ಶಾಶ್ವತವಾಗಿ ಶಾಂತಿಸ್ಥಾಪನೆ ಮಾಡುವುದು ಮತ್ತು ದ್ವೇಷ ಹಾಗೂ ಹಗೆತನ ವನ್ನು ಕೊನೆಗಾಣಿಸುವುದು ಆಗಿದೆ. ಉದಾಹರಣೆಗೆ ಸೂರ: ಅಲ್‌ಹುಜುರಾತ್ ವಚನ 10 ರಲ್ಲಿ ಪ್ರಸ್ತಾಪಿಸಲಾಗಿದೆ. ಸತ್ಯವಿಶ್ವಾಸಿಗಳ ಪೈಕಿ ಎರಡು ಗುಂಪುಗಳು ಪರಸ್ಪರ ಹೋರಾಟಕ್ಕಿಳಿದರೆ, ಈವು ಅವರ ಮಧ್ಯೆ ಸಂಧಾನವೇರ್ಪಡಿಸಿರಿ. ಆ ಬಳಿಕ ಅವರಲ್ಲಿ ಒಂದು ಗುಂಪು ಇನ್ನೊಂದು ಗುಂಪಿನ ಮೇಲೆ ಆಕ್ರಮಣವೆಸಗಿದರೆ, ಅಲ್ಲಾಹನ ಆಜ್ಞೆಯ ಕಡೆಗೆ ಅವರು ಮರಳುವ ತನಕ ಅವರ ವಿರುದ್ಧ ಹೋರಾಡಿರಿ. ಅನಂತರ ಆ ಗುಂಪು ಮರಳಿದರೆ ಅವರ ಮಧ್ಯೆ ನ್ಯಾಯಯುತವಗಿ ಸಂಧಾನ ಮಾಡಿಸಿರಿ ಹಾಗೂ ನ್ಯಾಯೋಚಿತವಾಗಿ ವರ್ತಿಸಿರಿ. ನಿಶ್ಚಯವಾಗಿಯೂ ಅಲ್ಲಾಹನು ನ್ಯಾಯವಂತರನ್ನು ಪ್ರೀತಿಸುತ್ತಾನೆ.

ಹುಝೂರ್ ಅನ್ವರ್ (ಅಬಿಅ) ಹೇಳಿದರು. ನನ್ನ ವಿಶ್ವಾಸವಾಗಿದೆ ಈ ಅಸಾಮಾನ್ಯ ಖುರ್‌ಆನಿನ ಸಿದ್ಧಾಂತವು ಕೇವಲ ಮುಸ್ಲಿಮರಿಗೆ ಅಲ್ಲ ಬದಲಾಗಿ ಜಾಗತಿಕ ನೆಲೆಯಲಿಲ, ಸಮಸ್ಯೆಗಳನ್ನು ಪರಿಹರಿಸಲು ಬುನಾದಿಯನ್ನು ಒದಗಿಸುತ್ತದೆ. ಇದರಂತೆ ನಡೆದುಕೊಂಡರೆ ಲೋಕದಲ್ಲಿ ಸ್ಥಿರತೆ ಮತ್ತು ಶಾಶ್ವತವಾದ ಶಾಂತಿ ಪಡೆಯಬಹುದಾಗಿದೆ. ಹಲವು ಮುಸ್ಲಿಂ ರಾಷ್ಟ್ರಗಳು ಈ ಖುರ್‌ಆನಿನ ಸಿದ್ಧಾಂತವನ್ನು ಪಾಲಿಸುವುದು ಕಂಡು ತುಂಬ ವಿಷಾಧ ಎನಸುತ್ತದೆ. ಅದರ ಪರಿಣಾಮವಾಗಿಯೇ ಮೂರ್ಖತನದಿಂದ ಕೂಡಿದ ಸಮಸ್ಯೆಗಳಲ್ಲಿ ಸಿಲುಕಿಕೊಂಡಿದ್ದಾರೆ.

ಅತಿ ಶೀಘ್ರದಲ್ಲಿ ಮಾನವ ಇತಿಹಾಸದಲ್ಲಿ ಅತಿ ಭಯಕರವದ ಯುದ್ಧ ಅರ್ಥಾತ್ ಎರಡನೇ ಜಾಗತಿಕ ಯುದ್ಧ ಪ್ರಾರಂಭವಾಯಿತು. ಅಂತ ಆರು ವರ್ಷಗಳ ವಿನಾಶಕಾರಿ ಹಾಗೂ ವಂಚನಕಾರಿಯ ನಂತರ ಈ ಯುದ್ಧ ಅಂತ್ಯಗೊಂಡಿತು ಆಗ ಲೋಕದಲ್ಲಿ ಶಾಂತಿ ರಕ್ಷಣೆಯ ಸ್ಥಾಪನೆಗಾಗಿ ಸಂಯುಕ್ತ ರಾಷ್ಟ್ರ ಸಂಘಟನೆ (U.N.O) ಕಟ್ಟಲಾಯಿತು. ಆದರೆ ಸಂಯುಕ್ತ ರಾಷ್ಟ್ರ ಸಂಘಟನೆಯ ಉದ್ದೇಸಿತ ಗುರಿ ಪಡೆಯುವುದರಲ್ಲಿ ವಿಫಲಗೊಂಡಿದೆ. ಇಂದು ಮತ್ತೊಮ್ಮೆ ಗುಂಪುಗಾರಿಕೆ ಪ್ರಾರಂಭವಾಗಿದೆ. ಸಮಾಜ ಒಡಕಿನತ್ತ ಸಾಗಿದೆ ಮತ್ತು ಸಮುದಾಯಗಳ ನಡುವೆ ಬಿರುಕು ಕಾಣತೊಡಗಿವೆ. ಹಲವು ಮುಸ್ಲಿಂ ಮತ್ತು ಅಮುಸ್ಲಿಂ ರಾಷ್ಟ್ರಗಳು ಶಾಂತಿಯ ವಾಸ್ತವ ರೂಪ ಗ್ರಹಿಸುತ್ತಿಲ್ಲ ಮತ್ತು ಬರಬಹುದಾದ ಆತಂಕ ಅಪಾಯಗಳಿಂದ ಅಜ್ಞಾನ ಹೊಂದಿದ್ದಾರೆ.

ಹುಝೂರ್ ಅನ್ವರ್ (ಅಬಿಅ) ನುಡಿದರು. ಖಂಡಿತವಾಗಿ ಈಗ ಆಗುವಂತಹ ಯುದ್ಧಗಳ ಪರಿಣಾಮ ಆ ಯುದ್ಧಗಳಿಂದ ಅತಿ ಹೆಚ್ಚು ಎಂದೂ ಕಂಡಿಯದಂತಹ ಭಯಂಕರವಗುವುವು. ಏಕೆಂದರೆ ಹಲವು ದೇಶಗಳು ಪರಮಾಣು ಆಯುಧಗಳನ್ನು ಹೊಂದಿದ್ದಾರೆ. ಇವುಗಳಲ್ಲಿ ಒಂದೇ ಒಂದು ದೇಶವೇ ಸರಿ. ಈ ವಿನಾಶಕಾರಿ ಆಯುಧ ಬಳಕೆ ಮಾಡಿದರೆ ಕೇವಲ ನಾವು ವಾಸಿಸುವ ಜಗತ್ತು ನಾಶ ಮಾಡುವರು. ಬದಲಾಗಿ ಬರುವ ಪೀಳಿಗೆಗಳಿಗೆ ಭಯಂಕರ ಮತ್ತು ವಿನಾಶಕಾರಕ ಫಲಗಳನ್ನು ಅನುಭವಿಸಲು ಬಿಡುವರು. ಪರಮಾಣು ಯುದ್ಧ ಪ್ರಾರಂಭವಾದರೆ ಪೀಳಿಗೆಯಿಂದ ಪೀಳಿಗೆಯವರೆಗೆ ಮಾನಸಿಕ ಅಸ್ವಸ್ಥ ಹಾಗೂ ದೈಹಿಕ ಅಂಗವಿಕಲತೆ ಹೊಂದುವ ಮಕ್ಕಳು ಜನ್ಮತಾಳುವರು. ಹೀಗೆ ಅವರು ತಮ್ಮ ದೇಶಕ್ಕೆ ಸೇವೆ ಸಲ್ಲಿಸುವ ಬದಲಾಗಿ

ದೇಶಕ್ಕೆ ಕಂಟಕರಾಗಿ ಜೀವಿಸುವರು ಮತ್ತು ಸಮಾಜಕ್ಕೆಭಾರವಾಗಿ ಜೀವಿಸುವರು. ಅವರ ಮನೆಗಳು ಸೂತಕವಹಿಸುವುದು. ಅವರ ಕ್ಷೇತ್ರಗಳು ದುಃಖಭರಿತವಾಗುವುದು. ಮತ್ತು ಆ ಸಮುದಾಯಗಳು ಕಷ್ಟಕಾರ್ಪಣ್ಯಗಳಿಗೆ ಗುರಿಯಾಗುವುದು. ನಮ್ಮ ಮೂರ್ಖತನ ಮತ್ತು ಸ್ವಾರ್ಥದಿಂದಾಗಿ ಆಗುವ ಯುದ್ಧಗಳಿಂದಗಿ ಅವರು ನಮ್ಮ ಮೇಲೆ ಶಾಪ ಹಾಕುವರು. ಅದಕ್ಕೆ ಅವರು ಅರ್ಹರು. ಏಕೆಂದರೆ ಈ ಯುದ್ಧಗಳು ಅವರು ಜನ್ಮ ನೀಡುವ ಮೊದಲೇ ಅವರ ಕನಸುಗಳನ್ನು ಹಿಚುಕಿ ಹಾಕಿವೆ. ಆದ್ದರಿಂದ ಯಾರು ಈ ಯೋಚನೆಯಲ್ಲಿರಬಾರದು. ನಾವು ಎದುರಿಸುತ್ತಿರುವ ಪರಿಸರ ಸಮಸ್ಯೆಗಳು ಸಾಮಾನ್ಯವಾಗಿದೆ ಎಂದು. ನಾವು ನಮ್ಮ ವಚನಗಳನ್ನು ಬದಲಾಯಿಸಿಕೊಳ್ಳದೇ ಈ ಪರಿಸರ ಬದಲಾಗಬಹುದೆಂಬ ಯೋಚನೆ ಬಿಡಿರಿ.

ಹುಝೂರ್ ಅನ್ವರ್ (ಅಬಿಅ) ನುಡಿದರು. ಇದಲ್ಲದೇ ಲೋಕದಲ್ಲಿ ಶಾಂತಿ ರಕ್ಷಣೆ ಹದಗೆಡಲು ಇಸ್ಲಾಮಿನ ಮೇಲೆ ಅಪವಾದ ಹೊರೆಸುತ್ತಿದ್ದರೆ ಈ ಅಸ್ಥಿರತೆಯ ಸಂಕಟ ಇನ್ನೂ ಹೆಚ್ಚಾಗುವುದು. ಯಾವುದೇ ಧರ್ಮ ಅಥವಾ ಅದರ ಅನುಯಾಯಿಗಳ ಮೇಲೆ ಆಕ್ರಮಣ ಮಾಡಿದರೆ ವಿಭಜನೆಯಲಿ ಇನ್ನೂ ಹೆಚ್ಚಳವಾಗುವುದು. ಇದರಿಂದ ಉಗ್ರವಾದಿಗಳಿಗೆ ಬಲಬರುವುದು. ಆದ್ದರಿಂದ ಎಲ್ಲ ವರ್ಗಗಳಲ್ಲಿ ಮತ್ತು ವಿಶ್ವಾಸಗಳಲ್ಲಿ ಇವುಗಳ ಮಧ್ಯೆ ದ್ವೇಷಾಗ್ನಿ ಹರಡಲು ಹೆಚ್ಚು ಪ್ರಯತ್ನಶೀಲರಾಗುವರು.

ಹುಝೂರ್ ಅನ್ವರ್ (ಅಬಿಅ) ಹೇಳಿದರು. ನಾನು ಸ್ಪಷ್ಟವಾಗಿ ಹೇಳಿದಂತೆ ಮುಸ್ಲಿಂ ರಾಷ್ಟ್ರಗಳು ಅಥವಾ ಉಗ್ರವಾದಿ ಗುಂಪುಗಳು ಇಸ್ಲಾಂ ಧರ್ಮದ ಹೆಸರಿನಲ್ಲಿ ದೌರ್ಜನ್ಯ ಮಾಡಲು ಕಾರಣವೇನೆಂದರೆ ಅವರು ಅದರ ಶಿಕ್ಷಣದಿಂದ ಪ್ರತ್ಯೇಗೊಂಡಿದ್ದಾರೆ. ಕೇವಲ ವೈಯಕ್ತಿಕ ಲಾಭಗಳನ್ನು ಪಡೆಯಬಯಸುತ್ತಾರೆ. ಇಂದಿನ ಸಮಸ್ಯೆಗಳಿಗೆ ಮತ್ತು ಯುದ್ಧಗಳಿಗೆ ಧರ್ಮದಿಂದ ಯಾವುದೇ ಸಂಬಂಧವಿಲ್ಲ. ಬದಲಾಗಿ ಇದು ಕೇವಲ ಸಂಪತ್ತು, ಬಲ ಮತ್ತು ಭೌಗೋಳಿಕ ಜಯ ಸಾಧಿಸುವ ಉದ್ದೇಶ ಹೊಂದಿವೆ.

**7 ಅಕ್ಟೋಬರ್ 2019 (ಸೋಮವಾರ)**

**ಹುಝೂರ್ ಅನ್ವರ್‌ರವರ ವಾಖಿಫಿನ್ ನೌ ಅವರೊಂದಿಗೆ ಭೇಟಿ**

6 ಗಂಟೆ 20 ನಿಮಿಷಕ್ಕೆ ವಾಖಿಫೀನ್ ನೌ ಅವರೊಂದಿಗೆ ಹುಝೂರರ ಕ್ಲಾಸ್ ಆರಂಭಗೊಂಡಿತು. ಕಾರ್ಯಕ್ರಮದ ಪ್ರಾರಂಭವು ಖುರ್‌ಆನ್ ಪಠಣದೊಂದಿಗೆ ಆಯಿತು. ಅದನ್ನು ಅಝೀಝುಂ ಫರೀದ್ ಅಹಮದ್ ಮತ್ತು ಫ್ರೆಂಚ್ ಅನುವಾದ ಅಝೀಝುಂ ಹುಸೈನ್ ಅಹ್ಮದ್ ಪ್ರಸ್ತುತಪಡಿಸಿದರು. ಅನಂತರ ಅಝೀಝುಂ ಶರ್‌ಜೀಲ್ ಅಹ್ಮದ್ ದಾನಿಶ್ ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ಅವರ ಕವನ

**ಹರ್ ತರಫ್ ಫಿಕ್ರ್ ಕೋ ದೌಡಾಕೆ ಥಕಾಯ ಹಮ್ ನೆ**
**ಕೋಯಿ ದೀನ್ ದೀನೆ ಮುಹಮ್ಮದ್ ಸಾ-ನಾ ಪಾಯಾ ಹಮ್‌ನೆ**

ಇಂದ ಆಯ್ದ ಕವನ ಪಂಕ್ತಿಗಳನ್ನು ಹೇಳಿದರು. ಅನಂತರ ಅಝೀಝುಂ ಸಕೀರ್ ಅಹ್ಮದ್ ಹಝ್ರತ್ ರಸೂಲುಲ್ಲಾಹ್(ಸ) ರವರ ಒಂದು ಪವಿತ್ರ ಹದೀಸಿನ ಉರ್ದು ಹಾಗೂ ಫ್ರೆಂಚ್ ಭಾಷೆಯಲ್ಲಿ ಅನುವಾದ ಪ್ರಸ್ತುತಪಡಿಸಿದರು.

ಹಝ್ರತ್ ಅಬ್ದುಲ್ಲ ಬಿನ್ ಮಸ್‌ಊದ್(ರ) ವರದಿ ಮಾಡುತ್ತಾರೆ. ನಾನು ಹಝ್ರತ್ ರಸೂಲುಲ್ಲಾಹ್(ಸ) ಅವರಿಗೆ ಕೇಳಿದೆ. ಯಾವ ಕರ್ಮ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಉತ್ತಮವಾಗಿದೆ? ರಸೂಲುಲ್ಲಾಹ್(ಸ) ಹೇಳಿದರು. ಸಮಯಾನುಸಾರವಾಗಿ ನಮಾಝ್ ನಿರ್ವಹಿಸುವುದು, ಮತ್ತೆ ಹೆತ್ತವರೊಡನೆ (ತಂದೆ ತಾಯಿಯರೊಡನೆ) ಉತ್ತಮ ವ್ಯವಹಾರ, ಮತ್ತೆ ಅಲ್ಲಾಹನ ಮಾರ್ಗದಲ್ಲಿ ಜಿಹಾದ್.

ಅನಂತರ ಅಝೀಝುಂ ತೌಸೀಫ್ ಅಹ್ಮದ್ ರಿಸಾಲಾ ಅಲ್ವಸಿಯ್ಯತ್‌ನಿಂದ ಹಝ್ರತ್ ಮಸೀಹ್ ಮೌಊದ್(ಅ) ರವರ ಒಂದು ಅಧ್ಯಾಪನೆ ಪ್ರಸ್ತುತಪಡಿಸಿದರು. ಅಝೀಝುಂ ಇದ್ರೀಸ್ ಹದ್‌ನಿ ಫ್ರೆಂಚ್ ಅನುವಾದ ಪ್ರಸ್ತುತಪಡಿಸಿದರು.

**ಅಲ್‌ವಸಿಯ್ಯತ್‌ನಿಂದ ಅಧ್ಯಾಪನೆ**

ಇದು ಅಲ್ಲಾಹನ ವಿಧಿ ನಿಯಮವಾಗಿದೆ. ಈ ಭೂಮಿಯಲ್ಲಿ ಮನುಷ್ಯನನ್ನು ಸೃಷ್ಟಿಸಿದಾಗಿನಿಂದ ಸದಾ ಈ ವಿಧಿನಿಯಮವನ್ನು ಪ್ರಕಟಿಸುತ್ತಾ ಇದ್ದಾನೆ. ಅವನು ತನ್ನ ಪ್ರವಾದಿಗಳಿಗೆ ಮತ್ತು ಮಾರ್ಗದರ್ಶಕರಿಗೆ ಸಹಾಯ ನೀಡುತ್ತಾನೆ. ಮತ್ತು ಅವರಿಗೆ ಜಯ ನೀಡುತ್ತಾನೆ. ಆ ಪೈಕಿ ಅಲ್ಲಾಹನು ಹೀಗೆ ನುಡಿದನು: **ಕತಬಲ್ಲಾಹಿ ಲಅಗ್‌ಲಿಬನ್ನ ಅನಾ ವ ರುಸುಲಿ (ಅಲಮುಜಾದಲ:22)** ಕಾರ್ಯವು ಪ್ರವಾದಿಗಳ ಕಾರ್ಯವು ಅಲ್ಲಾಹನ ಸಂದೇಶವನ್ನು ಪೂರ್ಣ ರೀತಿಯಿಂದ ತಲುಪಿಸುವುದಾಗಿರುತ್ತದೆ. ಯಾರೂ ಅವರ ವಿರುದ್ಧ ವಾದಿಸುವ ಶಕ್ತಿ ಹೊಂದಿರುವುದಿಲ್ಲ. ಹೀಗೆ ಅಲ್ಲಾಹನು ಬಲವಾದ ದೃಷ್ಟಾಂತಗಳ ಮೂಲಕ ಅವರ ವಿರುದ್ಧ ವಾದಿಸುವ ಶಕ್ತಿ ಹೊಂದಿರುವುದಿಲ್ಲ. ಹೀಗೆ ಅಲ್ಲಾಹನು ಬಲವಾದ ದೃಷ್ಟಾಂತಗಳ ಮೂಲಕ ಅವರ ಸತ್ಯತೆ ಜಾಹಿರುಪಡಿಸುತ್ತಾನೆ. ಯಾವ ಸತ್ಯತೆಯನ್ನು ಅವರು ತಲುಪಿಸ ಬಯಸುತ್ತಾರೋ ಅದರ ಬೀಜ ಅವರ ಕೈಯಿಂದಲೇ ಉತ್ತರಿಸುತ್ತಾನೆ. ಯಾರೂ ಅವರ ವಿರುದ್ಧ ವಾದಿಸುವ ಶಕ್ತಿ ಹೊಂದಿರುವುದಿಲ್ಲ. ಹೀಗೆ ಅಲ್ಲಾಹನು ಬಲವಾದ ದೃಷ್ಟಾಂತಗಳ ಮೂಲಕ ಅವರ ಸತ್ಯತೆ ಜಾಹಿರುಪಡಿಸುತ್ತಾನೆ. ಆದರೆ ಅವರ ಪರಿಪೂರ್ಣತೆ ಅವರ ಕೈಯಿಂದ ಮಾಡಿಸುವುದಿಲ್ಲ. ಬದಲಾಗಿ ಇಂತಹ ಸಮಯದಲ್ಲಿ ಅವರಿಗೆ ವಫಾತ್ ಕೊಟ್ಟು ಮೇಲ್ನೋಟಕ್ಕೆ ಒಂದು ಅಸಫಲತೆಯ ದೃಶ್ಯ ಭಯ ಅವರೊಂದಿಗೆ ಇರಿಸುತ್ತಾನೆ. ವಿರೋಧಿಗಳಿಗೆ ಅಪಹಾಸ್ಯ ಮಾಡಲು, ಅಪವಾದ ಹೊರಿಸಲು ಸಂದರ್ಭ ಒದಗಿಸುತ್ತಾನೆ. ಅವರೆಲ್ಲರೂ ಅಪಹಾಸ್ಯ ಅಪಮಾನ ಮಾಡಿದ ನಂತರ ಮತ್ತೆ ಇನ್ನೊಂದು ತನ್ನ ಶಕ್ತಿಯುತ ದೈವಿಕ ಕೈ ತೋರಿಸುತ್ತಾನೆ. ಆ ಮೂಲಕ ಅಪರಿಪೂರ್ಣ ಕಾರ್ಯಗಳನ್ನೆಲ್ಲ ಪರಿಪೂರ್ಣ ಹೊಂದುವಂತಹ ಮಾರ್ಗಗಳನ್ನು ದಯಪಾಲಿಸುತ್ತಾನೆ. ಹೀಗೆ ತನ್ನ ಎರಡು ದಿವ್ಯಶಕ್ತಿಗಳನ್ನು ಪ್ರಕಟಪಡಿಸುತ್ತಾನೆ.

1) ಮೊದಲ ಬಾರಿಗೆ ಸ್ವಯಂ ಪ್ರವಾದಿಗಳ ಕೈಯಿಂದ ತನ್ನ ಶಕ್ತಿಯನ್ನು ತೋರಿಸುತ್ತಾನೆ.
2) ಪ್ರವಾದಿಗಳು ನಿಧನ ಹೊಂದಿದ ನಂತರ ಗೊಂದಲಗಳು ಉಂಟಾಗುತ್ತದೆ ಮತ್ತು ಶತ್ರುಗಳಿಗೆ ಬಲ ಬರುತ್ತದೆ. ಈ ಸಂಘಟನೆ ವಿಫಲತೆಗೆ ತುತ್ತಾಗಿದೆ ಎಂದು ಭಾವಿಸುತ್ತಾರೆ ಮತ್ತು ಶೀಘ್ರದಲಿ ಈ ಜಮಾಅತ್ ನಾಶವಾಗುವುದು ಎಂದು ನಿಶ್ಚಯಿಸುತ್ತಾರೆ. ಸ್ವಯಂ ಜಮಾಅತಿನ ಜನರು ಗಾಬರಿ ಪಡುತ್ತಾರೆ. ಅವರ ನೋಟ ಮುರಿದಂತೆ ಭಾಸವಾಗುತ್ತದೆ. ಎಷ್ಟೋ ದೌರ್ಭಾಗ್ಯವಂತರು ಮುರ್‌ತದ್ (ಧರ್ಮಭ್ರಷ್ಟರಾಗುತ್ತಾರೆ) ಆಗುತ್ತಾರೆ. ಆಗ ಅಲ್ಲಾಹನು ಎರಡನೆಯ ಸಲ ತನ್ನ ಬಲವಾದ ದಿವ್ಯ ಶಕ್ತಿಯನ್ನು ಪ್ರಕಟಪಡಿಸುತ್ತಾನೆ ಮತ್ತು ದುರ್ಬಲಗೊಳ್ಳುತ್ತಿರುವ ಜಮಾಅತಿನಲ್ಲಿ ಶಕ್ತಿ ತುಂಬುತ್ತಾರೆ. ಆದ್ದರಿಂದ ಕೊನೆಯ ತನಕ ತಾಳ್ಮೆ ವಹಿಸಿದವನು ಈ ಪವಾಡವನ್ನು ಕಾಣುತ್ತಾನೆ. ಹಝ್ರತ್ ಅಬುಬಕ್ಕರ್ ಸಿದ್ದೀಖ್(ರ) ಅವರ ಸಮಯದಲ್ಲೂ ಹೀಗೆ ಆಗಿತ್ತು. ಹಝ್ರತ್ ರಸೂಲುಲ್ಲಾಹ್(ಸ) ರವರ ನಿಧನವು ಅಕಾಲದ ನಿಧನ ಎಂದು ತಿಳಿದರು. ಹಲವು ಹಳ್ಳಿಗರಾದ ಮುರ್ಖರು ಧರ್ಮ ಭ್ರಷ್ಟರಾದರು. ಸಹಾಬರೂ ಸಹ ದುಃಖದಿಂದ ಹುಚ್ಚರಂತಾದರು. ಆಗ ಅಲ್ಲಾಹನು ಹಝ್ರತ್ ಅಬೂಬಕ್ಕರ್ ಸಿದ್ದೀಖ್(ರ) ಅವರನ್ನು ನಿಲ್ಲಿಸಿ ಮತ್ತೊಮ್ಮೆ ತನ್ನ ದೈವಿಕಶಕ್ತಿಯ ಮಾದರಿ ತೋರಿಸಿದನು ಮತ್ತು ಇಸ್ಲಾಮ್ ಧರ್ಮವನ್ನು ದುರ್ಬಲತೆಯಿಂದ ಮೇಲಕ್ಕೆತ್ತಿದನು. ಮತ್ತು ತನ್ನ ವಾಗ್ದಾನವನ್ನು ಪೂರ್ಣಗೊಳಿಸಿದನು. **ವಲಯುಮಕ್ಕಿನನ್ನ ಲಹುಮ್ ದಿನುಹುಮುಲ್ಲಝಿರ್ ತಝಾಲಹುಮ್ ವಲಯುಬದ್ದಿಲನ್ನಹುಮ್ ಮಿಮ್‌ಬಅದಿ ಖೌಫಿಹಿಮ್ ಅಮ್‌ನ** ಅಂದರೆ ಭಯಭೀತ ವಾತಾವರಣ ನಂತರ ಮತ್ತೆ ಅವರ ಹೆಜ್ಜೆಗಳನ್ನು ದೃಢಪಡಿಸಲಾಗುವುದು. (ಅಲ್‌ವಸಿಯ್ಯತ್, ರೂಹಾನಿ ಖಝಾಯಿನ್, ಸಂಪುಟ-2, ಪುಟ-304,305)

ಅನಂತರ ಅಝೀಝುಂ ಫಾರಿಸ್ ಅಹ್ಮದ್, ತಲಾಲ್ ಅಹ್ಮದ್ ಹಾಜಿಮ್ ಇಫ್ತಿಯಾಬ್ ಮತ್ತು ಯಾಗ್‌ಪೂರ್ ಹಮದ್, ಹಝ್ರತ್ ಮಸೀಹ್ ಮೌಊದ್(ಅ) ಅವರ ಖಸೀದದಿಂದ ಈ ಕವನ ಪಂಕ್ತಿಗಳನ್ನು ಪ್ರಸ್ತುತಪಡಿಸಿದರು.

**(Presentation) ಪ್ರದರ್ಶನ ನೀಡುವಿಕೆ**

ಅನಂತರ ಅಝೀಝುಂ ಉಸಾಮ ಅಬ್ದುಲ್ ರಬ್ಬಾನಿ ಫ್ರಾನ್ಸ್‌ನ ಸುಪ್ರಸಿದ್ಧ ಪರ್ವತ ಶ್ರೇಣಿಗಳ ಪರಿಚಯ ಒಳಗೊಂಡ ಒಂದು Presentation ಆಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳಿದನು. ನಾವು ಭೂಮಿಯನ್ನು ವಿಶಾಲಗೊಳಿಸಿ ಅದರಲ್ಲಿ ಭದ್ರವಾದ ಪರ್ವತಗಳನ್ನು ನೆಲೆಗೊಳಿಸಿದ್ದೇನೆ. ಹಾಗೂ ತಕ್ಕದಾದ ಪ್ರಮಾಣದಲ್ಲಿ ಅದರಲಿ ಎಲ್ಲವೂ ಬೆಳೆಯುವಂತೆ ಮಾಡಿದ್ದೇವೆ.

ಈ ನೆಲೆಯಲ್ಲಿ ಈ ವಿನೀತನು ಫ್ರಾನ್ಸ್‌ನ ಸುಪ್ರಸಿದ್ಧ ಪರ್ವತ ಶ್ರೇಣಿಗಳ ಬಗ್ಗೆ ಕೆಲವು ಮಾಹಿತಿಗಳನ್ನು ಸಂಗ್ರಹಿಸಿರುತ್ತೇನೆ. ಅದು ಪ್ರಿಯ ಇಮಾಮರ ಸಮ್ಮುಖ ಪ್ರಸ್ತುತಪಡಿಸುತ್ತಿದ್ದೆನೆ. ಪ್ರಪ್ರಥಮವಾಗಿ Alps ಪರ್ವತ ಶ್ರೇಣಿಗಳ ಬಗ್ಗೆ ಕೆಲವು ಮಾಹಿತಿಗಳನ್ನು ನಿಮ್ಮ ಮುಂದೆ ಇಡುತ್ತೇನೆ. Alps ಎಲ್ಲದಕ್ಕಿಂತ ಎತ್ತರ ಹಾಗೂ ವಿಶಾಲ ಪರ್ವತ ಶ್ರೇಣಿಯಾಗಿದೆ. ಅದು ಯೂರೋಪಿನಲ್ಲಿ ಸ್ಥಿರವಾಗಿದೆ. ಆಲ್ಪಾಯೀನಿನ 8 ದೇಶಗಳ (ಪಶ್ಚಿಮದಿಂದ ಪೂರ್ವ) ಆಚೆ ಸುಮಾರು 1200 ಕಿ.ಮೀ ವರೆಗೆ ಹರಡಿದೆ. ಅವುಗಳಲ್ಲಿ ಸ್ವಿಝರ್‌ಲ್ಯಾಂಡ್, ಇಟಲಿ, ಆಸ್ಟ್ರೇಲಿಯಾ, ಅಬಿಸ್ಟಿನ್, ಜರ್ಮನಿ, ಫ್ರಾನ್ಸ್, ಮೆನಾಕೋ, ಸಲ್ವೇನಿಯಾ ಶಾಮಿಲಾಗಿದೆ.

Mont blanc ಫ್ರಾನ್ಸ್‌ನ ಶಾಮೋನಿ ನಗರದಲ್ಲಿದೆ. Mons blanc ಪದದ ಅರ್ಥವು ಬಿಳಿ ಪರ್ವತ ಎಂದಾಗುತ್ತದೆ. ಏಕೆಂದರೆ ಇದು ಇಡಿಯಾಗಿ ಮಂಜುಗಡ್ಡೆಯಿಂದ ಆವರಿಸಿರುತ್ತದೆ. ಪ್ರತಿ ವರ್ಷ ಈ ಪರ್ವತ ನೋಡಲು ಸುಮಾರು 50 ಲಕ್ಷ ಜನರು ಬರುತ್ತಿರುತ್ತಾರೆ. Mont Blanc ಸುತ್ತಲೂ Ski

way ಗಳು ಇವೆ. ಅಲ್ಲಿ ಜನರು ವಿಶೇಷವಾಗಿ ಸೆಕೆಗಾಲದಲ್ಲಿ ಸ್ಕೈ ಮಾಡಲು ಬರುತ್ತಾರೆ. Mont blanc ಮಧ್ಯದಲ್ಲಿ ಒಂದು ಟವರ್ ಸಹ ಇದೆ. 19 ಜುಲೈ 1965 ರಲ್ಲಿ ಅದರ ಉದ್ಘಾಟನೆಯಾಗಿತ್ತು.

ಈ ಟನಲ್ ಫ್ರಾನ್ಸ್‌ನ ಶಾಮೋನ ನಗರ ಮತ್ತು ಇಟಲಿಯ ಕೊರ್ಮಾಯೊರನ್ನು ಜೋಡಿಸುತ್ತದೆ. ಈ ಟನಲನ್ನು Tunnel of Mont Blanc ಎನ್ನುತ್ತಾರೆ. Alps ನಲ್ಲಿ ಒಳಗೊಂಡ ಇನ್ನೊಂದು ಸುಪ್ರಸಿದ್ಧ ಪರ್ವತ ಅದರ ಹೆಸರು ಬಾರ್‌ದೆ ಏಕ್ರೀನ್ ಎಂದಾಗಿದೆ. ಇನ್ನೊಂದು ಸುಪ್ರಸಿದ್ಧ ಪರ್ವತ ಅದರ ಹೆಸರು Barres des Ecrins ಇದೆ. ಈ ಪರ್ವತದ ಎತ್ತರ ಸುಮಾರು 4100 ಮೀಟರ್ ಆಗಿದೆ. ಈ ಪರ್ವತ Pelvoux ನಗರದಲ್ಲಿದೆ. ಈ ಪರ್ವತದಲ್ಲಿ ಕೆಲವು ಖ್ಯಾತ ನದಿಗಳ ಹೆಸರು Pau, Rhone ಎಂದಾಗಿದೆ.

ಅನಂತರ Pynemees ದಕ್ಷಿಣ ಪಶ್ಚಿಮ ಯೂರೋಪಿನ ಒಂದು ಪರ್ವತ ಶ್ರೇಣಿ ಇದೆ. ಅದು ಫ್ರಾನ್ಸ್ ಮತ್ತು ಸ್ಪೇನ್ನಿನ ಮಧ್ಯದಲ್ಲಿ ನೈಸರ್ಗಿಕ ಸರಹದ್ದು ಆಗಿದೆ. ಈ ಪರ್ವತ ಶ್ರೇಣಿಯ ಅತ್ಯಂತ ಎತ್ತರದ ಶಿಖರವು ಇಟ್ಟಿಗೆಗಳದ್ದಾಗಿದೆ. ಅದರ ಎತ್ತರ 3 ರಿಂದ 4 ಮೀಟರ್ ಇದೆ. ಇಲ್ಲಿ ಒಂದು ಮನೋಹರ ಸರೋವರವೂ ಇದೆ. ಅದರ ಹೆಸರು Lac d'Amouste ಎಂದಿದೆ. ಈ ಸರೋವರವು ತುಂಬಾ ಸುಪ್ರಸಿದ್ಧವಾಗಿದೆ.

ಕೊನೆಯಲ್ಲಿ ಮಾಸೆಫ್ ಸೆಂಟ್ರಲ್ ಪರ್ವತ ಶ್ರೇಣಿಯ ಕುರಿತು ಮಾಹಿತಿ ಪ್ರಸ್ತುತವಿದೆ. ಮಾಸೆಫ್ ದಕ್ಷಿಣ ಫ್ರಾನ್ಸ್‌ನ ಮಧ್ಯದ ಒಂದು ಪರ್ವತ ಕ್ಷೇತ್ರವಾಗಿದೆ. ಅದು ಚೂಪಾದ ಮತ್ತು ಶಿಖರಗಳಲ್ಲಿ ಹಾಗೂ ಸಮತೋಲಿತ ಎತ್ತರದಲ್ಲಿ ಒಳಗೊಂಡಿದೆ. ಇದು ಎಷ್ಟು ದೊಡ್ಡದಾಗಿದೆ ಎಂದರೆ ಫ್ರಾನ್ಸ್‌ನ ಒಟ್ಟು ವಿಸ್ತೀರ್ಣದ 15 ಪ್ರತಿ ಶತವಾಗಬಹುದು. ಅವುಗಳಲ್ಲಿ ಅತ್ಯಂತ ಎತ್ತರದ ಪರ್ವತ ಪೋಯಿದೆ ಸಾನ್ಸ ಆಗಿದೆ. ಇದೊಂದು ಪುರಾತನ astro volcanoದ ಭಾಗವಾಗಿದೆ. ಅದು ಸುಮಾರು 220000 ವರ್ಷದಿಂದ ಅನುಪಯುಕ್ತವಾಗಿದೆ. ಈ ಪರ್ವತದ ಎತ್ತರ 1886 ಮೀಟರ್ ಇದೆ.

**ವಾಖಿಫೀನ್ ನೌ ಅವರ ಪ್ರಶ್ನೋತ್ತರ :**

ಅನಂತರ ಹುಝೂರ್ ವಾಖಿಫೀನ್ ನೌ ಮಕ್ಕಳಿಗೆ ಪ್ರಶ್ನೆಗಳನ್ನು ಕೇಳುವ ಅನುಮತಿ ನೀಡಿದರು.

- ಒಬ್ಬ ವಕ್ಫೆ ನೌ ಬಾಲಕ ಪ್ರಶ್ನೆ ಮಾಡಿದನು. "ಹುಝೂರರಿಗೆ ಖಲೀಫರಾಗುವ ಸಂದರ್ಭ ಒದಗಿ ಬರುತ್ತಿರಲಿಲ್ಲವಾದರೆ ತಾವು ಏನಾಗಬಯಸುತ್ತಿದ್ದಿರಿ? ಆಗ ಹುಝೂರ್ ಹೇಳಿದರು. ನಾನು ಮೊದಲಿನಿಂದಲೇ ಜಮಾಅತಿನ ಸೇವೆ ಮಾಡುತ್ತಾ ಬಂದಿದ್ದೇನೆ. ಹಾಗೆಯೇ ಜಮಾಅತಿನ ಸೇವೆ ಮಾಡುತ್ತಿದ್ದೆ. ಉಳಿದಂತೆ ನಾನು ಸಂದರ್ಭವನ್ನು ಕಾಯುವುದಿಲ್ಲ. ಕಾಯುವ ಅವಶ್ಯಕತೆಯೂ ಇಲ್ಲ.
- ಒಬ್ಬ ವಕ್ಫೆ ನೌ ಬಾಲಕ ಕೇಳಿದನು. ಹುಝೂರರಿಗೆ ಫ್ರಾನ್ಸ್‌ನ ಜಲ್ಸ ಹೇಗನಿಸಿತು? ಅದಕ್ಕೆ ಹುಝುರ್ ಉತ್ತರಿಸಿದರು ಇದು ಜಲ್ಸ ಅಂತೂ ಅಲ್ಲ ಸಣ್ಣದಾದ ಒಂದು ಸಮಾರಂಭ ಎನಿಸಿತು. ಯು.ಕೆ ಯಲ್ಲಿ ಇತ್ತೀಚೆಗೆ ಖುದ್ದಾಮುಲ್ ಅಹ್ಮದಿಯಾ ಇಜ್‌ತಿಮಾ ಆಗಿದೆ. ಅದರಲ್ಲಿ ಸುಮಾರು 6000 ಹಾಜರಿ ಇತ್ತು. ಆದರೆ ಇಲ್ಲಿ ನಿಮ್ಮ ಇಡೀ ಜಲ್ಸದಲ್ಲಿ ಜನಸಂಖ್ಯೆ 2700/2800 ಇತ್ತು.
- ಒಬ್ಬ ವಕ್ಫೆ ನೌ ಬಾಲಕ ಕೇಳಿದನು. ಮುಸ್ಲಿಮನಾದ ತಾಯಂದಿರ ಪಾದದಡಿಯಲ್ಲಿ ಸ್ವರ್ಗವಿರುತ್ತದೆಯಾದರೆ ಮುಸ್ಲಿಮೇತರ ತಾಯಂದಿರ ಪಾದದಡಿಯಲ್ಲಿ ಸ್ವರ್ಗವಿರುವುದಿಲ್ಲವೇ? ಆಗ ಹುಝೂರ್ ಹೇಳಿದರು. ಪ್ರತಿಯೊಬ್ಬರಿಗೆ ಸರಿಯಾದ ತರಬೇತಿ ನೀಡುವ ತಾಯಿ, ತನ್ನ ಮಕ್ಕಳನ್ನು ಸಜ್ಜನರಾಗಿ ಮಾಡುವ ತಾಯಿಯ ಮಕ್ಕಳು ಸಹಜವಾಗಿ ಸಾತ್ವಿಕರಾಗುವರು ಮತ್ತು ಸ್ವರ್ಗ ಸೇರುವರು. ಮೊದಲ ವಿಷಯವೆಂದರೆ ತಾಯಂದಿರ ಸೇವೆ ಮಾಡಬೇಕು. ಎರಡನೆಯದಾಗಿ ಧಾರ್ಮಿಕರಾದ ತಾಯಿ ತನ್ನ ಮಕ್ಕಳಿಗೆ ಧರ್ಮ ಕಲಿಸುವಳು. ಅಲ್ಲಾಹನ ಆರಾಧನೆ ಮಾಡಲು ಕಲಿಸುವವಳು. ಅವರಿಗೆ ಒಳ್ಳೆಯ ಸಂಸ್ಕಾರ ನೀಡುವಳು ಅಲ್ಲಾಹನು ಅದನ್ನು ಮೆಚ್ಚುವನು. ಉಳಿದದ್ದು ನಿಮಗೆ ಹೇಳಲಾಗಿದೆ. ನಿಮ್ಮ ತಾಯಿಯ ಸೇವೆಯನ್ನು ಮಾಡಿ, ಅವರ ಮಾತುಗಳನ್ನು ಕೇಳಿ, ಹಾಗೆಯೇ ತಾಯಂದಿರಿಗೆ ಹೇಳಲಾಗಿದೆ. ತಮ್ಮ ಮಕ್ಕಳಿಗೆ ಸಂಸ್ಕಾರಗಳನ್ನು ನೀಡಿ. ಸ್ವರ್ಗಕ್ಕೆ ಕೊಂಡೊಯ್ಯುವ ಕೆಲಸ ಅಲ್ಲಾಹನದ್ದಾಗಿದೆ. ಯಾರನ್ನು ಸ್ವರ್ಗಕ್ಕೆ ಕೊಂಡೊಯ್ಯಬೇಕು. ಅಲ್ಲಾಹನು ಚೆನ್ನಾಗಿ ಬಲ್ಲವನಾಗಿರುತ್ತಾನೆ. ಆದರೆ ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು. ತನ್ನ ಮಕ್ಕಳಿಗೆ ಒಳ್ಳೆಯ ತರಬೇತಿ ನೀಡುವ ಮಾತೆಯರು, ಅವರಿಗೆ ಅಲ್ಲಾಹನ ಬಗ್ಗೆ ಆಸಕ್ತಿ ಉಂಟಾದರೆ, ಅವನ ಆರಾಧನೆ ಮಾಡವವರಾಗಿದ್ದಾರೆ ಮತ್ತು ಅವನ ಸೃಷ್ಟಿಯ ಸೇವೆ ಮಾಡುವವರಾದರೆ ಅವರ ಹಕ್ಕುಗಳನ್ನು ನೀಡುವವರಾಗಿದ್ದಾರೆ. ಅವರ ಕುರಿತು ಹೇಳಲಾಗಿದೆ ಸ್ವರ್ಗಕ್ಕೆ ಹೋಗುವರು ಎಂದು. ಆದರೆ ಮನುಷ್ಯನು ಮುಸ್ಲಿಮನಾಗಲಿ ಅಮುಸ್ಲಿಮ ಒಳ್ಳೆಯ ಮನುಷ್ಯನೆಂದರೆ ತನ್ನ ಮಾತಪಿತರನ್ನು ಗೌರವಿಸುವುದು, ಆಧರಿಸುವನು. ಅವರ ಮಾತುಗಳನ್ನು ಕೇಳುವವನೂ ಆಗಿರುತ್ತಾನೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಇದನ್ನು ಪ್ರಸ್ತಾಪಿಸಿದ್ದಾನೆ. ಅವರ ಮಾತುಗಳನ್ನು ಕೇಳಿರಿ. ಅವರ ಸೇವೆ ಮಾಡಿರಿ. ಆದರೆ ಅಲ್ಲಾಹನ ಹೊರತು ಆರಾಧಿಸಲು ಹೇಳಿದರೆ ಅವರ ಮಾತು ಕೇಳದಾಗಿದೆ.
- ಒಬ್ಬ ವಾಖಿಫೆ ನೌ ಪ್ರಶ್ನೆ ಮಾಡಿದನು. ತಾವು ಎಷ್ಟು ದೇಶಗಳನ್ನು ಸಂದರ್ಶಿಸಿದ್ದೀರಿ? ಆಗ ಹುಝೂರ್(ಅ) ಹೇಳಿದರು. ಹಲವು ದೇಶಗಳನ್ನು ಸಂದರ್ಶಿಸಿದ್ದೆನೆ. ವರಧಿಗಳನ್ನು ಓದಿ ಎಣಿಸಿಕೊಳ್ಳಬಹುದು. ನಾನು 35 ಅಥವಾ 36 ದೇಶಗಳನ್ನು ಸಂದರ್ಶಿಸಿರಬಹುದು.
- ಒಬ್ಬ ವಾಖಿಫೆನೆ ನೌ ಪ್ರಶ್ನೆ ಹೇಳಿದನು. ಹುಝೂರ್ ಈಗ ನಾನು 15 ವರ್ಷದವನಾಗಿದ್ದೇನೆ. ಮುಂದಿನ ವರ್ಷ ಜಾಮಿಯಾ ಹೋಗಬಹುದೇ? ಹುಝೂರ್ ಅನ್ವರ್(ಅಬಿಅ) ಹೇಳಿದರು. ಜಾಮಿಯಾ ಹೋಗಲಿಕ್ಕೆ ವಯಸ್ಸಿನ ಪ್ರಶ್ನೆ ಬರುವುದಿಲ್ಲ. ಜಾಮಿಯಾ ಹೋಗಲಿಕ್ಕೆ ಸೆಕೆಂಡರಿ ಶಾಲೆ ಓದುವುದು ಅವಶ್ಯಕವಾಗುತ್ತದೆ. ನೀವು ಸೆಕೆಂಡರಿ ಶಾಲೆ ಉತ್ತೀರ್ಣರಾಗಿದ್ದರೆ ಮತ್ತು ಜಾಮಿಯಾ ಸಂದರ್ಶನ ಉತ್ತೀರ್ಣರಾದರೆ ಅವರು ಸರಿ ಎನ್ನುತ್ತಾರೆ.

ನಾವು ನಿಮಗೆ ಪ್ರವೇಶ ನೀಡಬಹುದು. ನಿಮ್ಮ ಶಿಕ್ಷಣದನ್ವಯ ಮತ್ತು ಧಾರ್ಮಿಕ ಜ್ಞಾನದನ್ವಯವು ಪರೀಕ್ಷೆ ಕೊಟ್ಟು ಹೋಗಬಹುದಾಗಿದೆ. 15, 16, 17 ವರ್ಷಗಳ ಪ್ರಶ್ನೆ ಇಲ್ಲ. 15, 16 ರಿಂದ ಹಿಡಿದು 18 ವರ್ಷದ ವಯಸ್ಸಿನವರೆಗೆ ಜಾಮಿಯಾಗೆ ಹೋಗುತ್ತಾರೆ. ಆದರೆ ಸೆಕೆಂಡರಿ ಶಾಲೆ ವಿಸ್ತೀರ್ಣ ಮಾಡಬೇಕಾಗುತ್ತಿದೆ.

- ಒಬ್ಬ ವಾಖ್‌ಫೆ ನೌ ಬಾಲಕ ಪ್ರಶ್ನೆ ಕೇಳಿದನು. ನಿಮಗೆ ಯಾವ ಮಾಂಸ ಇಷ್ಟವಿದೆ? ಆಗ ಹುಝೂರ್ ಹೇಳಿದರು. ನನಗೆ ಮಾಂಸ ಹೆಚ್ಚಾಗಿ ಇಷ್ಟವಿಲ್ಲ.

ಅದೇ ವಾಖಿಫೆ ನೌ ಬಾಲಕ ಕೇಳಿದನು: ಹುಝೂರ್ ತಮಗೆ ಮೀನು ಇಷ್ಟವಿದೆಯೇ? ಆಗ ಹುಝೂರ್ ಹೇಳಿದರು. ಮೀನು ಇಷ್ಟವಿದೆ. ಉಳಿದ ಜಾನುವಾರುಗಳ ಮಾಂಸ ತಿಂದು ಹಲ್ಲುಗಳು ಕೆಟ್ಟು ಹೋಗುತ್ತವೆ. ಹೆಚ್ಚು ಮಾಂಸ ತಿನ್ನುವವರ ಹಲ್ಲುಗಳು ಕೆಡುತ್ತವೆ. ಆದ್ದರಿಂದ ಸಮತೋಲಿತ ಆಹಾರ ಉಪಯೋಗಿಸಬೇಕು ಆದ್ದರಿಂದ ತರಕಾರಿಯೂ ತಿನ್ನಬೇಕು. ಧಾನ್ಯಗಳು ತಿನ್ನಬೇಕು. ಮಾಂಸವೂ ತಿನ್ನಬೇಕು. ಮಾಂಸ ತಿನ್ನಲು ಹೆಚ್ಚು ತವಕಿಸಬಾರದು.

- ಒಬ್ಬ ವಾಖಿಫೆ ನೌ ಬಾಲಕನು ಪ್ರಶ್ನೆ ಕೇಳಿದನು. ನಿಮ್ಮ Bodyguard ಆಗಲು ಹೇಗೆ ಸಾಧ್ಯ? ಆಗ ಹುಝೂರ್ ಹೇಳಿದರು. ಅವರನ್ನು ಕೇಳಿ. ನನ್ನ ಭಾವನೆಯಲ್ಲಿ ಯಾರಿಗೆ ಏನೂ ಕೆಲಸವಿಲ್ಲವೋ ಅವರು Body guard ಆಗುತ್ತಾರೆ. ನೀವು ಸರಿಯಾಗಿ ಓದಿರಿ. ಅರ್ಹರಾಗಿರಿ. ಡಾಕ್ಟರ್ ಅಥವಾ ಇಂಜಿನಿಯರ್ ಆಗಿರಿ.
- ವಾಖಿಫೆ ನೌ ಬಾಲಕನು ಕೇಳಿದನು. ನನಗೆ ಮುರಬ್ಬಿ ಸಾಹೇಬರಾಗಬೇಕಾಗಿದೆ. ಆಗ ಹುಝೂರ್ ಹೇಳಿದರು. ಮುರಬ್ಬಿ ಆಗಿರಿ. ಸಾಹಿಬನಾಗುವುದು ಬೇಡ. ನೀವು ಸಾಹಿಬನಾದರೆ ಯಾವ ಕೆಲಸಕ್ಕೂ ಬರಲಿಕ್ಕಿಲ್ಲ. ಮುರಬ್ಬಿ ಕೇವಲ ಮುರಬ್ಬಿಯಾಗಿದ್ದರೆ ಒಳ್ಳೆಯದಾಗುತ್ತದೆ. ಅವರು ಸಾಹೇಬರಾಗಿದ್ದರೆ ತಮ್ಮ ಕೆಲಸಕ್ಕೆ ಬರುವುದಿಲ್ಲ.
- ಒಬ್ಬ ವಾಖಿಫೆ ನೌ ಬಾಲಕನು ಕೇಳಿದನು. ಕ್ರೀಡೆಯಲ್ಲಿ ಯಾವುದು ಇಷ್ಟವಾಗಿದೆ? ಆಗ ಹುಝೂರ್ ಹೇಳಿದರು. ಈಗಂತೂ ನಾನು ಆಡುವುದಿಲ್ಲ. ಆದರೆ ಬಾಲ್ಯದಲ್ಲಿ ನಾನು ಕ್ರಿಕೆಟ್ ಆಡುತ್ತಿದ್ದೆ. ಬ್ಯಾಡ್‌ಮಿಂಟನ್ ಆಡುತ್ತಿದ್ದೆ.

ವಾಖಿಫೀನ್ ನೌ ಮಕ್ಕಳ ಜೊತೆಯಲ್ಲಿ ಹುಝೂರ್‌ರವರ ಈ ಕ್ಲಾಸ್ 8 ಕಾಲು ಗಂಟೆಯವರೆಗೆ ನಡೆಯಿತು. ಅನಂತರ ಹುಝೂರ್ ತಮ್ಮ ಕಛೇರಿಗೆ ತೆರಳಿದರು.

**Saint Prix ನ ಮೇಯರ್ ಅವರ ಭೇಟಿ ಹುಝೂರ್ ಅನ್ವರ್(ಅಬಿಅ) ರೊಡನೆ:**

Saint Prix ಕ್ಷೇತ್ರ (ಅಲ್ಲಿ ನಮ್ಮ ಮಿಷನ್ ಕ್ಲಾಸ್ ದಾರುಸ್ಸಲಾಮ್ ಮತ್ತು ಮಸ್ಜಿದ್ ಮುಬಾರಕ್ ಇದೆ) ದ Mayor Jean Pierre Enjalbert ಹುಝೂರ್ ಅನ್ವರ್(ಅಬಿಅ) ರವರನ್ನು ಭೇಟಿಯಾಗಲು ಬಂದಿದ್ದರು. ಒಂದು

ಸಮಯದಲ್ಲಿ ಈ Mayor ರವರು ನಮ್ಮ ಜಮಾಅತಿಗೆ ತುಂಬ ವಿರೋಧವಾಗಿದ್ದರು. ಅವರು ಸದರಿ ನಮ್ಮ ಜಮಾಅತಿನ ಮಿಷನ್ ಹೌಸ್‌ನ್ನು ಬಂದ್ ಮಾಡಿದ್ದರು. ಈ ಮಿಷನ್ ಹೌಸ್ ಉಗ್ರವಾದಕ್ಕೆ ಕಾರಣವಾಗಿದೆ ಎಂಬ ಅಪವಾದ ಹಚ್ಚಿ ಬಂದ್ ಮಾಡಿದ್ದರು.

ಈ ಘಟನೆಯ ಕೆಲ ಸಮಯದಲ್ಲಿಯೇ ಅಂದರೆ ಡಿಸೆಂಬರ್ 2004 ರಲ್ಲಿ ಹುಝೂರ್ ಅನ್ವರ್ ಫ್ರಾನ್ಸ್ ಪ್ರವಾಸ ಹೊರಟು ಫ್ರಾನ್ಸ್ ಜಲ್ಸ ಸಾಂಭಾಕ್ಕೆ ಆಗಮಿಸಿದಾಗ ಇವರು ಭಾಗವಹಿಸಿದರು. ಮತ್ತು ಹುಝೂರ್ ಅವರ ಉಪಸ್ಥಿತಿಯಲ್ಲಿ ತನ್ನ ಪರಿಚಯ ಭಾಷಣದಲ್ಲಿ ಹೀಗೆ ಹೇಳಿದರು. ಇಂದು ಇತರ ಜನರು ಪ್ರಸ್ತುತಪಡಿಸುತ್ತಿರುವ ಇಸ್ಲಾಮಿನ ಮುಖ ಚಹರೆಯು ಸರಿಯಿಲ್ಲ. ಅಹ್ಮದಿಯಾ ಜಮಾಅತ್ ಮಾತ್ರ ಇಸ್ಲಾಮಿನ ಶಾಂತಿಪೂರ್ಣ ಹಾಗೂ ಸುಂದರ ಚಹರೆಯನ್ನು ತೋರಿಸುತ್ತಿದೆ. ಈ ಮೇಯರ್ ಆ ಸಮಯ ಕೇವಲ 5 ನಿಮಿಷಕ್ಕಾಗಿ ಆಗಮಿಸಿದ್ದರು. ತಮ್ಮ ಸಂಕ್ಷಿಪ್ತ ಭಾಷಣದ ನಂತರ ಹುಝೂರ್ ಅನ್ವರ್(ಅಬಿಅ) ಅವರ ತತ್ವಧಾರಿತ ಭಾಷಣ ಕೇಳಲು ಕುಳಿತುಕೊಂಡರು ಅವರಿಗೆ ಬಾಷಣ ಮುಗಿಯದೆ ಏಳಲಾಗಲಿಲ್ಲ. ನಂತರವೂ ಅಲ್ಲಿ ವಿಶೇಷವಾದ ಮಾರ್ಕಿನಲ್ಲಿ ಅರ್ಧ ಗಂಟೆ ಕುಳಿತುಕೊಂಡಿದ್ದರು. ಅತ್ಯಂತ ಪ್ರಭಾವಿತರಾಗಿ, 'ನಿಮ್ಮ ಏನೇ ಕೆಲಸವಿದ್ದರೆ ನನಗೆ ಹೇಳಿ ನಾನು ಹಾಜರಿದ್ದೇನೆ ಎಂದು ಹೇಳಿ ನಿರ್ಗಮಿಸಿದರು.

ಮತ್ತೆ ಈ ಮೇಯರ್ 10 ಅಕ್ಟೋಬರ್ 2008 ರಲ್ಲಿ ಮಸ್ಜಿದ್ ಮುಬಾರಕ್ ಫ್ರಾನ್ಸ್‌ನ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು. ಆಗ ಹುಝೂರ್ ಆಗಮಿಸಿದ್ದರು. ಇಂದು ಮತ್ತೆ ಹುಝೂರ್‌ರನ್ನು ಭೇಟಿಯಾಗಲು ಬಂದಿದ್ದರು ಅವರು ಹೇಳುತ್ತಾರೆ. ಹುಝೂರ್‌ರನ್ನು ಕಂಡು ನಾನು ತುಂಬ ಸಂತುಷ್ಠನಾಗಿದ್ದೇನೆ.

ಹುಝೂರ್ ಅನ್ವರ್ ಕೇಳಿದರು. ನಿಮ್ಮ ಕೆಲಸ ಹೇಗೆ ನಡೆದಿದೆ. ಆಗ ಮೇಯರ್ ಹೇಳಿದರು. ನಮ್ಮ ಈ ಕ್ಷೇತ್ರವು ಒಂದು ಊರಿನಹಾಗಿದೆ. ಎಲ್ಲವು ಒಳ್ಳೆಯದಾಗಿದೆ.

ಹುಝೂರ್ ಅನ್ವರ್ ಕೇಳಿದಾಗ ಮೇಯರ್ ಹೇಳಿದರು. ನನಗೆ ಈ ಹುದ್ದೆ ವಹಿಸಿಕೊಂಡು 25 ವರ್ಷಗಳಾಗಿವೆ. ಆದರೆ ಈ Term ನಂತರ ನನ್ನ ಕೆಲಸ ಮುಗಿಯುತ್ತದೆ. ಆಗ ಹುಝೂರ್ ಅನ್ವರ್ ಕೇಳಿದರು. ದಣಿದು ಬಿಟ್ಟಿದ್ದ ಅಥವ ಪಾರ್ಲಿಮೆಂಟ್ ಹೋಗ ಬಯಸುತ್ತೀರ. ಆಗ ಅವರು ಹೇಳಿದರು. ಬೇರೆ ಏನಾದರೂ ಕೆಲಸ ಮಾಡುವೆನು. ಆದರೆ ರಾಜಕೀಯದಲ್ಲಿ ಇರಬಯಸುವುದಿಲ್ಲ.

ಮೇಯರ್ ಹೇಳಿದರು. ಈಗ ನನ್ನ ಕ್ಷೇತ್ರದಲ್ಲಿ ಹೆಚ್ಚಿನ ಗಮನ Germany ಯ ಮೇಲೆ ಕೊಡುತ್ತಿದ್ದೇನೆ. ನಾನು ಕೃತಕ ಗೊಬ್ಬರ ಇಲ್ಲದ ವಸ್ತುಗಳನ್ನು ಒದಗಿಸ ಬಯಸುತ್ತೇನೆ. 2008 ರಲ್ಲಿ ಗೊಬ್ಬರದ ವಸ್ತುಗಳನ್ನು ಶಾಲೆಯಲ್ಲಿ ಇಡದಂತೆ ನಿಷೇಧಿಸಿದ್ದೆ. ಕೃತಕಗೊಬ್ಬರ ಇಲ್ಲದ ವಸ್ತುಗಳನ್ನು ನಾವು ಶಾಲೆಗಳಿಗೆ ಪೂರೈಸುತ್ತಿದ್ದೇವೆ. ಆಗ ಹುಝೂರ್ ಹೇಳಿದರು. ಇತರರಿಗೆ ತಿಳಿಸಿ ಹೇಳಿ, ಮೇಯರ್ ಹೇಳಿದರು. ಅಹ್ಮದಿಯಾ ಜಮಾಅತ್ ಪ್ರತಿ ವರ್ಷದ ಪ್ರಾರಂಭದಲ್ಲಿ ವಿವಿಧ ಕ್ಷೇತ್ರಗಳಿಗೆ ಹೋಗಿ ಸ್ವಚ್ಛತಾ ಕಾರ್ಯ ಕೈಗೊಳ್ಳುತ್ತಿದ್ದೆ. ಜಮಾಅತ್ ಈ ಕ್ಷೇತ್ರದಲ್ಲಿ ನಮಗೆ ತುಂಬಾ ಸಹಕಾರ ನೀಡುತ್ತಿದೆ. ಸಂಭಾವನೆ ಇಲ್ಲದೆ ಕೆಲಸ ನಿರ್ವಹಿಸುತ್ತದೆ. ಪಾರ್ಕ್‌ಗಳನ್ನು ಸ್ವಚ್ಛಗೊಳಿಸುತ್ತಿದೆ.

ಅಮೀರ್ ಸಾಹೇಬ್ ಫ್ರಾನ್ಸ್ ಹೇಳಿದರು. ಮೇಯರ್‌ರವರು ಪ್ರತಿ ಸ್ಥಳದಲ್ಲೂ ಜಮಾಅತ್‌ಗೆ ಸಹಾಯ ನೀಡುತ್ತಾರೆ ಮತ್ತು ಜಮಾಅತಿನ ಪರವಾಗಿ ಮಾತನಾಡುತ್ತಾರೆ.

ಮೇಯರರು ಹೇಳಿದರು. ಅಹ್ಮದಿಯಾ ಜಮಾಅತ್ ನನ್ನ ಕ್ಷೇತ್ರದಲ್ಲಿ ಇದ್ದುದಕ್ಕೆ ನನಗೆ ತುಂಬಾ ಸಂತೋಷವಿದೆ. ನಾನು ಯಾರ ಮೇಲೆಯೂ ಭರವಸೆ ಮಾಡುವುದಿಲ್ಲ. ಕೇವಲ ಅಹ್ಮದಿಯಾ ಜಮಾಅತಿನ ಮೇಲೆ ಭರವಸೆ ಮಾಡುತ್ತೇನೆ ಯಾರೂ ನನಗೆ ಏನೂ ಕೊಡದಿದ್ದರೂ ಜಮಾಅತಿನಿಂದ ನಾನು ಬೇಡಿದ್ದೆಲ್ಲಾ ಸಹಾಯವು ಸಿಗುತ್ತದೆ. ಮೇಯರರು ಹೇಳಿದರೂ ನನ್ನ ಇಡೀ ನಗರವು ಅಹ್ಮದಿಯಾ ಜಮಾಅತ್‌ನ್ನು ಪ್ರೀತಿಸುತ್ತದೆ. ಕೇವಲ ನಾನು ಮಾತ್ರವಲ್ಲ. ಪ್ಲಾಸ್ಟಿಕ್ ಲಕೋಟೆಗಳನ್ನು ಬ್ಯಾನ್ ಮಾಡುವ ವಿಷಯ ಬಂದಾಗ ಮೇಯರ್‌ರವರು ಹೇಳಿದರೂ ನನ್ನ ಅಧಿಕಾರ ವ್ಯಾಪ್ತಿಯವರೆಗೆ ನಾನು ಅಲ್ಲಿ ನಿಷೇಧ ಹಾಕಿರುತ್ತೇನೆ. ಇನ್ನು ಕೆಲಸ ಆಗಬೇಕಾಗಿದೆ. ಅಂಗಡಿ ಇತ್ಯಾದಿಗಳಲ್ಲಿ ಇನ್ನೂ ಉಪಯೋಗವಾಗುತ್ತಿದೆ.

ಹುಝೂರ್ ಅನ್ವರ್ ಹೇಳಿದರು. ಲೋಕದಲ್ಲಿ ಅರ್ಧಭಾಗ ಮಾಲಿನ್ಯ ಪ್ಲಾಸ್ಟಿಕ್‌ಗಳಿಂದ ಆಗಿದೆ. ಸಮುದ್ರಕ್ಕೆ ಹೊಲಸನ್ನು ಬಿಸಾಕುತ್ತಿದ್ದಾರೆ. ಕಾರ್ಖಾನೆಗಳ ತ್ಯಾಜ್ಯವು ಅದರಲ್ಲಿ ಸೇರುತ್ತದೆ. ಅದು ಮಾಲಿನ್ಯಕ್ಕೆ ಕಾರಣವಾಗುತ್ತದೆ. ಆ ಎಲ್ಲಾ ನೀರು ಸಮುದ್ರಕ್ಕೆ ಹೋಗುತ್ತದೆ. ಆ ಸಮುದ್ರದಿಂದ ಜೀವನಕ್ಕೆ ಹಾನಿವುಂಟಾಗುತ್ತದೆ.

ಮೇಯರ್ ಸಾಹೇಬರು ಹೇಳಿದರು. ನನಗೆ ಗೊತ್ತಿದೆ. ನಿಮ್ಮ ಜಮಾಅತ್ ಯಾವಾಗಲೂ ಗಿಡ ನೆಡುವ ಪ್ರಯತ್ನದಲ್ಲಿದೆ.

ಹುಝೂರ್ ಅನ್ವರ್ ಹೇಳಿದರು. ಅರಣ್ಯಗಳಿಂದ ಮರಗಳನ್ನು ಕಡಿಯುವ ಮೂಲಕ ಅವರು ಲೋಕದ ಪರಿಸರವನ್ನು ಹಾಳುಗೆಡವಿದ್ದಾರೆ. ಇನ್ನು ಉಳಿದಷ್ಟು ಪ್ಲಾಸ್ಟಿಕ್ ಹಾಳು ಮಾಡುತ್ತದೆ.

ಆಗ ಮೇಯರ್ ಹೇಳಿದರು. ಇದು ಶತಪ್ರತಿಶತ ಸರಿಯಾಗಿರುತ್ತದೆ. ಮೇಯರ್ ಹೇಳಿದರು. ಹುಝೂರ್‌ರವರು ಪ್ರಪಂಚ ಪರ್ಯಾಟನೆ ಮಾಡುವವರಾಗಿದ್ದೀರಿ. ಮಹೋನ್ನತ ವ್ಯಕ್ತಿತ್ವವುಳ್ಳವರಾಗಿದ್ದೀರಿ. ಹುಝೂರ್ ನಮಗೆ ಸಹರಿಕಸಬೇಕು. ಆಗ ಹುಝೂರ್ ಹೇಳಿದರು. ನಿಮ್ಮ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲು ಸಹಕರಿಸುವೆವು.

ಆಗ ಮೇಯರ್ ಹೇಳಿದರು. ಜಮಾಅತ್ ಮೊದಲಿನಿಂದಲೂ ನಮಗೆ ಸಹಕಾರ ನೀಡುತ್ತಿದೆ. ನಾನು ಕೇವಲ ಪ್ರೀತಿ ಸ್ನೇಹಕ್ಕಾಗಿ ಇಲ್ಲಿ ಬಂದಿರುತ್ತೇನೆ

ಆಗ ಹುಝೂರ್ ಅನ್ವರ್ ಹೇಳಿದರು. ನಾವು ಡೆಲ್ಲಿ ಹೋದ ಮೇಲೆಯೂ ಅಲ್ಲಿಯ ಪರಿಸ್ಥಿತಿಗನುಗುಣವಾಗಿ ಸಹಕರಿಸುತ್ತೇವೆ. ಜಮಾಅತ್ ಎಲ್ಲೆಡೆಯೂ ಈ ಕೆಲಸ ನಿರ್ವಹಿಸುತ್ತಿದೆ. ಆಗ ಮೇಯರ್ ಹೇಳಿದರು. ನಾನು ಕೇವಲ ಹುಝೂರ್‌ರನ್ನು ನೋಡಲು ಬಂದಿರುತ್ತೇನೆ.

ಹುಝೂರ್ ಅನ್ವರ್ ಹೇಳಿದರು. ನಿಮ್ಮನ್ನು ಭೇಟಿಯಾಗಿ ತುಂಬಾ ಸಂತೋಷವಾಯಿತು. ನೀವು 11 ವರ್ಷಗಳ ನಂತರ ಭೇಟಿಯಾದರು. ನೆನಪಿಟ್ಟಿದ್ದೀರಿ. ಅದಕ್ಕೆ ಧನ್ಯವಾದಗಳು.

ಮೇಯರ್ ಹೇಳಿದರು. ಹುಝೂರ್ ಅನ್ವರ್ ನೀವು ಲೋಕದಲ್ಲಿ ಶಾಂತಿ ಸ್ಥಾಪಿಸಲು ಪ್ರಯತ್ನಿಸುತ್ತಿದ್ದೀರಿ. ತಾವು ಬಹುವೇಗವಾಗಿ ಈ ಕೆಲಸವನ್ನು ಮುನ್ನಡೆಸಿಕೊಂಡು ಹೋಗಬೇಕು. ನಾನು ಹುಝೂರ್ ಅನ್ವರ್‌ರವಲ್ಲಿ ಏನು ಕಾಣುತ್ತಿದ್ದೇನೋ, ಲೋಕದಲ್ಲಿ ನನಗೆ ಎಲ್ಲೂ ಕಾಣುತ್ತಿಲ್ಲ. ಇಸ್ಲಾಮಿನ ಮೇಲೆ ಹೆಚ್ಚುತ್ತಿರುವ ಕಲೆಗಳನ್ನು ನೀವು ಹೋಗಿಸ ನಿವಾರಿಸ ಬಯಸುತ್ತಿದ್ದೀರಿ.

ಆಗ ಹುಝೂರ್ ಅನ್ವರ್ ಹೇಳಿದರು. ನಾವು ಮಾಡುತ್ತಿದ್ದೇವೆ ಸಣ್ಣ ಪ್ರಮಾಣದಲ್ಲಿ ಈ ಕೆಲಸ ನಡೆಯುತ್ತಿದೆ. ಮತ್ತೆ ಹಬ್ಬುತ್ತದೆ. ಅಹ್ಮದಿಯರಂತು ಎಲ್ಲಾ ಕಡೆ ಮಾಡುತ್ತಿದ್ದಾರೆ. ಶಾಂತಿ ಸ್ಥಾಪನೆಗೋಸ್ಕರ ನಾವು ವಿವಿಧ ಸ್ಥಳಗಳಲ್ಲಿ ಕಾರ್ಯಕ್ರಮಗಳನ್ನು ನಡೆಸಿ ಇಸ್ಲಾಮಿನ ನಿಜವಾದ ರೂಪವನ್ನು ಪ್ರಸ್ತುತಪಡಿಸುತ್ತಿದ್ದೇವೆ.

ಮೇಯರ್ ಹೇಳಿದರು. ನಮ್ಮ ಈ ಊರಿನ ಜನಸಂಖ್ಯೆಯು 9,000 ಜನರನ್ನು ಒಳಗೊಂಡಿದೆ. ಫ್ರಾನ್ಸ್ ರೀಜನ್ನಿನ ಅನ್ವಯ ಒಂದು ಸಣ್ಣದಾದ ಕ್ಷೇತ್ರವಾಗಿದೆ. ಕೆಲ ಜನರು ಇಲ್ಲಿಂದ ತಮ್ಮ ಕೆಲಸ ಗಳಿಗೋಸ್ಕರ ಪ್ಯಾರಿಸ್‌ಗೆ ವಲಸೆ ಹೋಗುತ್ತಿದ್ದಾರೆ.

ಆಗ ಹುಝೂರ್ ಅನ್ವರ್ ಹೇಳಿದರು. ಇಲ್ಲಿಂದ ಹೋಗುವ ಜನರಿಗೆ ಫ್ಲಾಟ್ ಮಾದರಿಯ ಅಗ್ಗದ ದರದಲ್ಲಿ ಮನೆಗಳನ್ನು ಕಟ್ಟಿಸಿಕೊಟ್ಟರೆ ನಗರಗಳಿಂದ ದೂರವಿರುವ ಜನರು ಇಲ್ಲಿ ಬಂದು ವಾಸಿಸಬಹುದು. ಹೀಗೆ ಜನಸಂಖ್ಯೆಯನ್ನು ನಿಯತ್ರಿಸಬಹುದು.

ಆಗ ಮೇಯರ್ ಹೇಳಿದರು. ಯಾರೇ ಬಡವರಿದ್ದರೆ ಅವರಿಗೆ ಮನೆ ಕಟ್ಟಿಕೊಡಲು ಪ್ರಯತ್ನಿಸುತ್ತಿದ್ದೇನೆ.

ಹುಝಾರ್ ಅನ್ವರ್ ಹೇಳಿದರು. ಇದೀಗ ಸಣ್ಣ ಸಣ್ಣ ಮನೆಗಳಲ್ಲಿ ವಾಸಿಸುವ ಕಾಲ ಬರುತ್ತಿದೆ. ಇದರಿಂದ ನಿರ್ವಹಣೆ ಸುಲಭವಾಗುತ್ತದೆ. ಈಗ ದೊಡ್ಡ ಮನೆಗಳನ್ನು ನಿರ್ವಹಿಸುವುದು ಕಷ್ಟಕರವಾಗಿದೆ. ಆದ್ದರಿಂದ ಜನರು ದೊಡ್ಡ ಮನೆಗಳನ್ನು ಮಾರುತ್ತಿದ್ದಾರೆ.

ಆಗ ಮೇಯರರು ಹೇಳಿದರು. ಹುಝೂರ್ ಅನ್ವರ್ ಹೇಳುತ್ತಿರುವುದು ಸತ್ಯವಾಗಿದೆ. ನನ್ನ ಭಾವನೆಯು ಇದೇ ಆಗಿದೆ. ಅದರಂತೆ ನಾನು ಕಾರ್ಯ ಕೈಗೊಳ್ಳುತ್ತಿದ್ದೇನೆ.

ಆಗ ಹುಝೂರ್ ಅನ್ವರ್ ಹೇಳಿದರು. ಅಲ್ಲಾಹನು ನಿಮಗೆ ಯಶಸ್ಸನ್ನು ನೀಡಲಿ.

ಮೇಯರ್ ಹುಝೂರ್ ಅನ್ವರ್‌ರವರೊಡನೆ ಆ ಭೇಟಿಯು 8.45 ವರೆಗೆ ಜಾರಿಯಲ್ಲಿತ್ತು. ಕೊನೆಯಲ್ಲಿ ಮೇಯರ್ ಸಾಹೇಬ್ ಹುಝೂರ್ ಅನ್ವರ್‌ರವರೊಡನೆ ಬಾವಚಿತ್ರ ತೆಗೆಸಿಕೊಳ್ಳುವ ಭಾಗ್ಯ ಪಡೆದರು.

ಅನಂತರ ಹುಝೂರ್ ಅನ್ವರ್ ಮಸ್ಜಿದ್ ಮುಬಾರಕ್‌ಗೆ ಆಗಮಿಸಿದರು. ಹಾಗೂ ಮಗರೀಬ್ ಇಶಾ ನಮಾಝುಗಳನ್ನ ಜಮಾಅತ್ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್‌ಗಳ ನಿರ್ವಹಣೆಯ ನಂತರ ಈ ಕೆಳಗೆ ನಮೂದಿಸಿದ 3 ನಿಕಾಹ್‌ಗಳ ಏಲಾನ್ ಮಾಡಿದರು.

**(ಮುಂದುವರಿಯುವುದು)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

TITLE NO: PUNKAN00001
Weekly **BADAR** Qadian
Distt: Gurdaspur (Pb.) INDIA Qadian - 143516
Vol No.1 Thursday, 23 April 2020 Issue No. 15

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಯೂರೋಪ್ ಪ್ರವಾಸ (ಸೆಪ್ಟೆಂಬರ್, ಅಕ್ಟೋಬರ್ 2019)*

**(ಬದರ್ ಸಂಚಿಕೆ 14ರ ವರದಿಯ ಉಳಿದ ಭಾಗ)**

**ಫ್ರೆಂಚ್ ಅತಿಥಿಗಳೊಡನೆ ಕಾರ್ಯಕ್ರಮ**

ಕಾರ್ಯಕ್ರಮದನ್ವಯ 6 ಗಂಟೆ 40 ನಿಮಿಷಕ್ಕೆ ಹುಝೂರ್ ಪುರುಷರ ಮಾರ್ಕಿಯಲ್ಲಿ ಆಗಮಿಸಿದರು ಮತ್ತು ಫ್ರೆಂಚ್ ಅತಿಥಿಗಳೊಡನೆ ಕಾರ್ಯಕ್ರಮ ಪ್ರಾರಂಭಿಸಿದರು. ಮುಕರ್ರಮ್ ಅತಾಉಲ್ ಹಯ್ಯಿ ಸಾಹಿಬ್ ಖುರ್‌ಆನ್ ಪಠಣ ಮಾಡಿದರು. ಅನಂತರ ಅದರ ಫ್ರೆಂಚ್ ಅನುವಾದ ಪ್ರಸ್ತುತಪಡಿಸಿದರು. ಅನಂತರ ಮುಕರ್ರಮ್ ಆಸಿಫ್ ಆರಿಫ್ ಸಾಹಿಬ್ National Sec. Umar Rama ಫ್ರಾನ್ಸ್ ತಮ್ಮ ಪರಿಚಯ ಭಾಷಣ ಮಾಡಿದರು.

ಅನಂತರ ಪ್ರಪ್ರಥಮವಾಗಿ Twie chateau ದ Major Mr. David ತಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸಿದರು. ಅದರಲ್ಲಿ ಅವರು ಹೀಗೆ ಹೇಳಿದರು. Twie chateau ಎಂಬ ಈ ಸಣ್ಣದಾದ ನಗರದಲ್ಲಿ ಖಲೀಫರ ಆಗಮನ ನಮಗೆ ತುಂಬ ಸಂತೋಷದ ಹಾಗೂ ಗೌರವದ ವಿಷಯವಾಗಿದೆ. ಈ ಸಮುದಾಯದ ಸಂಗತಿಯಲ್ಲಿ ಅಹ್ಮದಿಯಾ ಜಮಾಅತಿನೊಂದಿಗೆ ಸಂಬಂಧ ಬೆಳೆಸುವುದರಲ್ಲಿ ಶಾಂತಿಯ ಸಂದೇಶ ಅತ್ಯಂತ ಪ್ರಮುಖವಾಗಿದೆ. ನನಗೆ ಭರವಸೆ ಇದೆ. ಹವಾಮಾನ ಸರಿಯಿಲ್ಲದಿದ್ದರೂ ನಿಮ್ಮ ಜಲ್ಸ ಆರಾಮದಾಯಕವಾಗಿ ನಡೆಯುವದು ಎಂದು. ಈ ಸ್ಥಳವು ಪ್ಯಾರಿಸ್ ನಗರಕ್ಕೆ ಸಮೀಪವಾಗಿದೆ, ತುಂಬ ಒಳ್ಳೆಯ ಹವಾಮಾನವಿದೆ. ನೀವು ನಮ್ಮನ್ನು ಅರಿಯುವಿರಿ ಮತ್ತು ನಿಮ್ಮ ಪರಿಚಯ ನೀಡುವಿರಿ. ನಾನು ನಿಮ್ಮೆಲರ ವಿಶೇಷವಾಗಿ ಖಲೀಫರು ಇಲ್ಲಿ ಆಗಮಿಸಿದ್ದಕ್ಕೆ ತುಂಬ ಕೃತಜ್ಞನಾಗಿದ್ದೆನೆ. ನಿಮಗೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಬಯಸುತ್ತೇನೆ.

ಅನಂತರ Dr. Ammelise Detalix ಸಾಹಿಬಾ ತಮ್ಮ ಪರಿಚಯ ಭಾಷಣ ಪ್ರಸ್ತುಪಡಿಸಿದರು. ಅವರು ಪ್ಯಾರಿಸ್ ವಿಶ್ವವಿದ್ಯಾಇಲಯದೊಂದಿಗೆ ಸಂಬಂಧಿಸಿದವರಾಗಿದ್ದರೆ ಮತ್ತು Southest Asian Department ನಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಅವರು ಹೇಳಿದರು. ನಾನು ವೃತ್ತಿಯಿಂದ Socialogist ಆಗಿದ್ದೇನೆ ಮತ್ತು ಮುಸ್ಲಿಂ ಅಲ್ಪಸಂಖ್ಯಾತರ ಕುರಿತು ಸಂಶೋಧನೆ ನಡೆಸುತ್ತಿದ್ದೇನೆ. ಈ ಅಸಾಧಾರಣ ಸಮಾರಂಭದಲ್ಲಿ ನನಗೆ ಆಹ್ವಾನಿಸುವುದಕ್ಕೆ ಇಮ್ಮನ್ನು ಅಭಿನಂದಿಸುತ್ತೇನೆ. ನಾನು 10 ವರ್ಷಗಳಿಂದ ಅಹ್ಮದಿಯರನ್ನು ಬಲ್ಲೆ. ಪ್ರಪ್ರಥಮವಾಗಿ ಅಹ್ಮದಿಯರೊಡನೆ ನನ್ನ ಭೇಟಿ ಇಂಡೋನೆಷಿಯಾದಲ್ಲಾಯಿತು. ಅಲ್ಲಿ ಅವರು ತುಂಬ ವಿರೋಧವನ್ನು ಎದುರಿಸುತ್ತಿದ್ದರು. ನಾನು ಅವರಿಂದ ತುಂಬ ಪ್ರಭಾವಿತನಾಗಿದ್ದೆ. ಮತ್ತೆ ನನಗೆ ಕಂಚೋಡಿಯಾದಲ್ಲಿ ಅಹ್ಮದಿ ಭೇಟಿಯಾದರು. ನಾನು Saint Prix ನಲ್ಲಿಯೂ ಮೂರು ವರ್ಷಗಶಳಿಂದ ಅಹ್ಮದಿಯರೊಡನೆ ಭೇಟಿಯಾಗುತ್ತಿದ್ದೇನೆ. ಧಾರ್ಮಿಕ ಅಲ್ಪಸಂಖ್ಯಾತರ Atlas ನಲ್ಲಿ ಅಹ್ಮದಿಯರು ಕುರಿತು ಒಂದು ಅಧ್ಯಾಯ ಬರೆದಿದ್ದೇನೆ. ಇಂದು ನಮ್ಮ ದಪಿಶ ಮುಸಲ್ಮಾನರ ಪೈಕಿ ಒಂದು ಸೂಕ್ಷ್ಮ ಕಾಲಘಟ್ಟದಲ್ಲಿ ನಡೆಯುತ್ತಿದೆ. ಇದರ ಉದಾಹರಣೆ ಮೊದಲು ಎಲ್ಲೂ ಸಿಗಲಿಕ್ಕಿಲ್ಲ. ಇಂತಹ ಸಮಯದಲ್ಲಿ ಖಲೀಫರು ನೀಡಿದ ಸಂದೇಶವು ನಮ್ಮ ಮನಸ್ಸುಗಳಿಗೆ ತೃಪ್ತಿ ನೀಡಿದೆ ಮತ್ತು ಅಂಧಕಾರದಿಂದ ತೆರಳಲು ಪ್ರೇರಣೆ ನೀಡಿದೆ. ಫ್ರಾನ್ಸ್‌ನಲ್ಲಿ ಇಸ್ಲಾಮೋ ಫ್ಲೇಬಿಯಾ ತುಂಬ ಸಾಮಾನ್ಯವಾಗಿ ಬಿಟ್ಟಿದೆ. ಆದರೆ ಶಾಂತಿ ಮತ್ತು ಪ್ರೀತಿ ಎಂದೂ ಪ್ರತ್ಯೇಕಗೊಳ್ಳುವುದಿಲ್ಲ. ಅಸ್ಸಲಾಮು ಅಲೈಕುಂ.

ಅನಂತರ Dr. Longewish katrine ಸಹಿಬಾ ಅವರು Amthropolgist ಆಗಿದ್ದಾರೆ ಮತ್ತು University of Jommal Gutemberg ನಲ್ಲಿ ಆಫ್ರೀಕನ್ ಸ್ಟಡೀಸ್‌ನ ಇನ್‌ಚಾರ್ಜ್ ಆಗಿದ್ದಾರೆ. ಅವರು ತಮ್ಮ ಪರಿಚಯ ಭಾಷಣದಲ್ಲಿ ಹೀಗೆ ಹೇಳಿದರು. ಅಹ್ಮದಿಯಾ ಜಮಾಅತ್‌ನೊಂದಿಗೆ ತನ್ನ ಭೇಟಿ ಪಶ್ಚಿಮ ಆಫ್ರಿಕಾದ ದೇಶ ಬೋರ್ಕಿನೋ ಫಾಸ್ಕೊದಲ್ಲಿರುವ ಒಂದು ಆಸ್ಪತ್ರೆಯಲ್ಲಿ ಆಯಿತು. ಇದಾದ ನಂತರ ನಾವು ಈ ಜಮಾಅತಿನೊಂದಿಗೆ ನನ್ನ ಸಂಬಂಧ ಬೆಳೆಸಿದೆ. ಮತ್ತೆ ಫ್ರಾನ್ಸ್, ಜರ್ಮನಿ ಹಾಗೂ ಇತರ ದೇಶಗಳಲ್ಲಿಯೂ ಈ ಜಮಾಅತ್ತನ್ನು ಕಂಡೆ. ಈರ್ವ Anthorolgist ಆದ ನೆಲೆಯಲ್ಲಿ ಜಮಾಅತಿನ ಕಲ್ಯಾಣಕಾರಿ ಯೋಜನೆಗಳಲ್ಲಿ ವಿಶೇಷವಾಗಿ Humanity first (ಮಾನವೀಯತೆ ಮೊದಲು) ನಲ್ಲಿ ತುಂಬ ಆಸಕ್ತಿ ವಹಿಸುತ್ತಿದ್ದೇನೆ ಮತ್ತು ಈ ಜಮಾಅತಿನ ಆಧ್ಯಾತ್ಮಿಕದಾಹ ಹಾಗೂ ಕಲ್ಯಾಣಕಾರಿ ಕಾರ್ಯಗಳಲ್ಲಿ ಭಗವಹಿಸಿ ನಡೆಯುವುದು ಘನತೆಯ ಕಾರ್ಯವಾಗಿದೆ. ಆದ್ದರಿಂದಲೇ ನನಗೆ ಖಲೀಫರ ಉಪಸ್ಥಿತಿಯಲ್ಲಿ ಇಂದು ಈ ಸಮಾರಂಭದಲ್ಲಿ (ಜಲ್ಸದಲ್ಲಿ) ಭಾಗವಹಿಸಿದ್ದರೆ ತುಂಬ ಸಂತೋಷವಾಗುತ್ತಿದೆ. ಬೋರ್ಕಿನೋ ಫಾಸೊದಲ್ಲಿ ಮುದ್ರಣೆಗೊಳ್ಳುತ್ತಿರುವ ನನ್ನ ಒಂದು ಪುಸ್ತಕ ಅದರ ಒಂದು ಅಧ್ಯಾಯ ಅಹ್ಮದಿಯಾ ಜಮಾಅತ್ ಕುರಿತಾಗಿದೆ. ಬಹುಶಃ ನಿಮಗೆ ಮೆಚ್ಚುಗೆಯಾಗಬಹುದು ಎಂದು ಭಾವಿಸುತ್ತೇನೆ.

ಹುಝೂರ್ ಅನ್ವರ್ (ಅಬಿಅ) 6 ಗಂಟೆ 53 ನಿಮಿಷಕ್ಕೆ ಇಂಗ್ಲೀಷ್ ಭಾಷೆಯಲ್ಲಿ ಸಂಬೋಧಿಸಿದರು. ಅದರ ಉರ್ದು ಅನುವಾದ ಪ್ರಸ್ತುತವಾಗಿದೆ.

ಹುಝೂರ್ ಅನ್ವರ್ (ಅಬಿಅ) ರವರ ಸಂಶೋಧನೆ ತಶಹುದ್ ತೂಝ್, ತಸ್ಮಿಯಾ ನಂತರ ಹುಝುರ್ ಹೇಳಿದರು. ನಿಮ್ಮೆಲ್ಲರ ಮೇಲೆ ಅಲ್ಲಾಹನ ಅನುಗ್ರಹ ಹಾಗೂ ಶಾಂತಿಯಿರಲಿ, ಮೊಟ್ಟ ಮೊದಲಾಗಿ ನಾನು ಎಲ್ಲ ಅತಿಥಿಗಳಿಗೆ ಕೃತಜ್ಞತೆಯನ್ನು ಅರ್ಪಿಸಬಯಸುತ್ತೇನೆ. ಅವರು ಓರ್ವ ಮುಸ್ಲಿಂ ಸಮುದಾಯದಿಂದ ಆಯೋಜಿಸಲ್ಪಟ್ಟ ಓರ್ವ ಧಾರ್ಮಿಕ ಸಮಾರಂಭದಲ್ಲಿ ಭಾಗವಹಿಸಿದ್ದಾರೆ. ಪ್ರಸಕ್ತ ಕೆಲ ವರ್ಷಗಳಲ್ಲಿ ಕೆಲವು ನಾಮಧಾರಿ ಮುಸ್ಲಿಂ ಸಂಘಟನೆಗಳು ಬರ್ಬತೆ ಮತ್ತು ಹಿಂಸೆಯನ್ನು ಫ್ರಾನ್ಸ್ ಒಳಗೊಂಡು ವಿವಿಧ ದೇಶಗಳಲ್ಲಿ ನಡೆಸಿದ್ದು ತುಂಬ ದು:ಖದ ಸಂಗತಿಯಾಗಿದೆ. ಈ ತರಹದ ದೃಷ್ಕೃತ್ಯಗಳನ್ನು ಬಲವಾಗಿ ಖಂಡಿಸುತ್ತೇವೆ. ನಮ್ಮ ಪ್ರಾರ್ಥನೆಗಳು ಮತ್ತು ಅನುಕಂಪ ಆ ದೌರ್ಜನ್ಯಗಳಿಗೆ ತುತ್ತಾದ ಮುಗ್ಧರೊಂದಿಗಿದೆ.

ಹುಝೂರ್ ಅನ್ವರ್ (ಅಬಿಅ) ಹೇಳಿದರು. ಭಯೋತ್ಪಾದನೆಯೊಂದಿಗೆ ಇಸ್ಲಾಮಿತ ವಾಸ್ತವ ಶಿಕ್ಷಣದೊಂದಿಗೆ ಯಾವ ಸಂಬಂಧವೂ ಇಲ್ಲ. ಬದಲಾಗಿ ಇಸ್ಲಾಂ ಶಾಂತಿ ಪ್ರೀತಿ, ಸಹನೆ ಮತ್ತು ಮೈತ್ರೀಯ ಧರ್ಮವಾಗಿದೆ. "ಇಸ್ಲಾಂ" ಪದದ ಅರ್ಥವೇ "ಶಾಂತಿ ಮತ್ತು ಅನುಗ್ರಹ" ವಾಗಿದೆ ಆದ್ದರಿಂದ ಒಬ್ಬ ನೈಜ ಮುಸಲ್ಮಾನರೆಂದರೆ ಸ್ವಯಂ ಶಾಂತಿಪೂರ್ಣವಾಗಿರಬೇಕು ಮತ್ತು ಲೋಕದಲ್ಲಿ ಶಾಂತಿ ಹಾಗೂ ಪ್ರೀತಿ ಸ್ಥಾಪಿಸುವ ಪ್ರಯತ್ನದಲ್ಲಿರಬೇಕು. ಮುಸಲ್ಮಾನರಿಗೆ ಪ್ರಾಥಮಿಕ ಹಂತದಲ್ಲಿಯೇ ಈ ಶಿಕ್ಷಣ ನೀಡಲಾಗಿದೆ. ನೀವು ಇತರರನ್ನು ಭೇಟಿಯಾದರೆ ಅವರು ಮುಸ್ಲಿಮರಾಗಲಿ ಮುಸ್ಲಿಮೇತರಾಗಲೀ" ಅಸ್ಸಲಾಮು ಅಲೈಕುಂ" ಎಂದು ಹೇಳಿರಿ. ಅದರ ಅರ್ಥ "ನಿಮ್ಮ ಮೇಲೆ ಶಾಂತಿಯಿರಲಿ" ಎಂದಾಗಿದೆ ಭೇಟಿಯಾಗುವ ಈ ಇಸ್ಲಾಂ ವಿಧಾನ ಶಾಂತಿಯ ಸಂಕೇತವಾಗಿದೆ. ಅದು ಇತರರಿಗೆ ಶಾಂತಿ ಮತ್ತು ಪ್ರೀತಿಯ ಸಂದೇಶ ನೀಡುತ್ತದೆ. ಅಲ್ಲದೆ ನಾನು ಎಷ್ಟೋ ಮುಸ್ಲಿಮೇತರರನ್ನು ಕಂಡಿದ್ದೇನೆ. ಅವರು ತಮ್ಮ ಮುಸ್ಲಿಂ ಸ್ನೇಹಿತರೊಡನೆ ಭೇಟಿಯಾಗುವಾಗ ಅವರು ಇಸ್ಲಾಮಿ ಪದ್ಧತಿಯಂತೆ "ಅಸ್ಸಲಾಮು ಅಲೈಕುಂ" ಎಂದು ಹೇಳಿ ಭೇಟಿ ಮಾಡುತ್ತಾರೆ. ಹೀಗೆ ನಮ್ಮ ಧರ್ಮ ಪ್ರತಿಯೊಬ್ಬರ ಮೇಲೆ ಶಾಂತಿ ಹಾಗೂ ಪ್ರೀತಿ ಬಯಸುವಾಗ ಅದರ ಜೊತೆಯಲ್ಲಿ ಜನರ ವಿರೋಧದಲ್ಲಿ ಅವರ ಹಕ್ಕುಗಳನ್ನು ದಮನಸಲು ಹೇಳಲು, ಅವರ ವಿರುದ್ಧ ಸಿಡಿದೆದ್ದು ಖಡ್ಗ ಎತ್ತಲು ಸಿದ್ಧರಾಗಿರುವಂತೆ ಪ್ರೇರೇಪಿಸಲು ಸಾಧ್ಯವೇ ಇಲ್ಲ. ಈ ವಿರೋಧಾಭಾಸ ಶಿಕ್ಷಣ ಅಸಾಧ್ಯವಾಗಿದೆ. ಆದ್ದರಿಂದ ದಿಟವಾಗಿ ನೆನಪಿಡಿರಿ. ಪ್ರತಿ ನೆಲೆಯ ಉಗ್ರವಾದ, ಹಿಂಸೆ, ಉದ್ದಟತನ ಇಸ್ಲಾಮಿ ಶಿಕ್ಷಣಕ್ಕೆ ಅಪ್ಪಟ ವಿರೋಧವಾಗಿದೆ.

ಹುಝುರ್ ಅನ್ವರ್ (ಅಬಿಅ) ಹೇಳಿದರು. ಇಸ್ಲಾಮಿನ ವಾಸ್ತವ ತಿಳಿಯಲು ಇಸ್ಲಾಮಿನ ಸ್ಥಾಪಕರಾದ ಹಝ್ರತ್ ಮುಹಮ್ಮದ್ ಮುಸ್ತಫ್ (ಸ) ರವರ ಕಾಲದ ಕುರಿತು ಅಭ್ಯಸಿಸುವುದು ಅವಶ್ಯವಾಗಿದೆ. ಅವರು (ಸ) ಅಲ್ಲಾಹನ ಪ್ರವಾದಿಯಾಗುವ ದಾವೆ ಹೂಡಿದಾಗ ಅವರ ಮತ್ತು ಅವರ ಸಂಗಡಿಗರ

***(ಉಳಿದ ವರದಿ ಪುಟ ಸಂಖೆ 07 ರಲ್ಲಿ ಓದಿರಿ)***

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.